ಕರ್ತವ್ಯಲೋಪವಾಗಿರುತ್ತದೆ. ಈ ಅಂಶವನ್ನು ಮನಗಂಡು ಮುಖ್ಯೋಪಾಧ್ಯಾಯರಾದ ಶ್ರೀ ಮೊಹಮ್ಮದ್ ಮುಸ್ತಾಕ್ ಅಹಮ್ಮದ್ ಅವರನ್ನು ಹಾಗೂ ದ್ವಿತೀಯ ದರ್ಜೆ ಗುಮಾಸ್ತ ಶ್ರೀ ರಾಮು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಮುಂದಿನ ವಿಚಾರಣೆಯನ್ನು ಮಾಡಲು ನಿರ್ದೇಶನ ನೀಡಲಾಗಿದೆ.

ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಏನಾಗಿದೆಯೆಂದರೆ 16 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅರ್ಹರಲ್ಲ. ಪರೀಕ್ಷೆ ನಡೆಯುವ ದಿನಾಂಕದವರೆಗೆ ಶೇಕಡಾ 75 ರಷ್ಟು ಹಾಜರಾತಿ ಇರಬೇಕಾಗುತ್ತದೆ. ಆದರೆ ಶೇಕಡಾ 75 ರಷ್ಟು ಹಾಜರಾತಿ ಇಲ್ಲದ್ದರಿಂದ ಅವರಿಗೆ ಕೊಡಬಾರದಾಗಿತ್ತು ಆ ಪ್ರವೇಶ ಪತ್ರಗಳನ್ನು ವಾಪಸ್ ಎಸ್.ಎಸ್.ಎಲ್.ಸಿ. ಬೋರ್ಡ್‌ಗೇ ಕಳುಹಿಸಬೇಕಾಗಿತ್ತು, ಆದರೆ ಕಳುಹಿಸಿಲ್ಲ. ಕಳುಹಿಸದಿದ್ದರಿಂದ ಮುಂದೆ ಸಾರ್ವಜನಿಕರು ಒತ್ತಾಯ ಮಾಡಿದ ನಂತರ 16 ನೇಯ ತಾರೀಖು 3–00 ಗಂಟೆಗೆ 11 ಜನರಿಗೆ ಕೊಟ್ಟಿದ್ದಾರೆ. 17ನೇಯ ತಾರೀಖು, ಅಂದರೆ ಇವೊತ್ತು ಬೆಳಿಗ್ಗೆ 10–00 ಗಂಟೆಗೆ ನಾಲ್ಕು ಮಂದಿಗೆ ಕೊಟ್ಟಿದ್ದಾರೆ. ಆ ರೀತಿ ಕೊಟ್ಟಿದ್ದು ತಪ್ಪು. ಅದರಿಂದ ಅವರನ್ನು ಸಸ್ಪೆಂಡ್ ಮಾಡಲಾಗಿದೆ. ಮತ್ತೆ ಹೆಡ್ ಮಾಸ್ಟರ್‌ರವರಿಗೆ ಶೇಕಡಾ 15 ರಷ್ಟು ಅಟೆಂಡೆನ್ಸ್ ಕೊಡುವುದಕ್ಕೆ ಅಧಿಕಾರ ಇದೆ. ಅದು ಆದರೂ ಕೂಡ ಆಗುವುದಿಲ್ಲ. ವಿದ್ಯಾರ್ಥಿಗಳ ಅಟೆಂಡೆನ್ಸ್ ಬಹಳಷ್ಟು ಕಡಿಮೆ ಇರುವುದರಿಂದ ಅವರು ಪರೀಕ್ಷೆಗೆ ಕೂರಲು ಅರ್ಹರಲ್ಲ. 16 ಮಂದಿಗೆ ಪರೀಕ್ಷೆಗೆ ಕೂರುವುದಕ್ಕೆ ಅರ್ಹತೆ ಇಲ್ಲದ್ದರಿಂದ ಆ ಪರೀಕ್ಷೆಗೆ ಕೂರಲಾಗದಂತೆ ಅವರು ನೋಡಿಕೊಂಡಿದ್ದಾರೆ. ಆದರೆ ಇದು ಕೊಟ್ಟಿದ್ದು ತಪ್ಪು. ಆದರೆ ಯಾವುದೇ ರೀತಿಯಿಂದ ಎಲಿಜಬಲ್ ಇದ್ದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿಲ್ಲ. ತಪ್ಪು ಮಾಡಿದಂಥವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

9. ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ಮೇಲೆ ಚರ್ಚೆ ಮತ್ತು ಸರ್ಕಾರದ ಪ್ರತಿಕ್ರಿಯೆ (ಮುಂದು).

ಅಧ್ಯಕ್ಷರು :– ಮಾನ್ಯ ರಾಜೇಂದ್ರನ್‌ರವರೆ, ತಾವು ಮಾತನಾಡಿ. ಹತ್ತು ನಿಮಿಷದಲ್ಲಿ ಮುಗಿಸಬೇಕು. ಏಕೆಂದರೆ ಮಾತನಾಡುವ ಸದಸ್ಯರು ಇನ್ನೂ ಬಹಳಷ್ಟು ಇದ್ದಾರೆ. ದಯಮಾಡಿ ಬೇಗ ಮುಗಿಸಿ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) :– ಮಾನ್ಯ ಅಧ್ಯಕ್ಷರೆ, ಸುವರ್ಣ ಕರ್ನಾಟಕ ವಿಷಯದ ಬಗ್ಗೆ ಈಗಾಗಲೇ ಬಹಳಷ್ಟು ಮಂದಿ ಮಾತನಾಡಿದ್ದಾರೆ. ನಾನು ಈಗ ತಮ್ಮ ಮಾತಿಗೆ ಬೆಲೆ ಕೊಟ್ಟು 5 ರಿಂದ ಹತ್ತು ನಿಮಿಷದಲ್ಲಿ ನಾನು ಮಾತನಾಡಿ ಮುಗಿಸಿಬಿಡುತ್ತೇನೆ. ಏಕೆಂದರೆ ಇದರಲ್ಲಿ ಮಾತನಾಡುವಂಥದ್ದು ಏನೂ ಇಲ್ಲ. ಅಧ್ಯಕ್ಷರೆ, ತಮಗೂ ಕೂಡ ಬೆಳಿಗ್ಗೆಯಿಂದ ಎಲ್ಲರ ಭಾಷಣ ಕೇಳಿ ಕೇಳಿ ಬೋರ್ ಆಗಿರಬಹುದು. ಒಬ್ಬರು ಆ್ಯಡಂಸ್ಮಿತ್ ತೆಗೆದುಕೊಂಡರೆ ಮತ್ತೊಬ್ಬರು ಕಾರ್ಲ್‌ಮಾರ್ಕ್ಸ್ ಹೀಗೆ ಹಲವಾರು ಹೆಸರುಗಳನ್ನು ಉದಾಹರಿಸಿ ಮಾತನಾಡಿದ್ದು ಒಂದು ಕಡೆ. ಇನ್ನೊಂದು ಕಡೆ ಮಾನ್ಯ ರಾಷ್ಟ್ರಪತಿಗಳು ಏನು ಹೇಳಿದ್ದಾರೆಂದರೆ ಕೇವಲ ಸಿಟಿಗಳಿಗೇ ನೀವು ದುಡ್ಡನ್ನು ಹಂಚುತ್ತೀರಿ, ಗ್ರಾಮೀಣ ಪ್ರದೇಶಗಳಿಗೆ ಇಲ್ಲ ಎಂದು ಹೇಳಿದ್ದಾರೆ. ಇನ್ನೊಂದು ಕಡೆ ಮಣ್ಣಿನ ಮಗ, ಮಣ್ಣಿನ ಮಗ ಎಂದು ಹೇಳಿ ಅವನಿಗೆ ಏನೂ ಇಲ್ಲ. ರಾಷ್ಟ್ರಪತಿಗಳು 11 ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಅದು ಮಾಡಬೇಕೇ ಅಥವಾ ಇಲ್ಲವೇ ? ಮಾನ್ಯ ಮುಖ್ಯಮಂತ್ರಿಗಳು ಏಕೆ ಇದನ್ನು ಚರ್ಚೆಗೆ ತೆಗೆದುಕೊಂಡು ಬಂದಿದ್ದಾರೆ ಎಂದರೆ, ನಾಳೆ ಏನಾದರೂ ಒಂದು ಸ್ಕೀಂ

ಇದರಲ್ಲಿ ಮಾಡುವುದಕ್ಕೆ ಹೊರಟರೆ ಇಲ್ಲಿಯ ಸದಸ್ಯರುಗಳು ಸುಮ್ಮನೆ ಕೂಗಾಡಿ. ಅಬ್ಜೆಕ್ಷನ್ ಮಾಡಿ ತೊಂದರೆ ಕೊಡುತ್ತಾರೆಯಾದ ಕಾರಣ ಮೊದಲೇ ಇಲ್ಲಿ ಇದನ್ನು ಚರ್ಚೆ ಮಾಡಿ ಸದಸ್ಯರ ಮುಖೇನ ಒಪ್ಪಿಗೆ ಪಡೆದು ಮಾಡೋಣ ಎಂದು ಹೀಗೆ ಸದನದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಸರಿ ಸಂತೋಷ. ಹನ್ನೊಂದು ಅಂಶಗಳ ಕಾರ್ಯಕ್ರಮವನ್ನು ನೀವು ಮಾಡಿ. ಮಾನ್ಯ ರಾಷ್ಟ್ರಪತಿಗಳು ಹೇಳಿರುವುದನ್ನು ಬೇಗ ಬೇಗ ಮಾಡಿ. ಆದರೆ ಅದನ್ನು ನೀವು ಮಾಡಬೇಕಲ್ಲಾ, ಅದನ್ನು ನೀವು ಮಾಡುತ್ತೀರಾ ? ಆ ಬಗ್ಗೆ ಮೊದಲು ನೀವು ನಮಗೆ ಭರವಸೆಯನ್ನು ಕೊಡಬೇಕು. ನಾನು ಏಕೆ ಇದನ್ನು ಕೇಳುತ್ತಿದ್ದೇನೆಂದರೆ ಮುಖ್ಯಮಂತ್ರಿಗಳೇ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ, ತಾವು ಯೋಚನೆ ಮಾಡಿ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೆ ಎಂಬುದನ್ನು ಹೇಳುತ್ತೇನೆ. ಒಮ್ಮೆ ಒಬ್ಬರು ಇನ್ಸ್‌ಪೆಕ್ಟರ್ ಒಂದು ಸ್ಕೂಲ್‌ಗೆ ಇನ್ಸ್‌ಪೆಕ್ಷನ್‌ಗೆ ಬಂದರು. ಒಂದು ಕ್ಲಾಸ್‌ನಲ್ಲಿ ಒಬ್ಬ ವಿದ್ಯಾರ್ಥಿಗೆ ಪ್ರಶ್ನೆ ಹಾಕಿ ಶಿವಧನಸ್ಸನ್ನು ಹೊಡೆದವರು ಯಾರು ಎಂದು ಕೇಳಿದರು. ಆಗ ವಿದ್ಯಾರ್ಥಿ ನಾನು ಹೊಡೆದಿಲ್ಲ ಸಾರ್, ನಾನು ಹೊಡೆದಿಲ್ಲ ಸಾರ್ ಎಂದು ಕೇಳಿದ. ಆಗ ಇನ್ಸ್‌ಪೆಕ್ಟರ್, ಏನಪ್ಪಾ ಇವನು ಈ ರೀತಿ ಉತ್ತರ ಕೊಡುತ್ತಿದ್ದಾನೆ, ಮಾಸ್ಟರ್ ಸರಿಯಾಗಿ ಇವನಿಗೆ ಹೇಳಿಕೊಟ್ಟಿದ್ದಾನೋ ಇಲ್ಲವೋ ಎಂದು ಮಾಸ್ಟರನ್ನೇ ಕೇಳುತ್ತಾರೆ. ಮಾಸ್ಟರ್ ಎಂದರೆ ಎಕ್ಸಿಕ್ಯೂಟಿವ್. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಕ್ಸಿಕ್ಯುಟಿವ್ ಇಲ್ಲವೇ ಆ ರೀತಿ. ಇನ್ಸ್‌ಪೆಕ್ಟರ್ ಮಾಸ್ಟರ್‌ನ್ನೇ ಮಾತನಾಡಿಸಿ; 'ಏನಪ್ಪಾ ನಿನ್ನ ವಿದ್ಯಾರ್ಥಿ ನಾನು ಧನಸ್ಸು ಹೊಡೆದಿಲ್ಲ ಎಂದು ಹೇಳುತ್ತಾನೆ, ನೀವೇನು ಹೇಳುತ್ತೀರಿ' ಎಂದು ಕೇಳಿದರೆ ಅದಕ್ಕೆ ಮಾಸ್ಟರ್ ಉತ್ತರಿಸುತ್ತಾ ' ಸ್ವಾಮಿ ನಾನು ನಿನ್ನೆತಾನೇ ಇಲ್ಲಿಗೆ ಟ್ರಾನ್ಸ್‌ಫರ್ ಆಗಿ ಬಂದಿದ್ದೇನೆ. ನನಗೆ ಗೊತ್ತೇ ಇಲ್ಲಾ ಯಾರು ಹೊಡೆದಿದ್ದು' ಎಂದು ಹೇಳುತ್ತಾನೆ. ತಕ್ಷಣ ಇನ್ಸ್‌ಪೆಕ್ಟರ್‌ಗೆ ಬಹಳ ಕೋಪ ಬಂದುಬಿಟ್ಟಿತು. ' ಏನು ಇಲ್ಲಿ ಮಾಸ್ಟರ್ ಹಾಗೂ ವಿದ್ಯಾರ್ಥಿ ಒಂದೇ ತರಹ ಹೇಳುತ್ತಾರೆ ಎಂದು ನೇರವಾಗಿ ಹೆಡ್ ಮಾಸ್ಟರ್ ಹತ್ತಿರ ಹೋಗಿ,' ಏನ್ರಿ ನಿಮ್ಮ ಸ್ಟೂಡೆಂಟ್ ಈ ರೀತಿ ಹೇಳುತ್ತಾನೆ, ನಿಮ್ಮ ಮೇಷ್ಟ್ರು ಈ ರೀತಿ ಹೇಳುತ್ತಾನೆ; ಏನ್ ಸ್ಕೂಲ್ ನಡೆಸುತ್ತಿದ್ದೀರಿ ನೀವು, ಏನ್ ಸಮಾಚಾರ ಎಂದು ಕೇಳಿದಾಗ ಹೆಡ್ ಮಾಸ್ಟರ್ ಯಾವುದರ ಬಗ್ಗೆ ಸಾರ್ ಎಂದು ಕೇಳಿದಾಗ ಆ ಇನ್ಸ್‌ಪೆಕ್ಟರ್ ಧನುಸ್ಸು ಹೊಡೆದುದ್ದು ಯಾರು ಎಂದು ಕೇಳಿದರೆ ವಿದ್ಯಾರ್ಥಿ ನಾನಲ್ಲ ಎಂದು ಹೇಳುತ್ತಾನೆ, ಮೇಷ್ಟ್ರು ನಾನು ನಿನ್ನೆತಾನೆ ಟ್ರಾನ್ಸ್‌ಫರ್ ಆಗಿ ಇಲ್ಲಿ ಬಂದಿದ್ದೇನೆ ಎನ್ನುತ್ತಾನೆ. ' ನೀವು ಇದಕ್ಕೆ ಏನು ಹೇಳುತ್ತೀರಿ ಎಂದಾಗ ಆ ಹೆಡ್ ಮಾಸ್ಟರ್ ಹೇಳುತ್ತಾನೇ ಸ್ವಾಮಿ ಏಕೆ ಇದರ ಬಗ್ಗೆ ಗೊಂದಲ ಮಾಡಿಕೊಳ್ಳುತ್ತೀರಿ ಸಾರ್. ಎಷ್ಟು ಕಾಸ್ಟ್ ಆಗುತ್ತದೆ ಹೇಳಿ, ನಾನು ಪರ್ಚೇಸ್ ಮಾಡಿ ತಂದುಕೊಡುತ್ತೇನೆ' ಎಂದು ಹೇಳುತ್ತಾನೆ. ಇಂಥ ಸ್ಕೂಲ್ ಯಾವಾಗ ಮೇಲಕ್ಕೆ ಬರುವುದು?. ಆ ರೀತಿಯಲ್ಲಿ ಈ ಕರ್ನಾಟಕ ಯಾವಾಗ ಮೇಲೆ ಬರುವುದು? ನಿಜವಾಗಲೂ ಹೇಳುತ್ತೇನೆ. ತಾವು ಹನ್ನೊಂದು ಅಂಶಗಳನ್ನು ಇಂಪ್ಲಿಮೆಂಟ್ ಮಾಡಿದರೆ you will get a very good name, no doubt. ಈ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾನ್ಯ ರಾಷ್ಟ್ರಪತಿಗಳು ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಕಳೆದ ಬಜೆಟ್ ನಲ್ಲಿ ಕೇವಲ 6 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದು. ಈಗ 600 ಕೋಟಿ ರೂಪಾಯಿಗಳನ್ನು ಇಡಬೇಕಾಗುತ್ತದೆ. ಸಂತೋಷ ಇದು ಬೇರೆ ಯಾರೋ ಕೊಟ್ಟಿರುವ ಫಿಗರ್ಸ್ ಇದಲ್ಲ. ಇದು ಮಾನ್ಯ ರಾಷ್ಟ್ರಪತಿಗಳು ಹೇಳಿರುವುದು. ಅವರಿಗೆ ಗೌರವ ಕೊಡಬೇಕಾದ್ದು

ಕೊಡಬೇಕು. ಸಂತೋಷ, ಕರ್ನಾಟಕ ರಾಜ್ಯದಲ್ಲಿ ಎಲ್ಲರಿಗೂ ಕೆಲಸವನ್ನು ಕೊಡಿ, ಡೆವಲಪ್ ಮಾಡಿ. ನಾವು ಬೇಡ ಎನ್ನುವುದಿಲ್ಲ. ಆದರೆ ನಿಮ್ಮ ಅಧಿಕಾರಿಗಳು ಈ ರೀತಿಯಲ್ಲಿ ಕೆಲಸ ಮಾಡಬೇಕಲ್ಲಾ. ಮಾತು ಎತ್ತಿದರೆ ಸಾಕು Parliament and Legislature is supreme. ಎನ್ನುವುದು ಏನಿದೆ ಅದು ಸತ್ಯಾಂಶ, ಅದು ಸುಪ್ರೀಂ. ನಾವು ಏನಾದರೂ ಚರ್ಚೆ ಮಾಡಿ ಅವರು ಮಾಡಿರುವ ಕೆಲಸಗಳನ್ನೆಲ್ಲಾ ನೋಡಿ ಬ್ಯೂರೋಕ್ರಾಟ್ಸ್ ಬಗ್ಗೆ ನಿಮ್ಮ ನೋಟಿಸ್‌ಗೆ ತೆಗೆದುಕೊಂಡು ಬಂದರೆ ಅದು ಡಸ್ಟ್‌ಬಿನ್‌ಗೆ ಹೋಗುತ್ತದೆ. Where as judiciary it is in Second position. ಅವರು ಈಗಲೇ ಹೋಗಿ ಅಲ್ಲಿ ಕೋರ್ಟ್ ಕೇಸ್ ಹಾಕಿದರೆ ತಕ್ಷಣ ಅರೆಸ್ಟ್ ವಾರೆಂಟ್ ಕೊಡುತ್ತಾರೆ, ಅವೊತ್ತು ಈ ಎಲ್ಲಾ ಬ್ಯೂರೋಕ್ರಾಟ್ಸ್‌ಗೆ ಭಯ ಬರುತ್ತದೆ. Why can't you take policy? ಯಾವಾಗಲಾದರೂ ನಾವು ನಿಮ್ಮ ನೋಟಿಸ್‌ಗೆ ತೆಗೆದುಕೊಂಡು ಬಂದರೆ ಆಗ ಅವರಿಗೆ ಶಿಕ್ಷೆ ಕೊಡಿ. You impose one punishment for them. ತಾವು ಮಾಡುವುದಕ್ಕಾಗುತ್ತದೆಯೇ? ಅದನ್ನು ಮಾಡುವುದಕ್ಕೆ ಆಗಲಿಲ್ಲ ಎಂದರೆ ಈಗ ಇಲ್ಲಿ ಹೇಳಿರುವುದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಇದು ಸತ್ಯಾಂಶ. ಮಾನ್ಯ ಪ್ರೆಸಿಡೆಂಟ್ ಅವರು ಹೇಳಿದ್ದಾರೆ ಎಂದು ತಾವು ಆಶ್ವಾಸನೆ ಕೊಡುತ್ತೀರಿ. ತಾವು ಯೋಚನೆ ಮಾಡಿ. ಇಂಡಸ್ಟ್ರೀಯನ್ನು ಮಾಡ್ರನೈಸೇಶನ್ ಮಾಡಿ ಡೆವಲಪ್ ಮಾಡಲಾಗುವುದು ಎಂದು ಹೇಳಿ ಭರವಸೆಯನ್ನು ಒಂದು ವರ್ಷದ ಹಿಂದೆಯೇ ಈ ಸದನದಲ್ಲಿ ಕೊಡಲಾಗಿದೆ. ಆದರೆ ಇನ್ನೂ ಮಾಡ್ರನೈಸೇಶನ್ ಆಗಿಲ್ಲ. ಮಾಡ್ರನೈಸ್ ಅಂಶಗಳೇ ಸಿಗಲಿಲ್ಲವೇ ಅಥವಾ ಆ ರೀತಿ ಮಾಡುವುದಕ್ಕೆ ನಿಮಗೆ ಇಂಟರೆಸ್ಟ್ ಇಲ್ಲವೇ? ಇದರ ಬಗ್ಗೆ ನಾವು ಬುಕ್‌ಲೆಟ್ ಮಾಡಿ, ಚರ್ಚೆ ಮಾಡಿದರೂ ಇದಕ್ಕೆ ಏನು ಮಾಡಿದ್ದೀರಿ? ಲೆಜಿಸ್ಲೇಚರ್‌ನಲ್ಲಿ ಚರ್ಚೆ ಮಾಡುವುದು ಏತಕ್ಕೆ? ನಿಮ್ಮ ಮೇಲೆ ಇರುವ ಗೌರವ. ಅದು ಇಂಪ್ಲಿಮೆಂಟ್ ಆಗಬೇಕೋ, ಅಥವಾ ಇಲ್ಲವೋ? ಆಗುವುದೇ ಇಲ್ಲವೇ? ಈಗ ಕುಡಿಯುವ ನೀರಿನ ಬಗ್ಗೆ ತಾವು ಹೇಳಿದಿರಿ. ಹಾಗೆಯೇ ಹಾಸ್ಪಿಟಲ್, ಅದೇ ರೀತಿ ಯಾವ ಯಾವ ಜಾಗಗಳು ಇಂಥ ಕಡೆ ಇದೆ ಅಲ್ಲೆಲ್ಲಾ ನಾವು ಬಹಳ ಕ್ಲಿಯರ್ ಆಗಿ, ಗಂಭೀರವಾಗಿ, in hospitals, industrial establishments, and in some institutions through comprehensive water harvesting policy ಮಾಡಬೇಕೆಂದು ಕೊಟ್ಟಿದ್ದೀರಿ. ಸಂತೋಷ ಮಾಡಿ. ಆದರೆ ಹಾಸ್ಪಿಟಲ್ ಆ ರೀತಿ ಇರಬೇಕಲ್ಲಾ ? ಹಾಸ್ಪಿಟಲ್ ಇದ್ದರೂ ಅದರಲ್ಲಿ ಡಾಕ್ಟರ್‌ಗಳು ಇರಬೇಕಲ್ಲಾ, ಅಲ್ಲಿ ಪೇಶೆಂಟ್ ಇರಬೇಕಲ್ಲಾ ? ಈಗಿರುವ ಪರಿಸ್ಥಿತಿಯಲ್ಲಿ ಎಲ್ಲಿ ಹಾರ್ವೆಸ್ಟ್ ಮಾಡುತ್ತೀರಿ ನೀವು ? ಈಗ ನಮ್ಮ ಕಡೆ ಜನರಲ್ ಆಸ್ಪತ್ರೆ ಇದೆ. ನೀವು ಬಂದು ಚೆಕ್ ಮಾಡಿನೋಡಿ. ಅಲ್ಲಿ ಎತ್ತರ ಇದೆ, ಕಾಂಪೌಂಡೇ ಇಲ್ಲ, ಅಲ್ಲೇನು ನೀವು ಹಾರ್ವೆಸ್ಟ್ ಮಾಡುತ್ತೀರಿ ? That is why I am bringing to the notice of the Hon;ble Chief Minister, You can become a revolutionary Chief Minister of this State. ಮಾಡಿ, ಒಳ್ಳೆಯ ಹೆಸರು ಸಿಗುತ್ತದೆ. ರೆವಲ್ಯೂಶನ್ ಮಾಡಿ. ಯಸ್, ತಮ್ಮ ಕಾಲದಲ್ಲಿ 15 ದಿವಸಗಳೊಳಗೆ ಯಾವ ಅಧಿಕಾರಿ ಕೊಟ್ಟ ಕೆಲಸವನ್ನು ಮಾಡುವುದಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ. ಆ್ಯಕ್ಷನ್ ತೆಗೆದುಕೊಳ್ಳಿ, ಏಕೆ ಇದನ್ನು ಮಾಡಲಿಲ್ಲ ಎಂದು ಕೊಶ್ಚನ್ ಮಾಡಿ. ಈಗ ಕರೆಕ್ಟ್ ಆಗಿ ಇದರ ಬಗ್ಗೆ ಹೇಳುವುದಿಲ್ಲ ಎಂದರೆ, ಸುಮ್ಮನೆ ನಾವು ಇಲ್ಲಿ ಭಾಷಣ ಮಾಡಿಬಿಟ್ಟು ಹೊರಗಡೆ ಹೋಗಬೇಕಾಗಿದೆ. ಬೇರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

What is the use ? The executives will not work; the bureaucrats will not bother. Then, how you are going to implement ಅಂತಿಮವಾಗಿ ನಾಳೆ ಚುನಾವಣೆ ಬಂದರೆ ತಮಗೆ ಕೆಟ್ಟ ಹೆಸರು ಬರುತ್ತದೆ. ಅವರು ಆರಾಮಾಗಿ ಕುಳಿತುಕೊಂಡಿರುತ್ತಾರೆ. ಇನ್ನೊಬ್ಬರು ಚೀಫ್ ಮಿನಿಸ್ಟರ್ ಬಂದರೆ ಅವರ ಪಕ್ಕದಲ್ಲಿ ಹೋಗುತ್ತಾರೆ. ಇದರ ಬಗ್ಗೆ ಚಿಂತನೆ ಮಾಡಿ ಸಾರ್. ನಾನು ಟೀಕೆ ಮಾಡುವುದಿಲ್ಲ. When you implement this, definitely you will get a good name. ಇಂತಹ ಪ್ರೋಗ್ರಾಂ ಎಲ್ಲಾ ಆಗಿ ಫಾಸ್ಟ್ ಆಗಿ ಮಾಡಬೇಕು. ಈಗ ಮಾನ್ಯ ವೈಜನಾಥ್ ಪಾಟೀಲ್‌ರವರು ಮಾತನಾಡುವಾಗ ಹೇಳಿದರು, ಮಾನೋ ರೈಲು ಮೆಟ್ರೋ ರೈಲು ಎಂದು ನೀವು ಫೈಟ್ ಮಾಡಿಕೊಂಡಿದ್ದೀರಿ ಎಂದು. ಯಾವುದಕ್ಕೆ ಫೈಟ್ ಮಾಡುವುದು? ನಮ್ಮ ಫಾರ್ಮರ್ ಚೀಫ್ ಮಿನಿಸ್ಟರ್ ಒಂದು ಸ್ಟೇಟ್‌ಮೆಂಟ್ ಕೊಟ್ಟರು. ನಾವು ಮಾನೋ ರೈಲು ಇಂಪ್ಲಿಮೆಂಟ್ ಮಾಡುವಂತಹ ಸಮಯದಲ್ಲಿ ನಮಗೆ ಅಡ್ಡ ಬಂದರು. ಈಗ ಏಕೆ ಅಡ್ಡ ಬಂದಿಲ್ಲ. ಎಂದು ನಾನು ಇದರ ಮೇಲೆ ಚರ್ಚೆ ಮಾಡುವುದಕ್ಕೆ I am not interested, because it is a fact. ಹೀಗೆ ನಾವು ಅಡ್ಡ ಬರುವುದೇ ಇಲ್ಲ. ಇದನ್ನು ಟೈಂ ಲಿಮಿಟ್‌ನಲ್ಲಿ ಇಂಪ್ಲಿಮೆಂಟ್ ಮಾಡುತ್ತೀರಾ ? ಇಷ್ಟು ಸಮಯದ ಒಳಗೆ ಇದನ್ನು ಮುಗಿಸುತ್ತೇವೆಂದು ನಿಗದಿ ಮಾಡುತ್ತೀರಾ ? ನಾವು ಬರೀ ಚರ್ಚೆ ಮಾಡುತ್ತೇವೆ ಅಷ್ಟೆ ನಿಮಗೆ ಅಡ್ಡ ಬರುವುದಿಲ್ಲ. ಅದನ್ನು ಮಾಡುವುದಕ್ಕಾಗುತ್ತದಾ ? ಇದನ್ನೆಲ್ಲಾ ನಾವು ಮಾಡಿದರೆ ನಿಜವಾಗಿ ನಾವು ಸನ್ಮಾನ್ಯ ರಾಷ್ಟ್ರಪತಿಗೆ ಕೊಡುವಂತಹ ಗೌರವವಾಗಿರುತ್ತದೆ. ಇಲ್ಲವೆಂದರೆ ಮಾನ್ಯ ರಾಷ್ಟ್ರಪತಿಯವರ ಹೆಸರು ಹೇಳಿಕೊಂಡು ನಾವು ಸುಮ್ಮನೆ ಟೂರಿಸಂ ಡೆವಲಪ್‌ಮೆಂಟ್ ಎಂದೆಲ್ಲಾ ಹೇಳಿ ಕಾಲ ಕಳೆಯಬೇಕಾಗುತ್ತದೆ. ಇನ್ನೂ ಪೇಜ್ ನಂಬರ್ 23 ಅನ್ನು ನೋಡಿ ಇದನ್ನು ಅಧಿಕಾರಿಗಳು ಮಾಡಿದ್ದಾರಯೇ ಅಥವಾ ಪ್ರೆಸಿಡೆಂಟ್‌ರವರ ಸೆಕ್ರೆಟರಿಗಳು ಮಾಡಿದ್ದಾರೆಯೇ ನೋಡಿ, ಬೇಲೂರು, ಮೈಸೂರು ಪ್ಯಾಲೇಸ್, ಬೀದರ್ ಫೋರ್ಟ್, ಶ್ರೀರಂಗಪಟ್ಟಣ, ಬಂಡೀಪುರ್ ವೈಲ್ಡ್‌ಲೈಫ್ ಸ್ಯಾಂಕ್ಚುಯರಿ, ವೈಟ್ ವಾಟರ್ ರ್‍ಯಾಫ್ಟಿಂಗ್, ಕುದುರೆ ಮುಖ, ನದಿ ಹಿಲ್ಸ್ ಅದು ಕರ್ನಾಟಕದಲ್ಲಿ ಎಲ್ಲಿದೆ ಎಂಬುದು ಗೊತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು :- ಅದು ನಂದಿ ಹಿಲ್ಸ್ ಇರಬೇಕು.

ಶ್ರೀ ಎಸ್. ರಾಜೇಂದ್ರನ್ :- ಎಲ್ಲಿ ನಂದಿ ಎಂದು ಹಾಕಿದ್ದಾರೆ ಓದಿ ಸಾರ್. ನಾನೇನು ಗೂಬೇನಾ ? ನಾನು ಮಾತನಾಡುವುದು ಕೇಳಿ. What is the carelessness of this ? ಇದು ರಾಷ್ಟ್ರಪತಿಗಳ ಬುಕ್, ಅದರಲ್ಲಿ ಎನ್, ಎ, ಡಿ, ಹೆಚ್, ಐ. ಅಂತ ಇದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಒಂದೊಂದು ಸ್ಪೆಲಿಂಗ್ ಮಿಸ್ಟೇಕ್ ಆಗಿರುವುದನ್ನೆಲ್ಲಾ ಇವರು ಇಟ್ಟುಕೊಂಡು ಹೇಳುತ್ತಿದ್ದಾರೆ. ಅದನ್ನು ಮಾಡುವಂತಹ ಸಂದರ್ಭದಲ್ಲಿ ಸ್ಪೆಲಿಂಗ್ ಮಿಸ್ಟೇಕ್ ಆಗುವುದು ಸಹಜ. ನಡೆಯುವ ಮನುಷ್ಯ ಎಡವದೆ, ಕುಳಿತಿರುವ ಮನುಷ್ಯ ಎಡವುದಕ್ಕಾಗುತ್ತದೆಯೆ ? ಯಾವುದೋ ಒಂದು ಲೆಟರ್ ಹೆಚ್ ಅಥವಾ ಐ ಬಿಟ್ಟಿರುವುದನ್ನು ಇವತ್ತು ಇವರು ಅದನ್ನು ಹೇಳುವುದಾದರೆ, ಸಣ್ಣಸಣ್ಣದನ್ನೆಲ್ಲಾ ದೊಡ್ಡದು ಮಾಡುವುದಾದರೆ...

SRI S. RAJENDRAN :- Don't waste time. ಮಾನ್ಯ ಸ್ಪೀಕರ್‌ಗೆ ನಿಮ್ಮ ಮೇಲೆ ಕೋಪ ಬರುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಇಂತಹದ್ದೆಲ್ಲಾ ಒಳ್ಳೆಯದಲ್ಲ.

ಅಧ್ಯಕ್ಷರು :– ರಾಜೇಂದ್ರನ್‌ರವರೇ ತಾವು ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ್ :– ನೀವು ಕನ್ನಡ ಭಾಷೆ ಮಾತನಾಡುತ್ತಿರುವುದು ಸರಿ ಇದೆಯಾ ?

ಒಬ್ಬರು ಮಾನ್ಯ ಸದಸ್ಯರು :– ತಾವು ಮಾತನಾಡುತ್ತಿರುವಂತಹ ಭಾಷೆಯಲ್ಲಿ ಎಷ್ಟು ತಪ್ಪು ಇದೆ. ಗೊತ್ತೇ ?

ಶ್ರೀ ಎಸ್. ರಾಜೇಂದ್ರನ್ :– ನೀವು ಹೇಗೆ ಹೇಳುತ್ತಿದ್ದೀರಿ ಎಂದರೆ, ನಾವು ಸರಿ ಇಲ್ಲ, ಆದುದರಿಂದ ನೀವು ಸರಿ ಇರಬಾರದೆಂದು ಹೇಳುವುದು. ನಾನು ಸರಿ ಇಲ್ಲ ಸ್ವಾಮಿ, ನಿಮ್ಮ ಅಧಿಕಾರಿಗಳು...

ಶ್ರೀ ಹೆಚ್.ಸಿ. ಬಾಲಕೃಷ್ಣ :– ನೀವು ಸರಿ ಇದ್ದೀರಿ, ನಾವೇ ಸರಿ ಇಲ್ಲ ಸ್ವಾಮಿ ಹೇಳಿ

ಶ್ರೀ ಎಸ್. ರಾಜೇಂದ್ರನ್ :– ನಾನು ಏನು ಹೇಳುತ್ತೇನೆ ಅಂದರೆ ಬ್ಯುರೋಕ್ರಾಟ್ಸ್ ಕೆಲಸನಾ ಇದು ? ನಿಮ್ಮ ಕೆಲಸವೇ ಇದು, ನೀವು ಮಾಡಿದ್ದೀರಾ ಅದು ? ನೀವು ಯಾರಾದರೂ ಕುಳಿತುಕೊಂಡು ಇದನ್ನು ಡ್ರಾಫ್ಟ್ ಮಾಡಿದ್ದೀರಾ ಮೊದಲು, ಅರ್ಥ ಮಾಡಿಕೊಳ್ಳಿ, ಇದನ್ನು ಯಾರು ಮಾಡಿರುವುದು ? Who has done ? ಏನೋ ಒಂದು ಸ್ಪೆಲಿಂಗ್ ಮಿಸ್ಟೇಕ್ ಎಂಬುದು ಅದು ನಮಗೂ ಗೊತ್ತಿದೆ ನಿಮಗೆ ಒಂದು ಎಗ್ಸಾಂ ಕೊಡುತ್ತಾರೆ ಪ್ರಮೋಷನ್ ಕೊಡಬೇಕಾದರೆ, ಇಂಡಿಯಾ ಈಜ್ ಅವರ ಕಂಟ್ರಿ ಎಂದು ಬರೆಯಿರಿ ಎಂದರೆ ಒಂದು ಸ್ಪೆಲಿಂಗ್ ಮಿಸ್ಟೇಕ್ ಮಾಡಿ ಎನ್ ಬಿಟ್ಟರೆ ಆಗ ಐಡಿಯಾ ಈಜ್ ಅವರ ಕಂಟ್ರಿ ಎಂದು ಬರೆಯುತ್ತೀರಾ ? ಅದಕ್ಕೆ ನಿಮಗೆ ಮಾರ್ಕ್ಸ್ ಕೊಡಬೇಕಾ? ನಾವು ಏನು ಹೇಳುತ್ತೇನೆಂಬುದನ್ನು ಅರ್ಥ ಮಾಡಿಕೊಳ್ಳಿ ಇದನ್ನು ಸಬ್‌ಮಿಟ್ ಮಾಡಿದಿರಿ. ಅದರಲ್ಲಿ ನದಿಹಿಲ್ಸ್ ಎಂದಿದೆ. ನಂದಿಹಿಲ್ಸ್ ನಮಗೂ ಗೊತ್ತಿದೆ. ಅದು ದೇವನಹಳ್ಳಿ ಪಕ್ಕದಲ್ಲಿ ಇದೆ. ಆದರೆ ಏಕೆ ಹೀಗೆ ಆಗಿದೆ ಎಂದು ಕೇಳಿದ್ದು. ಈಗ ರಾಜ್ಯಸಭಾ ಎಲೆಕ್ಷನ್‌ನಲ್ಲಿ ಒಬ್ಬರದ್ದು ಇನಿಷಿಯಲ್ ಬಿಟ್ಟು ಬೇರೆ ಇನಿಷಿಯಲ್ ಹಾಕಿದರೆ ಅದನ್ನು ಆಕ್ಸೆಪ್ಟ್ ಮಾಡುತ್ತಾರಾ ? ಇದೆಲ್ಲಾ ಅಲ್ಲ, ಸುಮ್ಮನಿರಿ.

ಶ್ರೀ ಕೆ. ಚಂದ್ರಶೇಖರ್ :– ಮಾನ್ಯ ಮುಖ್ಯಮಂತ್ರಿಗಳು ಒಂದು ಕಡತದಲ್ಲಿ 'ನೋಟ್ ಅಪ್ರೂವ್ಡ್ ' ಎಂದು ಮಾಡಿದರು. ಅದನ್ನು ಅಧಿಕಾರಿ 'ನಾಟ್' ಅಪ್ರೂವ್ಡ್ ಎಂದು ಒಂದು ಅಕ್ಷರದಲ್ಲಿ ಮಿಸ್ಟೇಕ್ ಮಾಡಿಕೊಳ್ಳಬಹುದಾ ? ಹಾಗಾಗಿ Spelling also plays its own role. ಅಷ್ಟು ಸರಳವಾಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಅದನ್ನು. ಮುಖ್ಯಮಂತ್ರಿಗಳು ನೋಟ್ ಅಪ್ರೂವ್ ಎಂದು ಕೊಟ್ಟರೆ, ಅದನ್ನು ಒಬ್ಬ ಅಧಿಕಾರಿ ನಾಟ್ ಅಪ್ರೂವ್ ಎಂದು ಬರೆದರು. ಈ ತರಹದ ಒಂದು ಸ್ಪೆಲಿಂಗ್ ಎಷ್ಟು ಕಾರಣವಾಗುತ್ತದೆ ನೋಡಿ. You can't take and lightly even the spelling also. Come on, Rajendran.

ಶ್ರೀ ಹೆಚ್. ಸಿ ಬಾಲಕೃಷ್ಣ :– ನೋಟ್ ಅಪ್ರೂವ್‌ನಲ್ಲಿ 'ಇ' ಹೊಡೆದು ಹಾಕಿದರಾ ಅಧಿಕಾರಿ? ಬರೀ ಬಾಯಿ ಚಪಲ ತೀರಿಸಿಕೊಳ್ಳುವುದಕ್ಕೆ ಇದನ್ನೆಲ್ಲಾ ಹೇಳಬಾರದು

ಅಧ್ಯಕ್ಷರು :– ಟೈಂ ಆಯಿತು, ಬೇಗ ಮಾತನಾಡಿ. ಮುಗಿಸಿ.

ಶ್ರೀ ಎಸ್. ರಾಜೇಂದ್ರನ್ :- ಮಾನ್ಯ ಅಧ್ಯಕ್ಷರೆ, ನನಗೆ ರಕ್ಷಣೆ ಕೊಡಿ, ಇವರನ್ನೆಲ್ಲಾ ಕುಳಿತುಕೊಳ್ಳಿ ಎಂದು ಹೇಳಿ. ನೋಡಿ ಎಷ್ಟು ಡಿಸ್ಟರ್ಬೆನ್ಸ್ ನೋಡಿ. ನಾನು ಇನ್ನು ಪ್ರಾರಂಭವನ್ನೇ ಮಾಡಿಲ್ಲ. ಇನ್ನೂ ನಮಸ್ಕಾರ ಹೇಳಿದ್ದೇನೆ, ಸ್ವಾಮಿ ಒಂದು ತಪ್ಪಾಗಿದೆ ಎಂದು ಹೇಳಿದ್ದೇನೆ, ಇಷ್ಟೇ ನಾನು ಹೇಳಿರುವುದು. ಇನ್ನು ಮೂರು ಸೆಕೆಂಡ್ ಮಾತ್ರ ಆಗಿದೆ. ಇನ್ನು ಗೈಡುಗಳು ಅವರಿಗೆ ಬೇರೆ ಲಾಂಗ್ವೇಜ್‌ನಲ್ಲಿ ತಮಿಳು, ತೆಲುಗು, ಮರಾಠಿ, ಇದೆಲ್ಲಾ ಭಾಷೆಯಲ್ಲಿ ಇಂಪ್ರೂವ್‌ಮೆಂಟ್ ಮಾಡಬೇಕು. ಆ ಗೈಡು ತಮಿಳು, ತೆಲುಗು ಮತ್ತು ಮರಾಠಿ ಭಾಷೆಯಲ್ಲಿ ಯಾರಿಗೆ ಹೇಳುತ್ತಾನೆ ? ಅವನಿಗೆ ಹೇಳಿಕೊಳ್ಳುತ್ತಾನಾ ? ಆದರೆ ನಾವೇನು ಹೇಳುತ್ತೇವೆ, ಪರ್ಟಿಕ್ಯುಲರ್ಲಿ ಸುವರ್ಣ ಕರ್ನಾಟಕ ಎಂದರೆ ಬರೀ ಕನ್ನಡ ಇರಬೇಕೆಂದು ಹೇಳುತ್ತೇವೆ. ಅವನು ತಮಿಳು ಕಲಿತುಕೊಂಡು ಯಾರಿಗೆ ಉಪದೇಶ ಮಾಡುವುದು ? ಅದು ಹೊರಗಡೆಯಿಂದ ಬರುವವರಿಗೆ ಮಾತ್ರನಾ ? ಆದುದರಿಂದ not only Kannada, we should improve all the Languages in our state. ಅದರಿಂದ ನಮ್ಮ ಫ್ಯೂಚರ್ ಸ್ಟೂಡೆಂಟ್ಸ್‌ಗಳಿಗೆ ಅದು ಇಂಪ್ಲಿಮೆಂಟ್ ಆಗುತ್ತದೆ, ಯೂಸ್‌ಫುಲ್ ಆಗುತ್ತದೆ. ಹೊರಗಡೆ ನಾವು ಹೋದರೆ ನಾನು ಕರ್ನಾಟಕದವನು ಕಲ್ಕತಾದಲ್ಲಿ ಮಾತನಾಡಬಹುದು. ನಾನು ಕರ್ನಾಟಕದವನು ಆಂಧ್ರದಲ್ಲಿ ಮಾತನಾಡಬಹುದು. ಅದಕ್ಕಾಗಿ ಒಂದು ಅಡಿಷನಲ್ ಲಾಂಗ್ವೇಜ್ ನಮಗೆ ಸಪೋರ್ಟ್ ಆಗುತ್ತದೆ. ಅದು ಬಿಟ್ಟು ಬರೀ ಕರ್ನಾಟಕದಲ್ಲಿ ಕನ್ನಡ ಮಾತ್ರ ಇರಬೇಕು ಎಂದರೆ if we should complete with other people. it is not possible at all. ಅದನ್ನು ಸ್ವಲ್ಪ ಡೆವಲಪ್ ಮಾಡಬೇಕು. ಈಗ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂದು ಹೇಳಿದ್ದಾರೆ. ಇದರಲ್ಲಿ ಬಹಳ ಗಂಭೀರವಾಗಿ ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್, creation of industries for knowledge products, bio-fuel mission, textiles ಎಲ್ಲಾ ಹೇಳಿದ್ದಾರೆ. ಇಲ್ಲಿಂದ 300 ಕಿಲೋಮೀಟರ್, 400 ಕಿಲೋಮೀಟರ್ ಹೋಗಿ ಡೆವಲಪ್‌ಮೆಂಟ್ ಮಾಡುತ್ತೀರಿ. ನಮ್ಮ ಕೋಲಾರ ಜಿಲ್ಲೆ ಇಲ್ಲಿಗೆ ಹತ್ತಿರ ಇದೆ. One hour from Bangalore ಅಲ್ಲಿಂದ ಕೆಜಿಎಫ್ ಒಂದು ಅರ್ಧ ಗಂಟೆ. ಇಲ್ಲಿಂದ ಒಂದೂವರೆ ಗಂಟೆ. 12, 000 acres of empty lands are available. 12, 000 acres of land. ತಾವು ಎಲ್ಲಿ ಇಂಪ್ರೂವ್‌ಮೆಂಟ್ ಮಾಡಬೇಕು? ನಮ್ಮ ಜಿಲ್ಲೆಯನ್ನು ಇಂಪ್ರೂವ್ ಮಾಡಬೇಕು. ಮಾಡಿದಿರಾ ? ಏಕೆ ಮಾಡಿಲ್ಲವೆಂದರೆ, ನಿನ್ನೆ ಮಾನ್ಯ ಕೃಷ್ಣ ಬೈರೇಗೌಡರು ಚರ್ಚೆ ಮಾಡುವಾಗ ನಿನ್ನೆ ಒಬ್ಬರು ಮಂತ್ರಿಗಳು ಹೇಳಿದರು, ಗೋಲ್ಡನ್ ಸಫಾರಿ ಮಾಡುತ್ತೇವೆಂದು ಹೇಳಿ ಬಂದರು, ಆದದ್ದು ಇನ್ನೂ ಕೆಲಸವಾಗಿಲ್ಲ ಎಂದರೆ, ಅದಕ್ಕೆ ಮಂತ್ರಿಯವರ ಉತ್ತರ ಏನೆಂದರೆ ಅದು ಕೇಂದ್ರ ಸರ್ಕಾರಕ್ಕೆ ಸೇರಿರುವುದು, ಅದು ನಮ್ಮಿಂದ ಆಗುವುದಿಲ್ಲ ಎಂದು. ಅದು ಕೇಂದ್ರ ಸರ್ಕಾರಕ್ಕೆ ಸೇರಿದ್ದು ಎಂದರೆ ಮಾನ್ಯ ವೈಜನಾಥ ಪಾಟೀಲ್ ಹೇಳಿದರಲ್ಲಾ ಆ ರೀತಿ Whether it is Kendra Sarkara or what ? It is in the Karnataka State. ಸುಮಾರು ಎರಡು ಬಾರಿ ನಮ್ಮ former Chief Minister met Prime Minister for the settlement of BGML. ತಾವು ಅದರ ಬಗ್ಗೆ ಸ್ವಲ್ಪ ಕರುಣೆ ಇಟ್ಟುಕೊಂಡು, please come forward and see that the employees are settled employees. More than 4, 000 people are dying and 12, 000 acreas, of land are available. The city is empty. ಟೆಕ್ಸ್‌ಟೈಲ್ಸ್ ಅಲ್ಲಿ ಮಾಡಿ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್

ತುಂಬಾ ಇದೆ. ಒಳ್ಳೆಯ ರೋಡುಗಳು ಇದೆ. ನನ್ನ ಕ್ಷೇತ್ರದಲ್ಲಿ ಬಿಟ್ಟು ಮೇನ್ ರೋಡ್ ಎಲ್ಲಾ ಚೆನ್ನಾಗಿ ಇದೆ. ಸ್ವಲ್ಪ ಡೆವಲಪ್ ಮಾಡಿ ಕೊಟ್ಟರೆ ಅಲ್ಲಿ ನಾವು ಉಪಯೋಗ ಮಾಡಬಹುದು. That is called development. ಬರೀ ಬೆಂಗಳೂರು ಸಿಟಿ, ಅದರ ಸುತ್ತಮುತ್ತ ಸಿಟಿಗಳನ್ನು ಡೆವಲಪ್ ಮಾಡಿಕೊಂಡು ಹೋದರೆ ಹೇಗೆ ? ನಮ್ಮ ಜಿಲ್ಲೆ ಡಾರ್ಕ್ ಏರಿಯಾ. ಮಳೆಗಾಲದಲ್ಲಿ ಮಳೆ ಇಲ್ಲವೆಂದರೆ ನಮಗೆ ಏನೂ ಗತಿ ಇಲ್ಲ. No employment, no industry, no factory, nothing. Kindly just think over it. ಅಲ್ಲಿ ಅವೇಲಬಲಿಟಿ ಲ್ಯಾಂಡ್ ಬೇಕಾದಷ್ಟು ಇದೆ. ತಾವು ಮಾನ್ಯ ಮುಖ್ಯಮಂತ್ರಿಯವರೇ ಅದಕ್ಕೆ ಅವಕಾಶ ಮಾಡಿ. Implement this textile and, bio-fuel mission on KGF because ಅಲ್ಲಿ ಬೇಕಾದಷ್ಟು ಲ್ಯಾಂಡ್ ಇದೆ. ಸಯನೈಡ್ ಡಂಪ್‌ಗಳು ಇವೆ. ತಾವು ಅದರ ಮೇಲೆ ಮಾಡಿ. ನಿಮ್ಮ ಅಧಿಕಾರಿಗಳು ಅದನ್ನೆಲ್ಲಾ ನೋಡುವುದೇ ಇಲ್ಲ. ಅಲ್ಲಿ ಬರುತ್ತಾರೆ, ನೋಡುತ್ತಾರೆ, ನಂತರ ಬ್ಯೂಟಿಫುಲ್ ಪ್ಲೇಸ್ ಎಂದು ಹೇಳುತ್ತಾರೆ, ಒಳ್ಳೆಯ ಗಾಲ್ಫ್, ಒಳ್ಳೆಯ ಗೆಸ್ಟ್ ಹೌಸ್ ಅನ್ನು ಬ್ರಿಟಿಷ್‌ನವರು ಬಹಳ ಚೆನ್ನಾಗಿ ಮಾಡಿದ್ದಾರೆ. ಆದರೆ ಏನು ಮಾಡುವುದು ? ಇದು ಕೇಂದ್ರ ಸರ್ಕಾರದ ಕೈಯಲ್ಲಿ ಇದೆ. ಕರ್ನಾಟಕ ರಾಜ್ಯಕ್ಕೆ ನನ್ನನ್ನು ರೆಪ್ರೆಸೆಂಟೇಟೀವ್ ಮಾಡಿಬಿಡಿ, Definitely I will move into Delhi. I will see to it that I will settle it. ಅಂತಹ ಒಂದು ಸ್ಥಿತಿಗೆ ನಾವು ಬಂದು ಡಿಪ್ರೆಸ್ ಆಗಿದ್ದೇವೆ, ಅದರ ಬಗ್ಗೆ ತಾವು ಇನಿಷಿಯಲ್ ಇಂಟರೆಸ್ಟ್ ತೆಗೆದುಕೊಳ್ಳಿ, ಅಲ್ಲಿ ಬೇಕಾದಷ್ಟು ಇನ್‌ಫ್ರಾಸ್ಟ್ರಕ್ಚರ್ ಇದೆ, ತಾವು ಬೇರೆ ಕಡೆಗಳಲ್ಲಿ 200 ಕೋಟಿ ರೂಪಾಯಿ ಖರ್ಚು ಮಾಡುವುದಿದ್ದರೆ, ನಮ್ಮ ಕಡೆ 50 ಕೋಟಿ ರೂಪಾಯಿ ಖರ್ಚು ಮಾಡಿದರೆ ಸಾಕು. ಇಂತಹ ಒಂದು ಒಳ್ಳೆಯ ಜಾಗಕ್ಕೆ ತಾವು ಒಂದು ಸಲ ವಿಸಿಟ್ ಮಾಡಿ. ನಮ್ಮ ಕೆಜಿಎಫ್‌ಗೆ ಬನ್ನಿ. ನೋಡಿ ಎಷ್ಟು ಬ್ಯೂಟಿಫುಲ್ ಲ್ಯಾಂಡ್ ಇದೆ, ಅದು ನಿಜವಾದ ಗೋಲ್ಡನ್ ಲ್ಯಾಂಡ್, ಸುವರ್ಣ ಕರ್ನಾಟಕ ಎಂದರೆ ಅದು ನಮ್ಮ ಊರೇ ನಿಜವಾಗಿ, ಆಹಾ : ಎಂದರೆ ಹೇಗೆ ಸ್ವಾಮಿ ? ಶ್ರೀಮಾನ್ ಖರ್ಗೆ ಸಾಹೇಬರು ಸಿಎಂ ಅವರ ಜೊತೆ ಎಷ್ಟೋ ಸಲ ಕೆಜಿಎಫ್‌ಗೆ ಬಂದಿದ್ದರು. ನಿಜವಾಗಿ ಅವರಿಗೆ ಗೊತ್ತಿದೆ. We have given enormous gold. ಈಗ ಬಳ್ಳಾರಿ ಕಡೆಯವರು ಗ್ರ್ಯಾನೈಟ್‌ಗಳನ್ನು ಕೊಟ್ಟರು, ಐರನ್ ಕೊಟ್ಟರು ಎಂದು ಹೇಳುತ್ತೀರಿ, ಆದರೆ for more than 120 years, we were giving Gold. But, no royalty for KGF. No royalty at an ಆದುದರಿಂದ ಈ ಕರ್ನಾಟಕವನ್ನು ಬೆಳೆಸಬೇಕೆಂದರೆ, the first importance has been to be given to the Kolar Gold Fields. KGF has given enormours gold which you cannot forget. ಮೈಸೂರು ಮಹಾರಾಜರು ಕುಳಿತುಕೊಂಡಿರುತ್ತಿದ್ದಂತಹ ಸಿಂಹಾಸನದಲ್ಲಿ ಇರುವುದು ನಮ್ಮ ಗೋಲ್ಡ್. ಪಂಡಿತ್ ಜವಹರಲಾಲ್ ನೆಹರುರವರ ಕಾಲದಲ್ಲಿ ಡೆಪಾಸಿಟ್ ಮಾಡುವುದಕ್ಕೆ ನಿಮ್ಮ ಇಂಡಿಯದಲ್ಲಿ ಏನಿದೆ ಎಂದರೆ ಕೋಲಾರದ ಗೋಲ್ಡ್ ಫೀಲ್ಡ್ ಇದೆ ಎಂದು ಹೇಳಿದ್ದರು. ಆದರೆ ಟೂರಿಸಂನಲ್ಲಿ ನಮ್ಮ ಊರಿನ ಹೆಸರು ಇಲ್ಲ. ಡೆವಲಪ್‌ಮೆಂಟ್‌ನಲ್ಲಿ ನಮ್ಮ ಹೆಸರಿಲ್ಲ, ಹಿಂದೆ ಸುಂದರವಾಗಿ ಇದ್ದಂತಹ ಸಮಯದಲ್ಲಿ ಎಲ್ಲರೂ ಅಲ್ಲಿಗೆ ಬರುತ್ತಿದ್ದರು. ಬಂದು ಕೆಜಿಎಫ್ ಅನ್ನು ಹೀಗೆ ಮಾಡುತ್ತೇವೆ ಎಂದೆಲ್ಲಾ ಹೇಳುತ್ತಿದ್ದರು ಆದರೆ ಈಗ ಏನಾಗಿದೆ ? So, I plea to my Hon'ble Chief Minister. Kindly just take care of KGF. ಒಂದು 6 ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಅಶ್ಯೂರೆನ್ಸ್ ಕೊಟ್ಟರು. ಅದೇನೆಂದರೆ

ಕೆಜಿ.ಎಫ್ ಗೆ ಒಂದು ಟ್ರಾಫಿಕ್ ಪೋಲೀಸ್ ಸ್ಟೇಷನ್ ಕೊಡುತ್ತೇವೆ ಎಂದು. ಅವರು ಸಂತೋಷವಾಗಿ ಕೆಜಿಎಫ್ ನಲ್ಲಿ ಮಾಡೋಣ ಎಂದು ಹೇಳಿದರು. ಅವರು ಹೇಳಿದ್ದನ್ನು ಅಧಿಕಾರಿಗಳು ಇನ್ನೂ ಇಂಪ್ಲಿಮೆಂಟ್ ಮಾಡಿಲ್ಲ. ನಾನು ಸುಮಾರು ಎರಡು, ಮೂರು ಸಲ ಹೋಗಿ ಕೇಳಿದರೆ ಮಾಡೋಣ, ಮಾಡೋಣವೆಂದು' ಹೇಳುತ್ತಾರೆ. ಈ ಬಗ್ಗೆ ರೂಲ್ ಏನು ಹೇಳುತ್ತದೆ. ? For more than 15, 000 population, we must have a traffic police station. But, in my city there is 2 lakh population. ಆರು ತಿಂಗಳುಗಳಾದರೂ ಅಧಿಕಾರಿಗಳು ಮಾಡಿಲ್ಲವೆಂದರೆ ನಾನು ಯಾರನ್ನು ಹೋಗಿ ಕೇಳುವುದು ? ಮಾನ್ಯ ಮುಖ್ಯಮಂತ್ರಿಯವರು ನಾವು ಕೊಡುತ್ತೇವೆಂದು ಹೇಳಿದ್ದರು. ಇದನ್ನು ಯಾರು ಇಂಪ್ಲಿಮೆಂಟ್ ಮಾಡಬೇಕು ? ಅಧಿಕಾರಿಗಳು, ಮಾಡಬೇಕು. ಆದರೆ ಅವರು ಮಾಡಿದ್ದಾರಾ ? ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಅಲ್ಲಿ ವಾಟರ್ ಬೋರ್ಡ್‌ನವರಿಗೆ ಪೈಪ್ ಚೇಂಜ್ ಮಾಡಿಯೆಂದು ಹೇಳಿದರೆ, ಅವರು ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಾರೆ. ನಾವು ಪಿ.ಡ್ಬ್ಲ್ಯೂ.ಡಿ. ಯವರ ಹತ್ತಿರ ಹೋದರೆ, ನಮಗೆ ಬಜೆಟ್‌ನಲ್ಲಿ ಅಲಾಟ್‌ಮೆಂಟ್ ಇಲ್ಲವೆಂದು ಹೇಳುತ್ತಾರೆ. ಈ ಸೆಕ್ರೆಟರಿಯವರು ನಮ್ಮ ಕಡೆಯಿಂದ ಆಗುವುದಿಲ್ಲವೆಂದು ಹೇಳುತ್ತಾರೆ. ನಾನೇ ಕೊನೆಗೆ ಸೆಕ್ರೆಟರಿಯವರನ್ನು ಭೇಟಿ ಮಾಡಿದೆ. The HUD Secretary says, "what can I do ? Where is the money?" ಅಂತ ಹೇಳಿದರು. ಇಂತಹ ಸೆಕ್ರೆಟರಿಗಳನ್ನು ನಾವು ಏನು ಮಾಡಬೇಕು ? ಇವರು ದುಡ್ಡು ಇಲ್ಲವೆಂದ ಮೇಲೆ, ಅಲ್ಲಿ ನೀವು ಸೆಕ್ರೆಟರಿಯಾಗಿ ಏಕೆ ಕುಳಿತುಕೊಳ್ಳಬೇಕು, ಪೀವನ್ ಆಗಿ ಕುಳಿತುಕೊಳ್ಳಲಿ. It is your bounden duty to create, or to pool the money. That is why they are called bureaucrats and they have been red light provided with the AC car. But legislator is fighting here. All the Members of the Legislature have fought and brought the Chief Minister. ಅಲ್ಲಿಂದ ಪಿ.ಡ್ಬ್ಲ್ಯೂ.ಡಿ.ಗೆ ಬಂದರೆ ಅಲ್ಲಿ ಚೀಫ್ ಇಂಜಿನಿಯರ್ ನನಗೆ ಏನು ಮಾಡುವುದಕ್ಕೆ ಆಗುತ್ತದೆ ? ನಾನು ಒಬ್ಬ ಪೋಸ್ಟ್ ಮಾಸ್ಟರ್ ಎಂದು ಹೇಳುತ್ತಾರೆ. ಆ ಚೀಫ್ ಇಂಜಿನಿಯರ್ ಹೇಳುತ್ತಾರೆ. 'What can I do ? I am only a Postmaster. You go and meet the Finance Minister.' ಎಂದು ಇಂತಹ ಅಧಿಕಾರಿಗಳಿಗೆಲ್ಲಾ, you must take them to task. ನನ್ನ ಕೆಲಸ ಆಗುತ್ತದೆಯೋ, ಇಲ್ಲವೋ, ಕೊನೆಯ ಪಕ್ಷ ನಮ್ಮ ಮನಸ್ಸಿಗೆ ಸಂತೋಷ ಇರುತ್ತದೆ. ಹೊಸ ಮುಖ್ಯಮಂತ್ರಿಗಳು ಬಂದಿದ್ದಾರೆ. ಎಲ್ಲಾ ಬ್ಯೂರೊಕ್ರಾಟ್ಸ್‌ಗಳಿಗೆ ಭಯ ಆಗಿದೆ, ಎಕ್ಸಿಕ್ಯೂಟಿವ್‌ಗಳಿಗೆ ಭಯ ಆಗಿದೆ. ಈ ಕೆಲಸ ಆಗುತ್ತದೆಂದು ಪಬ್ಲಿಕ್‌ಗೆ ಮೆಸೇಜ್ ಹೋಗಬೇಕು. ನೀವು ಸ್ಟ್ರಿಕ್ಟ್ ಆಗಿ ಇದ್ದು ಮಾಡಿದರೆ ಈ ಹನ್ನೊಂದು ಅಂಶಗಳ ಕಾರ್ಯಕ್ರಮಗಳನ್ನು ನಿಜವಾಗಿಯೂ ನೀವು 100% implement ಮಾಡಬಹುದು. We will fully cooperate with you. What best we can help, we can help you. ಬರೀ ಬ್ಯೂರೊಕ್ರಾಟ್ಸ್ ಹೆಲ್ಪ್ ತೆಗೆದುಕೊಂಡರೆ, ಖಂಡಿತವಾಗಿ ಅವರು ಮಾಡುವುದಿಲ್ಲ. ಅವರು ನಿಮ್ಮ ಮುಂದೆ ನಗುತ್ತಾರೆ, ಬ್ಯುರೋಕ್ರಾಟ್ಸ್, ಐ.ಎ.ಎಸ್. ಆಫೀಸರ್ಸ್ ಎಲ್ಲಾ ಚೀಫ್ ಮಿನಿಸ್ಟರ್ ಅನ್ನು ಬಿಟ್ಟು ಮಂತ್ರಿಗಳ ಮನೆಗೆ ಹೋಗಿ ಅವರನ್ನು ನೋಡಿದ್ದಾರಾ ? ಬರೀ ಚೀಫ್ ಮಿನಿಸ್ಟರ್ ಹತ್ತಿರ ಬರುತ್ತಾರೆ, ನಮಸ್ಕಾರ ಎಂದು ಹೇಳಿ, ಹೋಗಿಬಿಡುತ್ತಾರೆ. Why?

They must meet every Minister. Every Minister should take them into task. Do this. ಇದನ್ನು ಇಂಪ್ಲಿಮೆಂಟ್ ಮಾಡಬೇಕು. ಶಾಸಕರು ಕೊಟ್ಟ ಲೆಟರ್ ಬಗ್ಗೆ ಏನಾಯಿತೆಂಬುದನ್ನು ಕೇಳಬೇಕು. ನೀವು ಏನು ಮಾಡುತ್ತೀರೆಂದರೆ, ಪಾಪ, ನಮ್ಮ ಶಾಸಕರು ಲೆಟರ್ ಕೊಟ್ಟು ಕಳುಹಿಸಿದ್ದಾರೆಂದು ಹೇಳುತ್ತೀರಿ, ಅಂದರೆ ನಾವು ಇಲ್ಲಿ ಪಾಪ, ಏನು ಪಾಪ ? ನಾನು ಹೇಗೆ ಪಾಪ ಆಗುತ್ತೇನೆ. ? ಶಾಸಕರು ಲೆಟರ್ ಕೊಟ್ಟು ಕಳುಹಿಸಿದ್ದಾರೆ, ಏನು ಆಯಿತು ಎಂದು ನೀವು ಕೇಳಿದರೆ, ಅದು ಆಗುವುದಿಲ್ಲ ಸಾರ್ ಎನ್ನುತ್ತಾರೆ. ಏಕೆ ಆಗುವುದಿಲ್ಲವೆಂದರೆ, ಅದು ಆಗುವುದಿಲ್ಲವೆಂದು ಹೇಳುತ್ತಾರೆ. Why it is ? why not ? You are the authority of the Government. You are the responsible persons. You are the Government. They are only your subordinates. ಮಾನ್ಯ ಮುಖ್ಯಮಂತ್ರಿಯವರು ಅಂತಹ ಒಂದು ಸ್ಟ್ಯಾಂಡ್ ಅನ್ನು ತೆಗೆದುಕೊಂಡರೆ, ಇದೆಲ್ಲಾ ನಿಜವಾಗಿಯೂ ಇಂಪ್ಲಿಮೆಂಟ್ ಆಗುತ್ತದೆ. ನಿಮಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಒಂದು ದಾರಿ ಸಿಗುತ್ತದೆ. ನಾವು ನಿಮ್ಮ ಜೊತೆಯಲ್ಲಿ ಇರುತ್ತೇವೆ. ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ, ವಂದಿಸುತ್ತಾ ನಿಮ್ಮ ಗೌರವಕ್ಕೋಸ್ಕರ, ನಿಮ್ಮ ಮಾತಿಗೋಸ್ಕರ, ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ ನಮಸ್ಕಾರ.

ಅಧ್ಯಕ್ಷರು : ಮಾನ್ಯ ಕೆ. ಚಂದ್ರಶೇಖರ್‌ರವರೇ ಮಾತನಾಡಿ.

ಶ್ರೀ ಸಿ.ಟಿ. ರವಿ :ಮಾನ್ಯ ಅಧ್ಯಕ್ಷರೇ, ನನ್ನ ಹೆಸರು ಲಿಸ್ಟ್‌ನಲ್ಲಿ ಇದೆಯೋ, ಇಲ್ಲವೋ, ಹೇಳಿ. ನಿನ್ನೆ ದಿವಸ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡಿದ್ದು, ಬಿಟ್ಟರೆ ನಮಗೆ ನೀವು ಮಾತನಾಡಲು ಅವಕಾಶವನ್ನೇ ಕೊಟ್ಟಿಲ್ಲ. ತಾವು ಬಿ.ಜೆ.ಪಿ.ಯವರಿಗೆ 2 ಗಟೆ 45 ನಿಮಿಷಗಳ ಸಮಯವನ್ನು ನಿಗದಿ ಮಾಡಿದ್ದೇನೆಂದು ಹೇಳಿದ್ದೀರಿ. ತಾವು ಕಾಂಗ್ರೆಸ್‌ನವರು ಎಷ್ಟು ಜನರು ಮಾತನಾಡಿದ್ದಾರೆ. ಬಿ.ಜೆ.ಪಿ. ಯವರು ಎಷ್ಟು ಜನ ಸದಸ್ಯರು ಮಾತನಾಡಿದ್ದಾರೆಂಬುದನ್ನು ತಿಳಿಸಿ, ನೀವು ನಮಗೆ ಅವಕಾಶವನ್ನು ಕೊಡುತ್ತೀರೋ, ಇಲ್ಲವೋ, ಹೇಳಿ. ನೀವು ಮಾತನಾಡಲು ಅವಕಾಶವನ್ನು ಕೊಡುವುದಿಲ್ಲವೆಂದರೆ ಹೇಳಿ, ನಾನು ಹೋಗುತ್ತೇನೆ. ನೀವು ಒಂದು ಕಡೆ ಪಕ್ಷಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳುತ್ತೀರಿ. ಆದರೆ ಬೇರೆಯವರಿಗೆ ಅವಕಾಶವನ್ನು ಕೊಡುತ್ತಿದ್ದೀರಿ.

ಅಧ್ಯಕ್ಷರು: ಮಾನ್ಯ ರವಿಯವರೆ, ನೀವು ಈ ಕಡೆ ಇದ್ದಾಗ ನಿಮಗೂ ಮಾತನಾಡಲು ಹೆಚ್ಚು ಅವಕಾಶವನ್ನು ಕೊಟ್ಟಿದ್ದೇನೆ. ಆದುದರಿಂದ ತಾವು ದಯಮಾಡಿ ಕುಳಿತುಕೊಳ್ಳಿ, ನಿಮಗೂ ಅವಕಾಶವನ್ನು ಕೊಡುತ್ತೇನೆ. ಮಾನ್ಯ ಚಂದ್ರಶೇಖರವರೆ, ತಾವು ಮಾತನಾಡಿ.

ಶ್ರೀ ಕೆ. ಚಂದ್ರಶೇಖರ್(ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಷ್ಟ್ರಪತಿಯವರ ಈ ಭಾಷಣ ಅವರ ಒಂದು ಪರಿಕಲ್ಪನೆ, ಉದ್ಯೋಗದ ಸೃಷ್ಟನೆ, ಸ್ವಾವಲಂಬನೆ, ಆದಾಯದ ವರ್ಧನೆ, ಹಾಗೂ ಸಮಾಜಕ್ಕಾಗಿ ಸಂಪೂರ್ಣ ಸೃಷ್ಟಿ ಮಾಡಿರುವಂತಹ ಒಂದು ಪರಿಕಲ್ಪನೆಯ ಹನ್ನೊಂದು ಅಂಶಗಳ ಕಾರ್ಯಕ್ರಮವನ್ನು ಮಾನ್ಯ ರಾಷ್ಟ್ರಪತಿಯವರು ನಮಗೆ ನೀಡಿದ್ದಾರೆ. ಪ್ರಾಯಶಃ ಹಲವಾರು ಹಿರಿಯ ಸದಸ್ಯರುಗಳು ಈ ವಿಚಾರವಾಗಿ ಮಾತನಾಡುವಂತಹ ಸಂದರ್ಭದಲ್ಲಿ, ಈ ಒಟ್ಟಾರೆ ಪರಿಕಲ್ಪನೆಗಳೇ, ಸಾಧ್ಯವಿಲ್ಲವೆನ್ನುವಂಥ ಮಾತುಗಳ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಈ ಹನ್ನೊಂದು ಅಂಶಗಳ ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಾ ಹೊರಟಾಗ ಮಾನ್ಯ

ರಾಷ್ಟ್ರಪತಿಗಳೇ, ಈ ಕಾರ್ಯಕ್ರಮಗಳ ಪರಿಕಲ್ಪನೆ, ಈ ರಾಷ್ಟ್ರದಲ್ಲಿ ಸಾಧ್ಯತೆಗಳನ್ನು ಒಳಗೊಂಡಿದೆಯೆಂಬ ಅಂಶವನ್ನು ಸ್ಪಷ್ಟವಾಗಿ ನಮಗೆ ತಿಳಿಸಿದ್ದಾರೆ. ಅದು ಹತ್ತಿಯನ್ನು ಬೆಳೆಯುವಂತಹ ಪಂಜಾಬ್‌ನಲ್ಲಿರುವಂತಹ ಉದಾಹರಣೆಯಾಗಿರಬಹುದು, ಆಂಧ್ರಪ್ರದೇಶದಲ್ಲಿ ವಿದ್ಯುತ್ ಘಟಕಗಳನ್ನು ಸ್ಥಾಪನೆ ಮಾಡಿರುವಂತಹ ಉದಾಹರಣೆ ಇರಬಹುದು, ಇಂತಹ ಉದಾಹರಣೆಗಳನ್ನು, ಅವರ ಪರಿಕಲ್ಪನೆಯಲ್ಲಿ ಹೇಳುವುದರ ಮುಖಾಂತರ ಅವರು ಉಲ್ಲೇಖ ಮಾಡಿದ್ದಾರೆ. ಸ್ಥಳೀಯ ಸ್ವಾವಲಂಬನೆಗೆ ಮಾನ್ಯ ರಾಷ್ಟ್ರಪತಿಯವರು ಬಹಳಷ್ಟು ಆದ್ಯತೆಯನ್ನು ಕೊಟ್ಟಿರುವಂಥಾದ್ದು, ಇಲ್ಲಿ ಗಮನಾರ್ಹವಾದಂತಹ ಅಂಶವಾಗಿದೆ. ಅದರಲ್ಲಿ ಇವರು ಬಹಳ ಪ್ರಮುಖವಾಗಿ, ಕೊಟ್ಟಿರುವಂತಹ ಆದ್ಯತೆ, ಹವಾಮಾನಕ್ಕೆ ತಕ್ಕಂತೆ ಬೆಳೆಯತಕ್ಕಂಥ ಬೆಳೆಗಳು, ಪರಿಪೂರ್ಣವಾಗಿ ವ್ಯವಸಾಯದ ಬೆಳೆಗಳು, ಸಂಪೂರ್ಣ ರಾಷ್ಟ್ರ ಮತ್ತು ಅಂತರಾಷ್ಟ್ರದ ವರಮಾನ ಹೆಚ್ಚಿಸುವಂತಹ ಬೆಳೆಗಳು, ಉದ್ಯೋಗವನ್ನು ಸೃಷ್ಟಿ ಮಾಡುವಂತಹ ಬೆಳೆಗಳು, ಕಾರ್ಖಾನೆಗಳ ಸೃಷ್ಟಿಯ ಬೆಳೆಗಳನ್ನು, ಅವರ ಪರಿಕಲ್ಪನೆಯಲ್ಲಿ ಅವರು ತೆಗೆದುಕೊಂಡು ಬಂದಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಅಧಿಕಾರವನ್ನು ತೆಗೆದುಕೊಂಡಂದಿನಿಂದ ಇಲ್ಲಿಯವರೆಗೂ ಸಹ ಅವರ ಒಟ್ಟಾರೆ ಮಾತುಗಳಲ್ಲಿ ಮಾನ್ಯ ಅಬ್ದುಲ್ ಕಲಾಂರ ಕನಸಿನ ಲೋಕವನ್ನು ನಾವು ನನಸು ಮಾಡುವಂತಹ ಅಭಿಪ್ರಾಯವನ್ನು ಇಟ್ಟುಕೊಂಡಿರುವಂತಹ ಮಾತನ್ನು ಅವರು ವ್ಯಕ್ತಪಡಿಸುತ್ತಿದ್ದಾರೆ. ಒಂದು ಕಡೆಗೆ ಅವರು ಕನಸಿನ ಲೋಕದಲ್ಲಿ ಇದ್ದಾರೆ, ಇನ್ನೊಂದು ಕಡೆಗೆ ಇಡೀ ಸದನ, ಇದು ಸಾಧ್ಯವಿಲ್ಲವೆನ್ನುವಂಥ ಒಂದು ಆರೋಗ್ಯಪೂರ್ಣವಾದಂತಹ ಸವಾಲನ್ನು ಅವರಿಗೆ ಒಡ್ಡುತ್ತಿದ್ದಾರೆ. ಈ ಎರಡು ವಿಷಯಗಳನ್ನು ಇಲ್ಲಿ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಇಂತಹ ವಿಷಯಗಳನ್ನು ತೆಗೆದುಕೊಂಡಾಗ, ಮಾನ್ಯ ಮುಖ್ಯಮಂತ್ರಿಯವರು, ಕಳೆದ ಎರಡು ದಿವಸಗಳ ಕಾಲ "" ಕರ್ನಾಟಕ ಅಭಿವೃದ್ಧಿ ರಂಗ " ಎಂದು ಅವರ ಎರಡು ಪಕ್ಷಗಳನ್ನೊಳಗೊಂಡಂತಹ ಒಂದು ಪುಸ್ತಕವನ್ನು ಬಿಡುಗಡೆ ಮಾಡಿದ್ದಾರೆ. ಇಂತಹ ಬಹಳಷ್ಟು ಪುಸ್ತಕಗಳು ಎಲ್ಲಾ ಸರ್ಕಾರಗಳಲ್ಲೂ ಬಂದಿವೆ, ಆಗಿವೆಯೆಂಬ ಮಾತುಗಳು ಸರ್ವೇಸಾಮಾನ್ಯವಾಗಿದೆ. ಆದರೆ ಪರಿಕಲ್ಪನೆಯಲ್ಲಿರುವಂತಹ ಮಾತುಗಳು ಇಂತಹ ಪುಸ್ತಕಗಳು ಎಷ್ಟರಮಟ್ಟಿಗೆ ಸಂಪೂರ್ಣವಾಗಿ, ಇದು ಮಾನ್ಯ ಅಬ್ದುಲ್ ಕಲಾಂರವರ ಕಾರ್ಯಕ್ರಮಗಳನ್ನು ನಿರ್ದಿಷ್ಟವಾದಂತಹ ಕಾರ್ಯಕ್ರಮವಾಗಿ ಪರಿವರ್ತನೆಗೊಂಡಿದೆ ಎನ್ನತಕ್ಕಂಥಾದ್ದು, ಈ ಒಂದು ಕಾಮನ್ ಮಿನಿಮಮ್ ಪ್ರೋಗ್ರಾಂನಲ್ಲಿ ಎಲ್ಲೂ ಪ್ರಿಂಟ್ ಆಗಿರುವಂಥಾದ್ದು ಸ್ಪಷ್ಟವಾಗಿ ಗೋಚರವಾಗುತ್ತಿಲ್ಲ. ಪ್ರಾಯಶಃ ನಾವು "" ಬೆಳೆಯುವ ಪೈರು, ಮೊಳಕೆಯಲ್ಲೆ " ಎಂಬ ಗಾದೆಯನ್ನು ನಾವು ಅಂದುಕೊಳ್ಳಬಹುದು. ಆ ಹಿನ್ನೆಲೆಯನ್ನೇ ನಾವು ಗಮನದಲ್ಲಿ ತೆಗೆದುಕೊಂಡರೆ ಮಾನ್ಯ ಅಬ್ದುಲ್ ಕಲಾಂರವರ ಕಾರ್ಯಕ್ರಮಗಳ ಈ ಎರಡು ದಿವಸಗಳ ಚರ್ಚೆ ಗಾಳಿಯಲ್ಲಿ ಗುದ್ದಾಟವಾಗುವಂತಹ ಪ್ರಮೇಯ ನಮಗೆ ಉದ್ಭವವಾಗುವಂತಹ ಪ್ರಶ್ನೆಯಾಗಿದೆ. ಆದರೂ ಸಹ ಎಲ್ಲಾ ಹಿರಿಯ ಸ್ನೇಹಿತರುಗಳು, ಮಾತನಾಡುವಾಗ, ಬೆಂಗಳೂರು ನಗರದ ಬಗ್ಗೆ ಅವರು ಕೆಲವು ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಒಂದು ರಾಷ್ಟ್ರದ ಒಟ್ಟಾರೆ ಬೆಳವಣಿಗೆಯನ್ನು ತೆಗೆದುಕೊಂಡಾಗ ಇಡೀ ರಾಷ್ಟ್ರ, ಇಡೀ ರಾಜ್ಯ, ಇಡೀ ನಗರಗಳು ಬೆಳವಣಿಗೆ ಆಗಬೇಕಾಗಿರುವಂಥಾದ್ದು ಸರ್ವೇಸಾಮಾನ್ಯವಾಗಿದೆ. ಅದರ ಬಗ್ಗೆ ನಮ್ಮ ಬೆಂಗಳೂರು ನಗರದ ನಮ್ಮ ಶಾಸಕರುಗಳಿಗಾಗಲಿ, ಯಾರಿಗೆ ಆಗಲಿ, ಭಿನ್ನಾಭಿಪ್ರಾಯ ರಾಜ್ಯ ಬೆಳವಣಿಗೆಯಾಗಬಾರದೆಂಬುದು ಇಲ್ಲ. ಆದರೆ ಇಲ್ಲಿ ಬೆಳವಣಿಗೆಯ ದೃಷ್ಟಿಯಿಂದ ಬೆಂಗಳೂರು ನಗರವನ್ನು ತೆಗೆದುಕೊಂಡಾಗ 1949ನೇ ಇಸವಿಯಿಂದ

ಆಗಲಿ, ಅಥವಾ ಆ್ಯಕ್ಟ್ ಅಮೆಂಡ್ ಮಾಡಿದಂತಹ 1956ನೇ ಇಸವಿಯಿಂದ ಆಗಲಿ, ಇಲ್ಲಿಯವರೆಗೂ ತೆಗೆದುಕೊಂಡು ಬಂದಾಗ, ಕೇವಲ 11 ವರ್ಷಗಳು ಮಾತ್ರ ಬೆಂಗಳೂರು ಮಹಾನಗರಪಾಲಿಕೆಗೆ ರಾಜ್ಯ ಸರ್ಕಾರದಿಂದ ಹಣವನ್ನು ಆಕ್ಟ್ರಾಯ್ ಮುಖಾಂತರ ಕೊಡುತ್ತಿದ್ದರು. ಈ 11ವರ್ಷಗಳು ಆದಮೇಲೆ, ಬೆಂಗಳೂರು ನಗರಕ್ಕೆ ಸರ್ಕಾರದಿಂದ ಕೊಡತಕ್ಕಂಥ ಅಕ್ಟ್ರಾಯ್ ಪರಿಹಾರ ಹಣವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು. ಬೆಂಗಳೂರು ಮಹಾ ನಗರದ ಬೆಳವಣಿಗೆ ಸಂಪೂರ್ಣವಾಗಿ ಬೆಂಗಳೂರು ಮಹಾ ನಗರ ಪಾಲಿಕೆಯೇ ಕಾರಣಕರ್ತವಾಗಿದೆ, ಹಾಗಾಗಿ ಬೆಂಗಳೂರು ನಗರದ ಬೆಳವಣಿಗೆಗೆ ರಾಜ್ಯದ ಯಾವುದೇ ಸಂಪನ್ಮೂಲಗಳನ್ನು ತಂದು ಬೆಂಗಳೂರು ನಗರದ ಬೆಳವಣಿಗೆಯನ್ನು ನಾವು ಮಾಡುತ್ತಾ ಇಲ್ಲ. ಇದರಲ್ಲಿ ಬಹಳ ಮುಖ್ಯವಾದ ಒಂದು ಅಂಶವೆಂದರೆ ಐಟಿ, ಬಿಟಿ, ಯನ್ನು ನಾವು ಬಹಳಷ್ಟು ಕಡೆ ಕೇವಲವಾಗಿ ಅಭಿಪ್ರಾಯವನ್ನು ಮೂಡಿಸುತ್ತಿದ್ದೇನೆ. ಬೆಂಗಳೂರು ನಗರಕ್ಕೆ ಐಟಿ. ಬಿಟಿ, ಬರುವುದಕ್ಕೆ ತನ್ನದೇ ಆದಂತಹ ಚರಿತ್ರೆ ಇದೆ 1995ನೇ ಇಸವಿಗಿಂತ ಮುಂಚೆಯೂ ಸಹ ಬೆಂಗಳೂರಿನಲ್ಲಿ ಐಟಿ, ಬಿಟಿ, ಗಳು ಇದ್ದರೂ ಸಹ ಅದಕ್ಕೆ ರಾಷ್ಟ್ರ ವ್ಯಾಪ್ತಿಯಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗಣನೆಗೆ ಬಂದಿರಲಿಲ್ಲ. 1995ನೇ ಇಸವಿಯಲ್ಲಿ ಹಾಂಕಾಂಗ್ ರಾಷ್ಟ್ರ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಚೈನಾ ರಾಷ್ಟ್ರಕ್ಕೆ ವರ್ಗಾವಣೆ ಆಗುತ್ತದೆಂದು ಬಂದಾಗ, ಇಡೀ ಅಂತರಾಷ್ಟ್ರೀಯ ಮಟ್ಟದ ಎಲ್ಲಾ ಬಂಡವಾಳಶಾಹಿಗಳು ಅವತ್ತಿನ 1995ನೇ ಮಾರ್ಚ್ 18ನೇ ತಾರೀಖು ಮಲೇಶೀಯಾದಲ್ಲಿ ಒಂದು ಅಂತರರಾಷ್ಟ್ರೀಯ ಮಟ್ಟದ ಸಭೆಯನ್ನು ಮಾಡಿದರು. ಆ ಅಂತರ್‌ರಾಷ್ಟ್ರೀಯ ಮಟ್ಟದ ಸಭೆಯನ್ನು ಮಾಡಿದಾಗ ಇಡೀ ವಿಶ್ವದ ಹಾಂಕಾಂಗಿನ ಮಾರುಕಟ್ಟೆಯನ್ನು ಇಡೀ ಏಷಿಯಾದಲ್ಲಿ ಎಲ್ಲಿ ಬೆಳವಣಿಗೆಯನ್ನು ತಂದರೆ ಅದು ಸಾಧ್ಯವಾಗುತ್ತದೆ ಎನ್ನುವ ಚರ್ಚೆಯನ್ನು ಮಾಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ 1995ನೇ ಇಸವಿ ಮಾರ್ಚ್ 18ನೇ ತಾರೀಖು ಒಂದು ನಿರ್ಧಾರವನ್ನು ತೆಗೆದುಕೊಂಡರು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕು ಎಂದು ನಾನು ಮನವಿ ಮಾಡುತ್ತೇನೆ ಮಾರ್ಚ್ 18ನೇ ತಾರೀಖು ಅವರು ಈ ಒಂದು ವ್ಯಾಪಾರ ಬಂಡವಾಳವನ್ನು ಸೂಕ್ತವಾಗಿ ಭಾರತ ದೇಶಕ್ಕೆ ವರ್ಗಾವಣೆ ಮಾಡಬೇಕು ಎಂದು ನಿರ್ಧಾರವನ್ನು ತೆಗೆದುಕೊಂಡರು. ಭಾರತ ದೇಶಕ್ಕೆ ವರ್ಗಾವಣೆ ಮಾಡಬೇಕಾದಾಗ, ಭಾರತ ದೇಶದಲ್ಲಿ ಯಾವುದು ಪ್ರಮುಖವಾದ ಸ್ಥಳ, ಎಲ್ಲಿ ಈ ಅಂತರರಾಷ್ಟ್ರೀಯ ಬಂಡವಾಳವನ್ನು ಹೂಡಿದರೆ ಬೆಳವಣಿಗೆ ಸಾಧ್ಯ ಎನ್ನುವ ಒಂದು ನಿರ್ಧಾರ ತೆಗೆದುಕೊಂಡಾಗ, ಈ ಬಗ್ಗೆ ಇಡೀ ರಾಷ್ಟ್ರವ್ಯಾಪ್ತಿ ಚರ್ಚೆಗೆ ತೆಗೆದುಕೊಂಡಾಗ ಅವರಿಗೆ ಕಂಡಿದ್ದು ಬೆಂಗಳೂರು ನಗರ. ಮೂಲಭೂತವಾಗಿ ಬೆಂಗಳೂರು ನಗರದಲ್ಲಿ ಅವರು ಕಂಡಿದ್ದು ಅತ್ಯಂತ ಹಿತಕರವಾದಂಥ ವಾತಾವರಣ, ಎರಡನೆಯದಾಗಿ ಭಾಷೆ ಉದಾಹರಣೆಗೆ, ಇದನ್ನು ತಮಿಳುನಾಡಿಗಾಗಲೀ, ಹೈದರಾಬಾದ್‌ಗಾಗಲೀ, ಮಹಾರಾಷ್ಟ್ರಕ್ಕಾಗಲೀ, ಗುಜರಾತ್‌ಗಾಗಲೀ ತೆಗೆದುಕೊಂಡು ಹೋಗಿದ್ದರೆ, ಅಲ್ಲಿಯ ಸ್ಥಳೀಯ ಭಾಷೆಗಳಿಂದ ಬಂಡವಾಳಶಾಹಿಗಳಿಗೆ ತೊಂದರೆಯಾಗುತ್ತದೆ ಎನ್ನುವ ಭಾವನೆಯಿಂದ ಆ ರಾಜ್ಯಗಳನ್ನು ತಿರಸ್ಕಾರ ಮಾಡಿ, ಬೆಂಗಳೂರು ನಗರವನ್ನು ಅವರು ಆಯ್ಕೆ ಮಾಡಿಕೊಂಡರು. ಮೂರನೆಯದಾಗಿ, ಯಾವುದೇ ನಕ್ಸಲೈಟ್ ಸಮಸ್ಯೆಯಾಗಲೀ ಅಥವಾ ಮತ್ತೊಂದು ಸಮಸ್ಯೆಯಾಗಲೀ ಇಲ್ಲಿ ಬರಲಿಲ್ಲ. ನಾಲ್ಕನೆಯದಾಗಿ, ಬೆಂಗಳೂರಿನವರು ಶಾಂತಿಪ್ರಿಯರು. ಈ ನಾಲ್ಕು ಅಂಶಗಳನ್ನು ತೆಗೆದುಕೊಂಡು ಆವತ್ತಿನ ಐ.ಟಿ., ಬಿ.ಟಿ., ಅಂತರರಾಷ್ಟ್ರೀಯ ಬಂಡವಾಳಶಾಹಿಗಳು ಬೆಂಗಳೂರು ನಗರವನ್ನು ಆಯ್ಕೆ ಮಾಡಿಕೊಂಡರು. ತದನಂತರ ಚೈನಾ ರಾಷ್ಟ್ರದ ಸಮಸ್ಯೆ ಆಗಲಿಲ್ಲ ಎಂದು ಹೇಳಿದಾಗ, 1996ರಲ್ಲಿ ಬೆಂಗಳೂರು ನಗರದಲ್ಲಿ

ಮತ್ತೊಮ್ಮೆ ಐ.ಟಿ., ಬಿ.ಟಿ. ಸಮಸ್ಯೆಗಳು ಬರುವುದು ಕಡಿಮೆಯಾಯಿತು. ಆಗ 1997ನೇ ಇಸವಿ ಜೂನ್ 2ನೇ ತಾರೀಖು ಇಡೀ ವಿಶ್ವದಲ್ಲೇ ಒಂದು ಸವಾಲು ಬಂತು. ವೈ2ಕೆ ಎನ್ನತಕ್ಕಂಥ ಒಂದು ಸಮಸ್ಯೆ ಇಡೀ ವಿಶ್ವಕ್ಕೇ ಚಾಲೆಂಜ್ ಆಗಿ ಬಂತು. ಇಂಥ ವೈ2ಕೆ ಸಮಸ್ಯೆಯನ್ನು ವಿಶ್ವದ ಯಾವುದೇ ಜನಾಂಗ ಅದನ್ನು ಪರಿಹಾರ ಮಾಡಲು ಆಗಲಿಲ್ಲ. ಇಂಥ ವೈ2ಕೆಯನ್ನು ಅತ್ಯಂತ ಸರಳವಾಗಿ, ಸಂಭ್ರಮವಾಗಿ, ಅತ್ಯಂತ ಕಡಿಮೆ ಖರ್ಚಿನಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿದ್ದು ಬೆಂಗಳೂರಿನ ವಿದ್ಯಾವಂತರು; ಈ ಕರ್ನಾಟಕದ ಸುಪುತ್ರರು. ಹಾಗಾಗಿ, ಅವರಿಗೆ ಬೆಂಗಳೂರು ನಗರದಲ್ಲಿ ಬಂಡವಾಳ ಹೂಡುವುದಕ್ಕೆ ಜಾಗದ ಸಮಸ್ಯೆಯಾಗಲೀ, ವಿದ್ಯಾವಂತರ ಸಮಸ್ಯೆಯಾಗಲೀ, ಐಕ್ಯು ಸಮಸ್ಯೆಯಾಗಲೀ ಬರಲಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ಬೆಂಗಳೂರಿನಲ್ಲಿ ಕಡಿಮೆ ಖರ್ಚಿನಲ್ಲಿ ಸಿಕ್ಕಿತು. ಬೆಂಗಳೂರಿನಲ್ಲಿ 25 ಸಾವಿರ ರೂಪಾಯಿ ಸಂಬಳ ಕೊಡತಕ್ಕಂಥ ಒಬ್ಬ ಯುವಕನಿಗೆ, ಅಂತರರಾಷ್ಟ್ರೀಯ ಮಟ್ಟದಲ್ಲಿ 2 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅಂಥ ಸಂದರ್ಭವಿರುವಾಗ, 25 ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕಂಥ ಬೆಂಗಳೂರು ನಗರದ ಒಬ್ಬ ಪ್ರತಿಭಾವಂತ ವಿದ್ಯಾರ್ಥಿ ವೈ2ಕೆ ಸಮಸ್ಯೆಯನ್ನು ಅತ್ಯಂತ ಸರಳವಾಗಿ ಬಗೆಹರಿಸಿದ ಮೇಲೆ, ಇಡೀ ವಿಶ್ವದ ಬಂಡವಾಳಶಾಹಿಗಳು ಬೆಂಗಳೂರಿನ ಜನ ಬುದ್ಧಿವಂತರು, ಕರ್ನಾಟಕದ ಜನ ಬುದ್ಧಿವಂತರು ಎಂದು ಹೇಳಿ, 1997ನೇ ಇಸವಿಯಲ್ಲಿ ಮೊಟ್ಟ ಮೊದಲನೇ ಬಾರಿಗೆ ಅಂತರರಾಷ್ಟ್ರೀಯ ಬಂಡವಾಳ ಬೆಂಗಳೂರು ನಗರಕ್ಕೆ ಬಂತು. ಅಂಥ ಬಂಡವಾಳ ಬಂದಾಗ, ಅದನ್ನು ಸ್ವಾಗತ ಮಾಡಬೇಕು ಎಂದು ಹೇಳಿ ಅಂದಿನ ಸರ್ಕಾರ ಸಿಂಗಲ್ ವಿಂಡೋ ಸಿಸ್ಟಂಅನ್ನು ತರುವುದರ ಮುಖಾಂತರ ಮಾಡಿತು. ಆದರೆ, ಈ ಐ.ಟಿ., ಬಿ.ಟಿ.ಗೋಸ್ಕರ ಕರ್ನಾಟಕ ಸರ್ಕಾರ 1997ರವರೆಗೂ ಯಾವುದೇ ವಿಶಿಷ್ಟವಾದ ಕಾರ್ಯಕ್ರಮವನ್ನು ಈ ರಾಜ್ಯದಲ್ಲಿ ಹಮ್ಮಿಕೊಂಡಿರಲಿಲ್ಲ. ಬೆಂಗಳೂರು ನಗರದ ಜನತೆಯ ಪ್ರತಿಭೆ, ಬೆಂಗಳೂರು ನಗರದ ಜನತೆಯ ಶಾಂತಿ, ಬೆಂಗಳೂರಿನ ವಾತಾವರಣ ಇದಕ್ಕೆ ಮೂಲಭೂತ ಕಾರಣವಾಗಿತ್ತು. ಯಾವುದೇ ಸರ್ಕಾರ, ರಾಜ್ಯದ ಬೇರೆ ಭಾಗಗಳನ್ನು ಧಿಕ್ಕರಿಸಿ ಬೆಂಗಳೂರು ನಗರಕ್ಕೆ ಏನೂ ಮಾಡಿಕೊಟ್ಟಿಲ್ಲ. ಇದು ಅಂಕಿಅಂಶಗಳ ಸಮೇತವಾಗಿ ಈ ರಾಜ್ಯದಲ್ಲಿದೆ. ಎರಡನೆಯದಾಗಿ, ಬೆಂಗಳೂರು ನಗರದ ಹಾಗೆ ಬೇರೆ ಐದು ನಗರಗಳು ಬೆಳೆಯದೇ ಇರಲು ಕಾರಣ ಕೆ.ಎಂ.ಸಿ. ಆ್ಯಕ್ಟ್‌ನ 74ನೇ ಅಮೆಂಡ್‌ಮೆಂಟನ್ನು ಭಾರತ ದೇಶದ ಎಲ್ಲಾ ರಾಜ್ಯಗಳು ಸಮರ್ಥವಾಗಿ ಉಪಯೋಗಿಸಿಕೊಂಡವು. ಆದರೆ, ಕರ್ನಾಟಕ ರಾಜ್ಯ ಈ 74ನೇ ಅಮೆಂಡ್‌ಮೆಂಟನ್ನು ಇವತ್ತಿನವರೆಗೆ ಸಮರ್ಥವಾಗಿ ಉಪಯೋಗಿಸಿಕೊಂಡವು. ಆದರೆ, ಕರ್ನಾಟಕ ರಾಜ್ಯ ಈ 74ನೇ ಅಮೆಂಡ್‌ಮೆಂಟನ್ನು ಇವತ್ತಿನವರೆಗೆ ಸಮರ್ಥವಾಗಿ ಉಪಯೋಗಿಸಿಕೊಂಡಿಲ್ಲ. ಇವತ್ತಿನವರೆಗೆ ಹುಬ್ಬಳ್ಳಿ ನಗರಪಾಲಿಕೆಯಾಗಿರಬಹುದು, ಮೈಸೂರು ನಗರಪಾಲಿಕೆಯಾಗಿರಬಹುದು, ಧಾರವಾಡ ನಗರಪಾಲಿಕೆಯಾಗಿರಬಹುದು, ಮಂಗಳೂರು ನಗರಪಾಲಿಕೆಯಾಗಿರಬಹುದು, ಇವುಗಳು ಸರ್ಕಾರದ ಅಧೀನದಲ್ಲೇ ಇವೆ. ಇವುಗಳ ಸ್ವಾವಲಂಬನೆಯಾಗಿ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಇಲ್ಲಿ ಅಮೆಂಡ್‌ಮೆಂಟನ್ನು ಮಾಡಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಈ ಪುಸ್ತಕದಲ್ಲಿ 74ನೇ ಅಮೆಂಡ್‌ಮೆಂಟನ್ನು ಸಮಗ್ರವಾಗಿ ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ನೋಡೋಣ, ಈ 74ನೇ ಅಮೆಂಡ್‌ಮೆಂಟ್ ಮುಖಾಂತರ ಕರ್ನಾಟಕದ ಎಲ್ಲಾ ಮಹಾನಗರಗಳನ್ನು ಬೆಳೆಸಲು ಸಾಧ್ಯವೇ ಎಂದು ನೋಡೋಣ. ಇವತ್ತು ರಾಷ್ಟ್ರಪತಿಗಳು "ಪುರ' ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ನಿಮಗೆ ಒಂದು ವಿಷಯ

ಗೊತ್ತಿದೆಯೇ ನಗರಪಾಲಿಕೆಗಳು 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾದರೂ ಸರ್ಕಾರವನ್ನು ಕೇಳಬೇಕಾದಂಥ ಪರಿಸ್ಥಿತಿ ಇದೆ. ನಾನು ಬೆಂಗಳೂರಿನ ಮೇಯರ್ ಆಗಿದ್ದಾಗ, ಮೊಟ್ಟಮೊದಲನೇ ಬಾರಿಗೆ 2002–03ರಲ್ಲಿ ಎಸ್ಕ್ರೋ ಅಕೌಂಟನ್ನು ತರುವುದರ ಮುಖಾಂತರ ಬೆಂಗಳೂರು ನಗರಪಾಲಿಕೆಯನ್ನು ಸ್ವಾವಲಂಬನೆಯ ಮಹಾನಗರಪಾಲಿಕೆಯನ್ನಾಗಿ ಮಾಡಿದ ಹೆಗ್ಗಳಿಕೆ ನಮಗೆ ಸೇರಬೇಕಾಗುತ್ತದೆ. ಆವತ್ತಿನಿಂದ ಇವತ್ತಿನವರೆಗೂ ಬೆಂಗಳೂರಿನಲ್ಲಿ ಆಗಿರುವ ಫ್ಲೈ ಓವರ್‌ಗಳಾಗಿರಬಹುದು, ಮಾರುಕಟ್ಟೆಯಾಗಿರಬಹುದು, ಇನ್‌ಫ್ರಾಸ್ಟ್ರಕ್ಚರ್ ಆಗಿರಬಹುದು, ಇಂಥವುಗಳನ್ನು ಮಾಡುತ್ತಿರುವುದು ಬೆಂಗಳೂರು ಮಹಾನಗರಪಾಲಿಕೆಯ ಸ್ವಂತ ದುಡ್ಡಿನಿಂದ. ಸರ್ಕಾರದ ಒಂದು ರೂಪಾಯಿಯ ಅವಲಂಬನೆಯೂ ಇಲ್ಲದೇ, ಬೆಂಗಳೂರು ಮಹಾನಗರಪಾಲಿಕೆ ಮಾಡಲು ಶುರುಮಾಡಿದ್ದು 2002–03ರಿಂದ. ಅದಕ್ಕೆ ಮುಂಚೆ, ನಾವು 30 ಲಕ್ಷ ರೂಪಾಯಿಗಳಿಗೆ ಅಪ್ರೂವಲ್ ತೆಗೆದುಕೊಳ್ಳಬೇಕಾಗಿದ್ದರೆ ನಾವು ಸರ್ಕಾರದ ಹತ್ತಿರ ಬಂದು ಕೈಕಟ್ಟಿಕೊಂಡು ನಿಂತುಕೊಳ್ಳಬೇಕಾಗಿತ್ತು. ಆವತ್ತಿನ ದಿವಸ ಅದನ್ನು ಮನವರಿಕೆ ಮಾಡಿಕೊಂಡ ನಾವು ಕನಿಷ್ಟ 2 ಕೋಟಿ ರೂಪಾಯಿಗಳವರೆಗೆ ನಾವೇ ಮಾಡಿಕೊಳ್ಳಬೇಕೆಂದು ನಿರ್ಧಾರ ಮಾಡಿ, ಇವತ್ತು ಆ ಪರಿಸ್ಥಿತಿ ಬಂದಿದೆ. ಮಾನ್ಯ ರಾಜೇಂದ್ರನ್‌ರವರು ಒಂದು ಮಾತನ್ನು ಹೇಳಿದರು. ಅದೇರೀತಿ ಇವತ್ತು ಬೆಂಗಳೂರು ನಗರಪಾಲಿಕೆಗೆ ಆ ಸಮಸ್ಯೆ ಬಂದಿದೆ. ಪಾಲಿಕೆ 300 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಬೇಕೆಂದು ಹೇಳಿ ನಾವು ಕಳೆದ ನಾಲ್ಕು ವರ್ಷಗಳಿಂದ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಇಟ್ಟಿದ್ದೇವೆ. ಇದಕ್ಕೆ ನಮಗೆ 300 ಎಕರೆ ಜಮೀನು ಬೇಕು. ಇವತ್ತು ಆ 300 ಎಕರೆ ಜಮೀನನ್ನು ನಮಗೆ ಕೊಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಬೆಂಗಳೂರು ನಗರದಲ್ಲಿ ನಾವು ಒಂದು ದಿನಕ್ಕೆ ಎರಡು ಸಾವಿರ ಮೆಟ್ರಿಕ್ ಟನ್ ಕಸವನ್ನು ಉತ್ಪತ್ತಿ ಮಾಡುತ್ತಿದ್ದೇವೆ. ಈ ಎರಡು ಸಾವಿರ ಮೆಟ್ರಿಕ್ ಟನ್ ಕಸದಿಂದ ಎರಡು ಜನರೇಷನ್‌ಗಾಗುವಷ್ಟು ವಿದ್ಯುತ್ ಉತ್ಪಾದಿಸಲು ನಾವು ಡಿಸೈನ್ ಮಾಡಿದ್ದೇವೆ. ಅಂದರೆ, 2020ನೇ ಇಸವಿಗೆ ನಾವು ಡಿಸೈನ್ ಮಾಡಿದ್ದೇವೆ. ರಾಜಕಾರಣಿಗಳು ಎಂದೆಂದೂ ದಡ್ಡರಲ್ಲ. ಈ ಎರಡು ಡಿಸೈನ್‌ಗಳಿಂದ ಎರಡು ಜನರೇಷನ್‌ಗಾಗುವಷ್ಟು 300 ಮೆಗಾವ್ಯಾಟ್ ವಿದ್ಯುತ್ತನ್ನು ನಾವು ಉತ್ಪಾದನೆ ಮಾಡಲಿಕ್ಕೆ ಸಾಧ್ಯ ಉಂಟು. ನಾವು ಸರ್ಕಾರಕ್ಕೆ ಕೇಳಿರುವ ವಿಷಯಗಳು ಹೀಗಿವೆ. ಎಕ್ಸೈಸ್‌ನಲ್ಲಿ ಮಾನ್ಯತೆ ಮಾಡಿಕೊಡಿ, ತೆರಿಗೆಯಲ್ಲಿ ಮಾನ್ಯತೆ ಮಾಡಿಕೊಡಿ, ಸಾಫ್ಟಲೋನ್ ಪಡೆಯುವುದಕ್ಕೆ ಅವಕಾಶ ಮಾಡಿಕೊಡಿ. ಹೀಗೆ ಒಟ್ಟು ನಾಲ್ಕು ಅಂಶಗಳನ್ನು ರಾಜ್ಯ ಸರ್ಕಾರದ ಮುಂದೆ ಇಟ್ಟಿದ್ದೇವೆ. ಅವುಗಳನ್ನು ಇವತ್ತಿನವರೆಗೆ ಸರ್ಕಾರ ಮಾಡಿಕೊಟ್ಟಿಲ್ಲ. ಇವತ್ತು ರಾಜ್ಯ ಸರ್ಕಾರ ಅದನ್ನು ಮಾಡಿಕೊಟ್ಟರೆ, ಬೆಂಗಳೂರು ನಗರಕ್ಕೆ ಬೇಕಾದ ವಿದ್ಯುತ್ತನ್ನು ನಾವೇ ಸೃಷ್ಟಿ ಮಾಡುತ್ತೇವೆ. ಬೆಂಗಳೂರು ಮಹಾ ನಗರಪಾಲಿಕೆಗೆ ಆ ಶಕ್ತಿ ಇದೆ. ಆದರೆ ಸಮನ್ವಯದ ಕೊರತೆ ನಮ್ಮ ಮುಂದೆ ಎದ್ದುಕಾಣುತ್ತಿದೆ. The difference between the government and the Palike is so big. ಆರ್ಥಿಕ ಇಲಾಖೆಗೆ ಹೇಳಿ, ನಮಗೆ ಸಾಕಾಗಿದೆ. ಅವರೆಲ್ಲರೂ ಸಾರ್ವಭೌಮರ ತರಹ ಮೆರೆಯುತ್ತಿದ್ದಾರೆ. ಒಂದೊಂದು ಕಡತವೂ ಅಲ್ಲಿ ಬಾಕಿ ಉಳಿದಿರುತ್ತದೆ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದ ಮೇಲೆ, ಕಡತಗಳ ವಿಲೇವಾರಿ ಆಗುತ್ತದೆ ಎನ್ನುವ ಆಸೆಯನ್ನು, ಕನಸನ್ನು ನಾನು ಇಟ್ಟುಕೊಂಡಿದ್ದೇನೆ. ಆ ರೀತಿಯ ಕನಸನ್ನು ಇಟ್ಟುಕೊಂಡಂಥ ಹಲವಾರು ಯುವಕರಲ್ಲಿ ನಾನೂ ಒಬ್ಬ. ಈ ಬಜೆಟ್ ಆದಮೇಲೆ ಏನಾಗುತ್ತದೆನ್ನುವುದನ್ನು ಕಾಯೋಣ. ಎಷ್ಟು ಕಡತಗಳು ಇಲ್ಲಿವೆ ಗೊತ್ತೇ? ಅವರು

ಹಗಲೂ ರಾತ್ರಿ ಹೇಳುತ್ತಿದ್ದಾರೆ, ಬೆಂಗಳೂರು ನಗರವನ್ನು ಕಟ್ಟಬೇಕು, ಅದನ್ನು ಈ ರಾಷ್ಟ್ರಕ್ಕೆ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ಮಾದರಿಮಾಡಬೇಕು ಎನ್ನುವ ಕೂಗು ಇದ್ದು, ಈ ಕೂಗು ಎಷ್ಟು ಜನರಿಗೆ ಕೇಳಿಸುತ್ತಿದೆ ಎನ್ನುವ ಮಾತು ಇವತ್ತು ಬಹಳ ಮುಖ್ಯ. 240 ಕೋಟಿ ರೂಪಾಯಿಗಳ ಆದಾಯವಿರತಕ್ಕಂಥ ನಾವು ಸ್ವಾವಲಂಬನೆಯಿಂದ ಬೆಂಗಳೂರು ನಗರವನ್ನು ಕಟ್ಟಿದ್ದೇವೆ. ದಯಮಾಡಿ ಎಲ್ಲ ಮಾನ್ಯ ಹಿರಿಯ ಸದಸ್ಯರಿಗೆ ಬೇಡಿಕೊಳ್ಳುತ್ತೇನೆ. ಇಡೀ ರಾಜ್ಯ ಬೆಳವಣಿಗೆಯಾಗಬೇಕು ಎನ್ನುವುದರಲ್ಲಿ ಎರಡನೇ ಮಾತೇ ಇಲ್ಲ. ಆದರೆ ಬೆಂಗಳೂರು ಸ್ವಾವಲಂಬನೆಯಾಗಲಿಲ್ಲವೆಂದರೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಿಮ್ಮ ಬೆಳವಣಿಗೆ ಸಾಧ್ಯವೇ ಎನ್ನುವುದನ್ನು ಆಲೋಚನೆ ಮಾಡಬೇಕು. ಸಪ್ನ ಎನ್ನುವ ಒಬ್ಬ ಬಂಡವಾಳಶಾಹಿ ಹುಡುಗಿ ಇವತ್ತು ಅಮೇರಿಕಾ, ನ್ಯೂಯಾರ್ಕ್‌ನಲ್ಲಿ ಒಂದು ಮಾತನ್ನು ಹೇಳುತ್ತಾಳೆ. ಬೆಂಗಳೂರು ನಗರ ಇಷ್ಟು ದಿನ ಮೆಟ್ರೋಪಾಸಿ ನಗರವಾಗಿತ್ತು. Today it has become merit-posyಎಂದು ಹೇಳುತ್ತಾಳೆ. ಈ ವಿಶ್ವದಲ್ಲಿ ಮೆರಿಟ್‌ಗೆ ಆದ್ಯತೆ ಯಾವುದಾದರೂ ಇದ್ದರೆ ಅದು ಬೆಂಗಳೂರು ನಗರ ಎಂದು ಅಮೇರಿಕಾ ರಾಷ್ಟ್ರ ಕೂಗಿ ಕೂಗಿ ಹೇಳುತ್ತಿದೆ. ಇಂಥ ಸಂಪದ್ಭರಿತವಾದ ರಾಷ್ಟ್ರವನ್ನು ಬೆಳೆಸಬೇಕೇ, ಬೆಳೆಸಬಾರದೇ ? ಇಂಥ ಪ್ರತಿಭಾವಂತ ನಗರವನ್ನು ಬೆಳೆಸಬೇಕೇ, ಬೆಳೆಸಬಾರದೇ ? ಇವತ್ತು ಇಡೀ ರಾಜ್ಯ ಬೆಳೆಯಲಿ. ಅದರ ಜೊತೆಜೊತೆಗೇ ನಗರಗಳೂ ಬೆಳೆಯಲಿ. ಅಂಥ ಒಂದು ಪರಿಸ್ಥಿತಿ, ಅಂಥ ಒಂದು ವಾತಾವರಣ ಬೇಕು. ಮೂಲಭೂತವಾಗಿ ಬೆಂಗಳೂರು ನಿವಾಸಿಗಳು ಇರತಕ್ಕಂಥಾದ್ದು 21 ಲಕ್ಷ ಜನ. ಇವರ ಹೊರತಾಗಿ ಇಲ್ಲಿರತಕ್ಕಂಥವರು ಯಾರು ? ಇಲ್ಲಿ ಬಂದಿರತಕ್ಕಂಥ ನನ್ನ ಅಣ್ಣತಮ್ಮಂದಿರ, ನಮ್ಮ ಗುರುಹಿರಿಯರ ಮಕ್ಕಳು, ಮೊಮ್ಮಕ್ಕಳು, ಸಂಬಂಧಿಕರು. ಅಂಥ ಒಂದು ರಾಜ್ಯ ಇದು. ನಮಗೆ ಎಲ್ಲ ನಗರಗಳೂ ಬೆಳೆಯಬೇಕು.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸದಸ್ಯರು ಉತ್ಸಾಹದಿಂದ ಮಾತನಾಡುತ್ತಿದ್ದಾರೆ. ಬಹಳ ಸಂತೋಷ. ಅವರು ಅನುಭವಸ್ಥರು, ಮೇಯರ್ ಆಗಿದ್ದವರು. ಆದರೆ ಇದು ಕಾರ್ಪೊರೇಟರ್ ತರಹ ಮಾತನಾಡುತ್ತಿರತಕ್ಕಂಥಾದ್ದು ಆಗಿದೆ. ದಯಮಾಡಿ, ಅವರೂ ಈ ಸದನದ ಒಬ್ಬ ಸದಸ್ಯರು ಈ ಸರ್ಕಾರದಲ್ಲಿ ಅವರೂ ಸಹ ಒಬ್ಬ ಶಾಸಕರಾಗಿ, ಈ ಸರ್ಕಾರದ ಎಲ್ಲಾ ಆಗುಹೋಗುಗಳಲ್ಲಿ ಭಾಗಿಯಾಗಿರತಕ್ಕಂಥವರು. ಬೆಂಗಳೂರು, ರೂರಲ್, ಅರ್ಬನ್ ಎನ್ನುವುದು ನಮ್ಮಲ್ಲಿ ಇಲ್ಲ. ಇಡೀ ಸಮಗ್ರ ಕರ್ನಾಟಕದ ಚಿಂತನೆ ಈ ಸರ್ಕಾರಕ್ಕೆ ಇರತಕ್ಕಂಥಾದ್ದು. ಅದು ಈ ಸದನದ ಎಲ್ಲಾ ಸದಸ್ಯರ ಜವಾಬ್ದಾರಿ. ಮಾನ್ಯ ರಾಷ್ಟ್ರಪತಿಯವರು ನಮಗೆ ಹನ್ನೊಂದು ಅಂಶಗಳ ಕಾರ್ಯಕ್ರಮದ ಬಗ್ಗೆ ಚಿಂತನೆ ಮಾಡಲು ಕೊಟ್ಟಿದ್ದಾರೆ. ಅದರ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊದಲಿನಿಂದಲೂ ಹೇಳಿಕೊಂಡು ಬರುತ್ತಿದ್ದಾರೆ, ಅದರಲ್ಲೂ ಆದ್ಯತೆಯನ್ನು ಬೆಂಗಳೂರು ನಗರಕ್ಕೆ ಕೊಡಬೇಕು ಎನ್ನುವುದರ ಬಗ್ಗೆ ಹೇಳಿದ್ದಾರೆ. ಮಾಧ್ಯಮದವರು ಇಲ್ಲಿ ಕುಳಿತಿದ್ದಾರೆ ಎಂದು ಮಾನ್ಯ ಚಂದ್ರಶೇಖರ್‌ರವರು ಈ ರೀತಿ ಮಾತನಾಡುತ್ತಿರಬಹುದು. ಅದರಿಂದ ಏನಾಗುತ್ತದೆ ಎಂದರೆ, ಈ ಸರ್ಕಾರ ಬೆಂಗಳೂರಿಗೆ ವಿರುದ್ಧವಾಗಿದೆ, ಇಡೀ ಶಾಸಕರು ಬೆಂಗಳೂರಿಗೆ ವಿರೋಧವಾಗಿದ್ದಾರೆ ಎನ್ನುವ ಮೆಸೇಜ್ ಹೋಗುತ್ತಿದೆ. ನಮ್ಮ ಮಾನ್ಯ ಅಧ್ಯಕ್ಷರ ಮೂಲಕ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರಿಗೆ ಬೆಂಗಳೂರು ಬಗ್ಗೆ ಎಷ್ಟು ಕಾಳಜಿ ಇದೆಯೋ, ಬೆಂಗಳೂರಿನಲ್ಲಿ ಹುಟ್ಟಿ ವಾಸವಾಗಿರುವವರಿಗಿಂತ ಹೊರಗಡೆಯಿಂದ ಬಂದು

ಓಡಾಡತಕ್ಕಂಥವರು, ಹೊರಗಡೆಯಿಂದ ಬಂದು ವಾಸವಾಗಿರತಕ್ಕಂಥವರು ಶೇಕಡಾ ೭೦ ರಷ್ಟು ಇದ್ದಾರೆನ್ನುವುದನ್ನು ದಯಮಾಡಿ ತಾವು ತಿಳಿದುಕೊಳ್ಳಬೇಕು. ಬೆಂಗಳೂರು ಹೊರವಲಯ ಎನ್ನುವ ಪ್ರಶ್ನೆ ಇಲ್ಲಿ ಇಲ್ಲ. ಸರ್ಕಾರಕ್ಕೆ ಎಲ್ಲಾ ಆದ್ಯತೆ ಇದೆ. ಒಬ್ಬ ಕೊನೆಯ ಹಳ್ಳಿಯಲ್ಲಿ ಬದುಕತಕ್ಕಂಥವನಿಗೂ ಸಹ ಈ ಸರ್ಕಾರ ಮೂಲಭೂತ ಸೌಲಭ್ಯವನ್ನು ಕೊಡಬೇಕಾಗಿದೆ. ತಮ್ಮ ಕಾಳಜಿಯನ್ನು ನಾನು ಅಭಿನಂದಿಸುತ್ತೇನೆ. ಆದರೆ ತಾವು ಬಹಳ ಉದ್ವೇಗದಿಂದ ನಮ್ಮ ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ ಎನ್ನುವ ಪದಗಳನ್ನು ಹೇಳಿದ್ದೀರಿ, ತಾವು ಶಾಸಕರಾಗಿ ಇಲ್ಲಿಗೆ ಮೊದಲನೆ ಬಾರಿಗೆ ಬಂದಿದ್ದೀರಿ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಚಂದ್ರಶೇಖರ್ : ಪ್ರಾಯಶಃ ಮಾನ್ಯ ಸಚಿವರು ಈ ಸದನದಲ್ಲಿ ಎರಡು ದಿವಸ ಇರಲಿಲ್ಲ. ಬಹಳಷ್ಟು ಜನ ಈ ಸದನದಲ್ಲಿ ಮಾತನಾಡುವಾಗ ಬೆಂಗಳೂರು ಬಗ್ಗೆ ಮಾತನಾಡಿದ್ದಕ್ಕೆ ನಾನು ಹೇಳಬೇಕಾಯಿತು. ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ' ಅತ್ಯುತ್ತಮವಾದ ಭವಿಷ್ಯದ ಮಾದರಿ ಬೆಂಗಳೂರು' ಕುರಿತು ಮಾತನಾಡಿರುವ ಬಗ್ಗೆ ನಮಗೆಲ್ಲರಿಗೂ ಅಭಿಮಾನ ಇದೆ. ನಾವೂ ಸಹ ಅವರ ಜೊತೆಗೆ ಕನಸು ಕಟ್ಟಿಕೊಂಡಿದ್ದೇವೆ. ಹಾಗಾಗಿ infact ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಒಂದು ವಿಷಯ ಗೊತ್ತಾದ ತಕ್ಷಣ ಬೆಂಗಳೂರಿನ ಪ್ರದಕ್ಷಿಣೆಗೆ ಬಂದಾಗ ನಾವೆಲ್ಲರೂ ಸಂತೋಷಪಟ್ಟಿದ್ದೇವೆ. ನಾವೆಲ್ಲರೂ ತುಂಬಾ ಆಸೆ ಇಟ್ಟುಕೊಂಡಿದ್ದೇವೆ. ನಾನು ಹೇಳಿದ್ದು ಪ್ರಾಯಶಃ ನಿಮಗೆ ಅರ್ಥವಾಗಲಿಲ್ಲ. ಘನತೆವೆತ್ತ ಮಾನ್ಯ ಕಲಾಂರವರ ೧೧ ಕನಸುಗಳಲ್ಲಿ ಬೆಂಗಳೂರು ಸಹ ಒಂದಾಗಿದೆ. ಆ ಕನಸುಗಳನ್ನು ಜಾರಿಗೆ ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಆಸಕ್ತರಾಗಿದ್ದಾರೆ. ಇಲ್ಲಿ ಇರುವವರೆಲ್ಲಾ ಅದು ಆಗುವುದೇ ಇಲ್ಲ ಎಂದು ವಾದ ಮಾಡುತ್ತಿದ್ದಾರೆ. ಅದು ಆಗುತ್ತದೆ ಎಂದು ನಾನು ಅವರ ಪರ ಇದ್ದೇನೆ ನೀವು ಇರಲಿಲ್ಲ. ಈಗ ಮಾನ್ಯ ರಾಜೇಂದ್ರರವರೂ ಸಹ ಆಗುವುದಿಲ್ಲ ಎಂದು ಹೇಳಿದರು. ಇನ್ನೊಬ್ಬರು ಸಹ ಆಗಲ್ಲ ಎಂದು ಹೇಳಿದರು. ಕೆಲವು ವಿಷಯಗಳಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ ಹಾಗೆ bio technology ಅಂಥ ವಿಷಯಗಳಲ್ಲಿ ಆಗದೇ ಇರಬಹುದು ಎನ್ನತಕ್ಕಂಥಾದ್ದು ಇದೆ. ಆದರೆ ಇದರಲ್ಲಿ ಆಗತಕ್ಕಂಥಾದ್ದು ಸಹ ಇದೆ. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲರೂ ಒಂದೇ ಸಾರಿಗೆ ಆಗುವುದಿಲ್ಲವೆಂದು ತಣ್ಣೀರು ಎರಚಿಬಿಟ್ಟರೆ ಹೇಗೆ ? ಆಗುವಂಥ ವಿಷಯಗಳೂ ಸಹ ಇವೆ. ಹಾಗಾಗಿ ನಾವೂ ಸಹ ಅವರ ಕನಸುಗಳಿಗೆ ಭಾಗಿಯಾಗಬೇಕಲ್ಲವೇ ? ಅವರ ಕನಸುಗಳಿಗೆ ನಾವೂ ಸಹ encourage ಮಾಡಬೇಕಲ್ಲವೇ ? ಹಾಗಾಗಿ, ಬೆಂಗಳೂರು ಶಾಸಕರಾಗಿ ಬೆಂಗಳೂರು ಹೇಗೆ ಬೆಳೆಯಿತು, ಹೇಗ್ಹೇಗೆ ಆಗುತ್ತಿದೆ ಎಂದು ಹೇಳುವ ಜವಾಬ್ದಾರಿ ನಮಗೆ ಇದೆ. ಆ ಕಾರಣಗಳಿಂದ ನಾವು ಹೇಳುತ್ತಿದ್ದೇವೆ. ಇನ್ನೂ ಬಹಳ ವಿಷಯಗಳ ಮೇಲೆ ಮಾತನಾಡುವುದಿದ್ದರೂ ಸಹ ಸಮಯದ ಅಭಾವದಿಂದ ಕೊನೆಯ ಮಾತನ್ನು ಹೇಳಿಬಿಡುತ್ತೇನೆ. ಬೆಂಗಳೂರಿನ ಬೆಳವಣಿಗೆಯಿಂದ ಒಟ್ಟು ಆದಾಯ ೮ ಸಾವಿರದಿಂದ ೧೦ ಸಾವಿರ ಕೋಟಿ ರೂಪಾಯಿಗಳು ಇರತಕ್ಕಂಥಾದ್ದು. ಈ ೧೦ ಸಾವಿರ ಕೋಟಿ ರೂಪಾಯಿಗಳಲ್ಲೂ ಸಹ ಬೆಂಗಳೂರಿಗೆ ಏನು ಆದಾಯ ಸಿಗಬೇಕೋ ಅದು ಸಿಗುತ್ತಿಲ್ಲ. ಬಾಂಬೆ ಮಹಾನಗರ ಪಾಲಿಕೆಯಲ್ಲಿ Octroi ನ ಎಲ್ಲಾ ಆದಾಯವನ್ನು ಬಾಂಬೆ ಮಹಾನಗರ ಪಾಲಿಕೆಗೆ ಕೊಟ್ಟು ಬಾಂಬೆ ನಗರವನ್ನು ಬೆಳೆಸುತ್ತಿದ್ದಾರೆ, ಕಲ್ಕತ್ತಾವನ್ನು ಬೆಳೆಸುತ್ತಿದ್ದಾರೆ. ಹೊಸದಾಗಿ ಹೈದರಾಬಾದ್ ಅನ್ನು ತೆಗೆದುಕೊಂಡು ಮಾಡುತ್ತಿದ್ದಾರೆ. ಆದರೆ, ಇಲ್ಲಿ ಅದು ಆಗುತ್ತಿಲ್ಲ. ಕೊನೆಯದಾಗಿ

ಬೆಂಗಳೂರಿನಿಂದ ಅಂತರರಾಷ್ಟ್ರೀಯ ಮಟ್ಟದ Foreign exchange ನಲ್ಲಿ ಇವತ್ತು ನಮಗೆ ೨೮ ಸಾವಿರ ಕೋಟಿ ರೂಪಾಯಿಗಳಷ್ಟು ರಫ್ತು ಆಗುತ್ತಿದೆ. ಇದರಿಂದ ಬೆಂಗಳೂರು ನಗರದಿಂದ ಅಂತರರಾಷ್ಟ್ರೀಯ ಮಟ್ಟದಲ್ಲೂ ಸಹ Dollar fluctuation ಆಗಿ ಅಂತರರಾಷ್ಟ್ರೀಯ ಹಣಕಾಸಿನ ವ್ಯವಸ್ಥೆ ಇವೆಲ್ಲವೂ ಆಗುತ್ತಿರುವುದರಿಂದ ಬೆಂಗಳೂರು ನಗರ ಪ್ರಾಮುಖ್ಯತೆಯನ್ನು ಪಡೆದಂಥ ನಗರವಾಗಿದೆ ಎಂದು ಹೇಳಿ, ಇಡೀ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಾಗಲಿ, ಮಾನ್ಯ ಮುಖ್ಯಮಂತ್ರಿಗಳ ಎಲ್ಲಾ ಕನಸು ನನಸಾಗಲಿ, ಇದರಿಂದ ನಾವೆಲ್ಲರೂ ಸಂತೋಷಪಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಸಿ.ಟಿ. ರವಿಯವರು ಮಾತನಾಡಿ. ತಾವು ಹತ್ತು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ನವೆಂಬರ್ ೨೦ ನೇ ತಾರೀಖು ಅನುಷ್ಠಾನಗೊಳಿಸುವ ಬಗ್ಗೆ ತಾವೇನು ಇವತ್ತು ವಿಶೇಷ ಅಧಿವೇಶನವನ್ನು ಕರೆದು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಈ ಹಿಂದಿನ ಮುಖ್ಯಮಂತ್ರಿಗಳು ಮತ್ತು ಇವತ್ತಿನ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಮಾನ್ಯ ಧರ್ಮಸಿಂಗ್‌ರವರು ಮಾತನಾಡುತ್ತಾ ' ಬಿ. ಜೆ. ಪಿ. ಒಂದು emotional party, ಬಿ.ಜೆ.ಪಿ. ಗೆ ಒಂದು vision ಇಲ್ಲ, ಬಿ.ಜೆ.ಪಿ.ಗೆ ಅಭಿವೃದ್ಧಿ ದೃಷ್ಟಿಕೋನ ಇಲ್ಲ, ಅಂಥ ಪಕ್ಷದ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿರತಕ್ಕಂಥ ನೀವು ಈ ೧೧ ಸೂತ್ರಗಳನ್ನು ಅನುಷ್ಠಾನ ಮಾಡತಕ್ಕಂಥ ಚಿಂತನೆಯನ್ನು ಏನು, ಹೇಗೆ ಮಾಡುತ್ತೀರಿ ಎನ್ನತಕ್ಕಂಥ ವ್ಯಂಗ್ಯದ ಧಾಟಿಯಲ್ಲಿ ಹೇಳಿದರು. ಬಹುಶಃ ಈ ದೇಶದ ಇತಿಹಾಸದಲ್ಲಿ ೫೪ ವರ್ಷಗಳಲ್ಲಿ ೪೮ಕ್ಕೂ ಹೆಚ್ಚು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷವೇ ಆಡಳಿತ ನಡೆಸಿದೆ. ಅಜೀರ್ಣವಾಗುವಷ್ಟು ಬಹುಮತ, ೪೧೮ ಜನ ಎಂ.ಪಿ. ಗಳ ಸಂಖ್ಯೆ ಕಾಂಗ್ರೆಸ್ ಪಕ್ಷಕ್ಕೆ ಇತ್ತು. ೧೯ ರಾಜ್ಯಗಳಲ್ಲಿ ಪೂರ್ಣಪ್ರಮಾಣದ ಬಹುಮತ ಪಡೆದು ಅದು ಆಡಳಿತ ನಡೆಸುತ್ತಿತ್ತು. ಬಿ.ಜೆ.ಪಿ.ಗೆ ಅಭಿವೃದ್ಧಿ ದೃಷ್ಟಿಕೋನ ಇದೆಯೋ ಇಲ್ಲವೋ ಎನ್ನತಕ್ಕಂಥಾದನ್ನು ನಾನು ಅವರಿಗೆ ಹೇಳದೆ ಇದ್ದರೆ ಅವರ ಮಾತು ಸತ್ಯವಾಗಬಹುದು ಎನ್ನುವ ಕಾರಣಕ್ಕೋಸ್ಕರ ಹೇಳಲಿಕ್ಕೆ ಬಯಸುತ್ತಿದ್ದೇನೆ. 50 ವರ್ಷಗಳಲ್ಲಿ ಈ ದೇಶದಲ್ಲಿ ಇದ್ದಂಥ ದೂರವಾಣಿ ಸಂಪರ್ಕ ಕೇವಲ 1 ಕೋಟಿ 86 ಲಕ್ಷ ಮಾತ್ರ N.D.A ಆಡಳಿತದ 6 ವರ್ಷಗಳಲ್ಲಿ 3 ಕೋಟಿ 98 ಲಕ್ಷ ಹೊಸ ದೂರವಾಣಿಗಳ ಸಂಪರ್ಕ ಕೊಡುವುದರ ಮೂಲಕ ಈ ದೇಶದಲ್ಲಿ ಕ್ರಾಂತಿ ಆಯಿತು. 50 ವರ್ಷದಲ್ಲಿ ಕೇವಲ 1 ಕೋಟಿ 86 ಲಕ್ಷ ದೂರವಾಣಿ ಸಂಪರ್ಕ ಕೊಟ್ಟಿದ್ದರೆ ಕೇವಲ 6 ವರ್ಷಗಳಲ್ಲಿ 3 ಕೋಟಿ 98 ಲಕ್ಷ ಆಯಿತು. ಅಂದರೆ ಇದು ಅಭಿವೃದ್ಧಿ ಅಲ್ಲವೇ? 50 ವರ್ಷಗಳಲ್ಲಿ ಅಡಿಗೆ ಅನಿಲ ಸಂಪರ್ಕ ಇದ್ದದ್ದು 3 ಕೋಟಿ 37 ಲಕ್ಷ ಬರೀ 6 ವರ್ಷದಲ್ಲಿ 3.7 ಲಕ್ಷ ಅಡಿಗೆ ಅನಿಲ ಹೆಚ್ಚುವರಿ ಸಂಪರ್ಕ ಕೊಡಲಾಯಿತು. ಅದು ಅಭಿವೃದ್ಧಿ ಅಲ್ಲವೇ? 50 ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಅದು ಚತುಷ್ಕೋನ ಹೆದ್ದಾರಿ ಇರಬಹುದು, ಆರು ಪಥದ ಹೆದ್ದಾರಿ ಇರಬಹುದು. 556 ಕಿ.ಮೀ. 4 ಪಥದ ಹೆದ್ದಾರಿ ಇಡೀ ರಾಷ್ಟ್ರದಲ್ಲಿ ಇದ್ದದ್ದು. N.D.A. ಸರ್ಕಾರದ ಆಳ್ವಿಕೆಯ ಕಾಲದಲ್ಲಿ 14, 846 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಯಿತು. ಇದು

ಇವತ್ತಿಗೂ ಕಣ್ಣಿಗೆ ಕಾಣುತ್ತಿದೆ. N.D.A ಅಧಿಕಾರದಿಂದ ಇಳಿದ ತಕ್ಷಣ ರಾಷ್ಟ್ರೀಯ ಹೆದ್ದಾರಿ ಕೆಲಸ ಅಲ್ಲಿಗೇ ನಿಂತು ಹೋಯಿತು. ಅಂದರೆ ಅಭಿವೃದ್ಧಿಯ ದೃಷ್ಟಿಕೋನ ಇಲ್ಲ ಎನ್ನತಕ್ಕಂಥ ತಪ್ಪು ವ್ಯಾಖ್ಯಾನವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಬಿ.ಜೆ.ಪಿ. ಬಗ್ಗೆ ಮಾಡಿದರೋ, ಇದಕ್ಕೆ ನಾನು ಸಾಕ್ಷಿಗಳ ಆಧಾರದಲ್ಲಿ ಈ ಸತ್ಯವನ್ನು ಸಭೆಯ ಮುಂದಿಡುತ್ತಿದ್ದೇನೆ. ಈಗ ಗುಜರಾತ್‌ನಲ್ಲಿ ಬಿ.ಜೆ.ಪಿ. ಆಡಳಿತ ಇದೆ. No.1 ಅಭಿವೃದ್ಧಿಯ ಮುಖ್ಯಮಂತ್ರಿಯೆಂದು ಬಿರುದು ಕೊಟ್ಟಿದ್ದು ನಾವಲ್ಲ ಆ ಬಿರುದನ್ನು ಕೊಟ್ಟಿದ್ದು ರಾಜೀವಗಾಂಧಿ ಪ್ರತಿಷ್ಠಾನ. ಇದು ಇವರದ್ದೇ ಪಕ್ಷದ ಪ್ರತಿಷ್ಠಾನ No.1 ಮುಖ್ಯಮಂತ್ರಿ ಅಭಿವೃದ್ಧಿ ಪಥದಲ್ಲಿ ಯಾರು ಎಂದರೆ ಅದು ಗುಜರಾತ್ ಇದೇ ಸರ್ಕಾರ ಎಂದು ಬಿರುದು ಕೊಟ್ಟಿತು. ಹಾಗಾಗಿ ನಿಮಗೆ ಅನುಮಾನ ಬೇಡ. ಅಭಿವೃದ್ಧಿ ದೃಷ್ಟಿಕೋನದಲ್ಲಿಯೇ ಮತ್ತು ಈ ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕೆನ್ನುವ ಹಿನ್ನೆಲೆಯಲ್ಲಿಯೇ ಜಾತ್ಯಾತೀತ ದಳದ ಸನ್ಮಾನ್ಯ ಕುಮಾರಸ್ವಾಮಿಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ಅವರ ಜೊತೆಯಲ್ಲಿ ಈ ಸರ್ಕಾರದೊಂದಿಗೆ ಸಹಭಾಗಿತ್ವವನ್ನು ಹೊಂದಿದ್ದೇವೆ. ಈ ಅನುಮಾನ ಮತ್ತು ಅಪನಂಬಿಕೆ ಯಾರಿಗೂ ಈ ರಾಜ್ಯದಲ್ಲಿ ಇರಬಾರದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಮಾನ್ಯ ಮುಖ್ಯಮಂತ್ರಿಗಳೇ, ನಿಜ, ಒಳ್ಳೆಯ ಉದ್ದೇಶದಿಂದಲೇ 'ಗರೀಬಿ ಹಟಾವೋ' ಕಾರ್ಯಕ್ರಮವನ್ನು ಹಿಂದಿನ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿತು. ಆ 'ಗರೀಬಿ ಹಟಾವೋ' ಕಾರ್ಯಕ್ರಮವನ್ನು ಜಾರಿಗೆ ತಂದ ನಂತರ ಗರೀಬಿ ಹಟಾವೋ ಆಗಿದೆ ನಿಜ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಯಾರದ್ದು ಎನ್ನತಕ್ಕಂಥದ್ದು ಮಾತ್ರ ಪ್ರಶ್ನಾರ್ಥಕ. ಗರೀಬಿ ಹಟಾವೋ ಆಗಿದ್ದು ಯಾರದ್ದು? ಅದು ಮಾತ್ರ ಪ್ರಶ್ನಾರ್ಥಕ. ನಿಜವಾಗಿ ಬಡವರ ಗರೀಬಿ ಹಟಾವೋ ಆಯಿತೇ ಅಥವಾ ಬಡವರ ಹೆಸರಿನಲ್ಲಿ ಯಾರ್‍ಯಾರ ಗರೀಬಿ ಹಟಾವೋ ಆಯಿತು ಎನ್ನತಕ್ಕಂಥದ್ದನ್ನು ಇವತ್ತು ಚಿಂತನೆ ಮಾಡಬೇಕಾಗಿದೆ. ನಿಜವಾಗಿಯೂ ಗರೀಬಿ ಹಟಾವೋ ಆಗಿದ್ದರೆ. ಇವತ್ತಿಗೂ ಕೂಡ ಬಡತನ ರೇಖೆಯಲ್ಲಿರತಕ್ಕಂಥವರ ಸಂಖ್ಯೆ 37 ಪರ್ಸೆಂಟ್ 38 ಪರ್ಸೆಂಟ್‌ಗಿಂತಲೂ ಅಧಿಕ ಏಕೆ ಇರುತ್ತಿತ್ತು ಎಂಬುದನ್ನು ಈ ಸಂದರ್ಭದಲ್ಲಿ ನಾನು ಕೇಳುತ್ತಾ ಈ ಸರ್ಕಾರಕ್ಕೆ ಅಭಿವೃದ್ಧಿಯ Commitment ಇದ್ದೇ ಇದೆ. ನನಗೆ ಒಂದು ಶ್ಲೋಕ ನೆನಪಿಗೆ ಬರುತ್ತದೆ. "ಅಯೋಗ್ಯೋ ಪುರುಷೋ ನಾಸ್ತಿ ಯೋಜಕಶ್ಯಪುತ್ರ ದುರ್ಲಭಃ" ಎಂದು. ಯಾರೂ ಕೂಡ ಅಯೋಗ್ಯರು ಇಲ್ಲವಂತೆ. ಅವರನ್ನು ಸರಿಯಾದ ದೃಷ್ಟಿಯಲ್ಲಿ ಜೋಡಿಸಿ ಅಭಿವೃದ್ಧಿ ಪಥಕ್ಕೆ ತೆಗೆದುಕೊಂಡು ಹೋಗತಕ್ಕಂಥ ಸಂಕಲ್ಪ ಶಕ್ತಿ ಮಾತ್ರದ ಅವಶ್ಯಕತೆಯಿದೆಯಂತೆ. ಹಾಗಾಗಿ ಆ ಸಂಕಲ್ಪ ಶಕ್ತಿಯ ಹಿನ್ನೆಲೆಯಲ್ಲಿಯೇ ಈ ವಿಶೇಷ ಅಧಿವೇಶನದಲ್ಲಿ ಸನ್ಮಾನ್ಯ ಅಬ್ದುಲ್ ಕಲಾಂರವರ 11 ಅಭಿವೃದ್ಧಿ ಸೂತ್ರಗಳ ಕುರಿತು ವಿಶೇಷ ಚರ್ಚೆಯನ್ನು ನಾವು ಇಲ್ಲಿ ಮಾಡುತ್ತಿದ್ದೇವೆ. ಈ ಚರ್ಚೆಯಲ್ಲಿ ಕೇವಲ 4 ಅಂಶಗಳನ್ನು ಮಾತ್ರ ನಾನು ಇಲ್ಲಿ ಬಳಸಿಕೊಳ್ಳಲಿಕ್ಕೆ ಬಯಸುತ್ತೇನೆ. ಉಳಿದ ಅಂಶಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋದರೆ ಸಮಯದ ಅಭಾವದ ಕಾರಣದಿಂದ ಕೇವಲ 4 ಅಂಶಗಳನ್ನು ಬಳಸಿಕೊಳ್ಳುತ್ತೇನೆ. ಇನ್ಯಾವುದೇ ಅಭಿವೃದ್ಧಿಗೆ ಭೂಮಿಗೆ ಆಗಬೇಕೆಂದರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಬೇಕು. ಬಹುಶಃ 2 ತಿಂಗಳ ಹಿಂದೆ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಒಂದು ಲೇಖನವನ್ನು ಓದಿದ್ದೇ. ಆ ಲೇಖನದಲ್ಲಿ ಸಿಂಗಾಪುರವನ್ನು ಯಾವ ರೀತಿ ಅಭಿವೃದ್ಧಿ ಪಡಿಸಿದರು ಎನ್ನತಕ್ಕಂಥ ಅಂಶಗಳದ್ದು ಸಿಂಗಾಪುರದ ಮಾಜಿ ಅಧ್ಯಕ್ಷರಾಗಿದ್ದಂಥ ಲೀ ಅವರ ಬಗ್ಗೆ ವಿಶ್ಲೇಷಿಸಿ ಬರೆದಂಥ ಒಂದು ವಿಶೇಷ ಲೇಖನ ಅದಾಗಿತ್ತು ಆ ಸಿಂಗಾಪುರ್ ಒಂದು ಕಾಲದಲ್ಲಿ ಹಾಳು

ಕೊಂಪೆಯಾಗಿತು. ಎಲ್ಲೆಂದರಲ್ಲಿ ಅವ್ಯವಸ್ಥಿತವಾದಂಥ ರಸ್ತೆಗಳು, ಆ ಸಿಂಗಾಪುರಕ್ಕೆ ಜನ ಬಂದರೆ, ಆ ಬಂದರುಕಟ್ಟೆಯಲ್ಲಿ ಹಡಗೇ ನಿಲ್ಲುತ್ತಿರಲಿಲ್ಲವಂತೆ. ತಪ್ಪಿಸಿಕೊಂಡು ಹೋಗಿ ಇನ್ನು ಯಾವುದೋ ದೇಶದಲ್ಲಿ ಹೋಗಿ ವ್ಯಾಪಾರ ಮಾಡುತ್ತಿದ್ದಂಥ ಸಿಂಗಾಪುರವನ್ನು ಹೇಗೆ ಕಟ್ಟಿದರು ಎಂದು ಅವರು ಅದರಲ್ಲಿ ಹೇಳಿದ್ದರು. ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ ಮಾತ್ರ ಈ ಸಿಂಗಾಪುರ್‌ವನ್ನು ಅಭಿವೃದ್ಧಿಪಡಿಸಬಹುದೆಂದು ಯೋಚನೆ ಮಾಡಿ ಅದನ್ನು ಕಟ್ಟಲಿಕ್ಕೆ ಅವರು ಪ್ರಾರಂಭ ಮಾಡಿದ್ದು ಅದಕ್ಕೆ ಅವರು ಆದ್ಯತೆ ಕೊಟ್ಟಿದ್ದು ಯಾವುದೆಂದರೆ, ರಸ್ತೆ ವಿದ್ಯುತ್, ನೀರು ಮತ್ತು ಶಿಕ್ಷಣ ಈ 4 ಆದ್ಯತೆಯ ಅಂಶಗಳನ್ನಾಗಿ ಮಾಡಿಕೊಂಡರು. ಹಾಗಾಗಿ ಈ ರಾಜ್ಯವನ್ನು ನಿಜವಾದ ದೃಷ್ಟಿಯಲ್ಲಿ ಅಭಿವೃದ್ಧಿಪಡಿಸಬೇಕೆಂದರೆ ನಾವು ಮೂಲಭೂತವಾಗಿ ನಮ್ಮ ರಸ್ತೆ ಸುಧಾರಣೆ ಕಡೆಗೆ ಗಮನ ಕೊಡಬೇಕು. ಇವತ್ತು ಶಿಕ್ಷಣ ಹೇಗಿದೆಯೆಂದರೆ, ಮೂಲ ವೃತ್ತಿಯಿಂದಲೂ ಮನುಷ್ಯನನ್ನು ವಂಚಿತನನ್ನಾಗಿ ಮಾಡಿ, ನಿರುದ್ಯೋಗಿಯನ್ನಾಗಿ ಮಾಡತಕ್ಕಂಥ ಒಂದು ಶಿಕ್ಷಣ ವ್ಯವಸ್ಥೆ ಏನಿದೆ, ಆ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಿ, ಇವತ್ತು ಎಲ್ಲ ವೃತ್ತಿಗೂ ಗೌರವ ಕೊಡತಕ್ಕಂಥ ವೃತ್ತಿ ನೈಪುಣ್ಯತೆಯನ್ನು ಪಡೆಯತಕ್ಕಂಥ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬೇಕು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಈ ಸಂದರ್ಭದಲ್ಲಿ ಕೊಡತಕ್ಕಂಥ ಸಲಹೆ ಏನೆಂದರೆ, ಇವತ್ತು Job oriented course ಅನ್ನು ನೀವು 8ನೇ ಕ್ಲಾಸ್‌ನಿಂದಲೇ ಪ್ರಾರಂಭ ಮಾಡಿ. ನನಗೆ ಬಹಳ ಚೆನ್ನಾಗಿ ನೆನಪಿರುವುದು ಎಂದರೆ ಇವತ್ತಿಗೆ 3 ದಶಕಗಳ ಹಿಂದೆ ಅಣ್ಣಾದೊರೈರವರು ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದಾಗ ಅವರು ನಮ್ಮ ಹಾಗೆ feeding ಕೊಡಲಿಲ್ಲವಂತೆ. ಬದಲಿಗೆ ಅವರು Iron Box ಕೊಟ್ಟರು. ಕರಣಿಕೆ ಕೊಟ್ಟರು, ಮಟ್ಟಗೋಲು ಕೊಟ್ಟರು. ಹೋಗು ನೀನು ಗಾರೆ ಕೆಲಸ ಮಾಡು, ದುಡಿ ಎಂದು ಹೇಳಿ ಅವುಗಳನ್ನು ಕೊಟ್ಟರು. ಆ ರೀತಿ ದುಡಿಯಲಿಕ್ಕೆ ಹೊರಟ ಜನ ಇವತ್ತು ದೊಡ್ಡ ಕಂಟ್ರಾಕ್ಟರ್ ಆಗಿ ದೇಶದುದ್ದಗಲಕ್ಕೆ ಬೆಳೆದರು. Iron Box ತೆಗೆದುಕೊಂಡು ಬಂದು ಇಸ್ತ್ರಿ ಮಾಡಲಿಕ್ಕೆ ಅಂಗಡಿ ಇಟ್ಟುಕೊಂಡವನು ಅವನ ಕುಟುಂಬವನ್ನೂ ಸಾಕಿದ ಮತ್ತು ಒಂದು ದೊಡ್ಡ ಲಾಂಡ್ರಿ ಷಾಪನ್ನೂ ಇಟ್ಟ. ಆ ರೀತಿ ವೃತ್ತಿ ನೈಪುಣ್ಯತೆಗೆ ಬೇಕಾಗುವಂಥ ಸಲಕರಣೆಗಳನ್ನು ಕೊಟ್ಟು ಸ್ವಾವಲಂಬಿಯಾಗಿ ಮಾಡತಕ್ಕಂಥ ಯೋಚನೆಯನ್ನು ಮಾಡಿದರು. ಹಾಗಾಗಿ, ನಮಗೊಂದು ಒಳ್ಳೆಯ ಸಾಮಾಜಿಕ ವ್ಯವಸ್ಥೆ ಇದೆ. ಆ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಕುಟುಂಬಕ್ಕೂ ಕೂಡ ತನ್ನದೇ ಆದಂಥ ವೃತ್ತಿ ಇತ್ತು. ನಾವು ಮಾಡಬೇಕಾಗಿದ್ದೇನು? ಆ ವೃತ್ತಿಯಲ್ಲಿದ್ದಂಥ ಮೇಲು-ಕೀಳು ಅನ್ನತಕ್ಕಂಥ ಭಾವನೆಯನ್ನು ಹೋಗಲಾಡಿಸಬೇಕಿತ್ತು. ವೃತ್ತಿ ಗೌರವವನ್ನು ತಂದುಕೊಡಬೇಕಾಗಿತ್ತು. ನೀವು ಆ ವೃತ್ತಿ ಗೌರವವನ್ನು ತಂದುಕೊಡತಕ್ಕಂಥ ಕೆಲಸ ಮಾಡಿ. ಆ ವೃತ್ತಿ ನೈಪುಣ್ಯತೆಯನ್ನು ಕೊಡತಕ್ಕಂಥ ಕೆಲಸ ಮಾಡಿದರೆ ಬಹುಶಃ ಯಾವುದೇ ಕುಟುಂಬ ನಿರುದ್ಯೋಗಿ ಕುಟುಂಬವಾಗಲಿಕ್ಕೆ, ಯಾವುದೇ ವ್ಯಕ್ತಿ ನಿರುದ್ಯೋಗಿ ವ್ಯಕ್ತಿಯಾಗಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ, ಈ ನಿಟ್ಟಿನಲ್ಲಿ ಮಾನ್ಯ ಆದಿಚುಂಚನಗಿರಿ ಸ್ವಾಮಿಗಳು 'ದೇಶ್' ಅನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ನಾನು ಅವರ ಹತ್ತಿರ ಮಾತನಾಡುತ್ತಿರಬೇಕಾದರೆ ಅವರು ಹೇಳಿದರು, 'ನಾನು ಸಾವಿರ ಹಳ್ಳಿಗಳನ್ನು ದತ್ತು ತೆಗೆದುಕೊಂಡು ಈ ರೀತಿ ವೃತ್ತಿ ಪರ ಶಿಕ್ಷಣವನ್ನು ಕೊಡತಕ್ಕಂಥ ಯೋಜನೆಯನ್ನು ಮಾಡುತ್ತೇನೆ' ಅನ್ನತಕ್ಕಂಥ ಮಾತನ್ನು ಅವರು ಹೇಳಿದರು. ನಮ್ಮ ಚಿಕ್ಕಮಗಳೂರಿನಲ್ಲಿ

ಅಲ್ಲಿರತಕ್ಕಂತ ಅಂಬರ್‌ವ್ಯಾಲಿ ಶಾಲೆಯವರು ಒಂದು ಕಡೆ ಶ್ರೀಮಂತ ಮಕ್ಕಳಿಂದ ಹಣ ಸಂಗ್ರಹಣೆ ಮಾಡುತ್ತಾ ಇನ್ನೊಂದು ಕಡೆ 110 ಜನ ಬಡ ಮಕ್ಕಳಿಗೆ ಮೊದಲ ವರ್ಷದಲ್ಲಿ ಟ್ರೈನಿಂಗ್ ಕೊಟ್ಟರು. ನನ್ನನ್ನು ಅಲ್ಲಿಗೆ ಕರೆದಿದ್ದರು. ನಾನಲ್ಲಿಗೆ ಹೋಗಿದ್ದೆ. ಅವರಿಗೆ ಒಂದು ರೂಪಾಯಿ ಫೀಸ್ ಕೂಡ ಇಲ್ಲ. ಬಟ್ಟೆಯಿಂದ ಹಿಡಿದು ಊಟದವರೆಗೂ ಪೂರ್ತಿ ಫ್ರಿ ಇವತ್ತಿನ ಅವಶ್ಯಕತೆಗೆ ತಕ್ಕಂತೆ ಟ್ರೈನಿಂಗ್ ಮಾಡಿ ಅವರಿಗೆ ಮೊದಲ 3 ವರ್ಷಗಳಲ್ಲಿ 5 ಸಾವಿರ ರೂಪಾಯಿ ಸಂಬಳ, 2ನೇ 3 ವರ್ಷಗಳಲ್ಲಿ 8 ಸಾವಿರ ರೂಪಾಯಿ ಸಂಬಳ, ಆಮೇಲೆ ಅವರಿಗ ಫ್ರಿ ಬಿಟ್ಟು ನಿಮಗೆ 10 ರಿಂದ 15 ಸಾವಿರ ರೂಪಾಯಿ ಸಂಬಳ ತೋರಿಸತಕ್ಕಂಥ ಉದ್ಯೋಗಗಳಿಗೆ ಶಿಕ್ಷಣ ಕೊಡತಕ್ಕಂಥ ತರಬೇತಿ ಶಾಲೆಯನ್ನು ಪ್ರಾರಂಭ ಮಾಡಿದ್ದರು. ಆ ರೀತಿಯ ತರಬೇತಿಯ ಶಾಲೆಯನ್ನು ನಾವು ಪ್ರಾರಂಭ ಮಾಡಿದರೆ ಖಂಡಿತವಾಗಿಯೂ ಕೂಡ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲಿಕ್ಕೆ ಬರುತ್ತದೆ. ನನ್ನದೊಂದು ವಿನಂತಿ ಏನೆಂದರೆ, ಸರ್ಕಾರ ವ್ಯಾಪಾರಕ್ಕಿಳಿಯಬಾರದು. ಸರ್ಕಾರ ಎಲ್ಲೆಲ್ಲಿ ವ್ಯಾಪಾರಕ್ಕೆ ಇಳಿಯುತ್ತದೆಯೋ, ಅಲ್ಲೆಲ್ಲವೂ ಕೂಡ ಫೇಲ್ ಆಗಿದ್ದೇವೆ. ನಮ್ಮದು ಐಟಿಡಿಸಿ ಹೋಟೆಲ್ ಇರಬಹುದು, ಕೆಎಸ್‌ಟಿಡಿಸಿ ಹೋಟೆಲ್ ಇರಬಹುದು, ಕಾರ್ಖಾನೆಗಳಿರಬಹುದು. ನಮ್ಮ ಕಾರ್ಖಾನೆಗಳು, ದೊಡ್ಡದೊಡ್ಡ ಕಾರ್ಖಾನೆಗಳಿಗೆ ಬಂಡವಾಳ ಹೂಡತಕ್ಕಂಥ ಅನಿವಾರ್ಯತೆ ಸರ್ಕಾರಕ್ಕೆ ಇರಬಹುದು, ಆದರೆ, ನಾವು ಇವತ್ತು ಖಾಸಗಿಯವರಿಗೆ ಉತ್ತೇಜನ ಕೊಟ್ಟು ಅವರಿಂದ ಉದ್ಯೋಗಾವಕಾಶಗಳನ್ನು ಕ್ರಿಯೇಟ್ ಮಾಡಿಸಿಕೊಳ್ಳಬೇಕು ಮತ್ತು ಅವರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡಬೇಕೇ ಹೊರತು ನಾವೇ ವ್ಯಾಪಾರಕ್ಕೆ ಇಳಿದರೆ ವಿಫಲರಾಗುತ್ತೇವೆ. ಹಾಗಾಗಿ, ಅದಕ್ಕೆ ಉತ್ತೇಜನ ಕೊಡತಕ್ಕಂಥ ಚಿಂತನೆಯನ್ನು ಯೋಜನೆಯನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ

ಅಧ್ಯಕ್ಷರು : ದಯಮಾಡಿ ಮುಗಿಸಿ, 2 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಸಿ.ಟಿ. ರವಿ : ಇವತ್ತು ಕೃಷಿ ಸರಪಳಿ ತುಂಡಾಗಿದೆ. ಈ ಕೃಷಿ ವ್ಯವಸ್ಥೆಯಲ್ಲಿ ಒಂದು ಸೈಕಲ್, ಒಂದು ಚೈನ್ ಇತ್ತು. ರೈತ ತನ್ನ ಊರಿನ ಕೆರೆಯ ನಿರ್ವಹಣೆಯನ್ನು ಅವನೇ ಮಾಡುತ್ತಿದ್ದ, ಆ ಹೂಳನ್ನು ತೆಗೆದು ಜಮೀನಿಗೆ ಹಾಕುತ್ತಿದ್ದ. ಆ ಜಮೀನಿನಿಂದ ಫಲವತ್ತಾದಂಥ ಮಣ್ಣಿನಿಂದ ತನ್ನ ಹೊಲದಲ್ಲಿ, ಗದ್ದೆಯಲ್ಲಿ ಉತ್ತಮವಾದ ಫಸಲನ್ನು ಬೆಳೆಯುತ್ತಿದ್ದ. ಇವತ್ತು ನಾವು ರಾಸಾಯನಿಕ ಗೊಬ್ಬರಗಳಿಗೆ ಉತ್ತೇಜನ ಕೊಟ್ಟಿದ್ದರ ಪರಿಣಾಮವಾಗಿ ದೇಶದ ಹೊಟ್ಟೆ ತುಂಬಿತು. ಆದರೆ, ರೈತ ಮಾತ್ರ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ದುಸ್ಥಿತಿಗೆ ಬಂದ. ಅವನ ಹಗೇವು ತುಂಬಲಿಲ್ಲ, ಅವನ ಕಣಜ ತುಂಬಲಿಲ್ಲ. ದೇಶದ ಒಟ್ಟು ಆಹಾರ ಉತ್ಪಾದನೆ ಜಾಸ್ತಿಯಾಯಿತು. ಆದರೆ, ಉತ್ಪಾದನಾ ವೆಚ್ಚವೂ ಕೂಡ ಅದೇ ಸಂದರ್ಭದಲ್ಲಿ ಜಾಸ್ತಿಯಾದ ಪರಿಣಾಮವಾಗಿ ಆ ರೈತನ ಹಗೇವು ಬರಿದಾಯಿತು. ಅವನು ಎಷ್ಟು ಚೀಲ ಬೆಳೆದರೂ ಕೂಡ ಅದನ್ನು ತಕ್ಷಣ ಸೊಸೈಟಿಯ ಸಾಲ ಕಟ್ಟಲಿಕ್ಕೆ ಬ್ಯಾಂಕ್‌ಗೆ ಕಟ್ಟಲಿಕ್ಕೆ ಮಾರಿ ತನ್ನ ಕಣಜವನ್ನು, ಹಗೇವನ್ನು ಖಾಲಿ ಇಟ್ಟು ಆತ ಸೊಸೈಟಿ ಮುಂದೆ, ಸರ್ಕಾರ ಕೊಡತಕ್ಕಂಥ ರೇಷನ್‌ಗೆ, ರೇಷನ್ ಕಾರ್ಡ್‌ಗೆ ಅಂಗಲಾಚತಕ್ಕಂಥ ಸ್ಥಿತಿ ಬಂತು. ಹಾಗಾಗಿ, ಆ ತುಂಡಾಗಿರತಕ್ಕಂಥ ಆ ಕೃಷಿ ಸರಪಳಿಯನ್ನು ಮತ್ತೆ ಜೋಡಿಸಬೇಕು. ಮತ್ತೆ ಜೋಡಿಸಬೇಕೆಂದು ಹೇಳಿದರೆ, ಇವತ್ತು ಸರ್ಕಾರ ಕೇಂದ್ರೀಕೃತ ವ್ಯವಸ್ಥೆಯಿಂದ ಕೆರೆಗಳ ನಿರ್ವಹಣೆ ಮಾಡುವುದನ್ನು

ಬಿಟ್ಟು ಮತ್ತೆ ರೈತನಿಗೆ ಆದ್ಯತೆ ಕೊಡಬೇಕು. ಈ ರಾಸಾಯನಿಕ ಕೃಷಿ ವ್ಯವಸ್ಥೆಯಿಂದ ದೂರ ಇಟ್ಟು, ಪುನಃ ನೈಸರ್ಗಿಕ ಕೃಷಿ ವ್ಯವಸ್ಥೆ ಕಡೆಗೆ ಉತ್ತೇಜನ ಕೊಡತಕ್ಕಂಥ ಕೆಲಸ ಮಾಡಬೇಕು. ನಾನು ಸಣ್ಣ ಹುಡುಗ ಇದ್ದಾಗ ನನಗೆ ಚೆನ್ನಾಗಿ ನೆನಪಿದೆ. ನಮ್ಮ ಊರಿನಲ್ಲಿ ಮಳೆಗಾಲದಲ್ಲಿ ಗದ್ದೆಯಲ್ಲಿ ಕೂಳೆ ಹಾಕಿದ್ದರೆ ಅಲ್ಲಿ ಮೀನುಗಳು ಬೀಳುತ್ತಿದ್ದವು. ಅವನ್ನು ನೆಂಟರ ಮನೆಗೆಲ್ಲಾ ಕೊಟ್ಟು ಕಳುಹಿಸುತ್ತಿದ್ದೆವು. ಇವತ್ತು ಅಲ್ಲಿ ಒಂದೇ ಒಂದು ಮೀನು ಕೂಡ ಬೀಳಲಿಕ್ಕೆ ಸಾಧ್ಯವಿಲ್ಲ. ಇವತ್ತು ಆ ಭೂಮಿ ಬರಡೆದ್ದು ಹೋಗಿದೆ, ನಮ್ಮ ಊರ ಕೆರೆಗಳಲ್ಲಿ ಯಾವತ್ತೂ ಸಮೃದ್ಧವಾದ ನೀರಿತ್ತು. ಇವತ್ತು ಕೆರೆ ಎಲ್ಲಾ ಹೂಳು ತುಂಬಿಕೊಂಡಿದೆ. ಏಕೆ ತುಂಬಿಕೊಂಡಿದೆ ಎಂದರೆ, ನಾವು ಆ ಕೃಷಿ ಸರಪಳಿಯನ್ನು ತುಂಡು ಮಾಡಿದ ಪರಿಣಾಮವಾಗಿ ಆ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೆ ಕೃಷಿ ಸರಪಳಿಯನ್ನು ಜೋಡಿಸ ಬೇಕೆನ್ನತಕ್ಕಂಥ ಮಾತನ್ನು ಹೇಳುತ್ತಾ, ಆಂಧ್ರಪ್ರದೇಶದಲ್ಲಿ ಈ ಹಿಂದಿದ್ದಂಥ ಕೃಷಿ ಸಚಿವರು ಮಾನ್ಯ ಚಂದ್ರಬಾಬುನಾಯ್ಡುರವರ ಸಂಪುಟದಲ್ಲಿ ಕೃಷಿ ಸಚಿವರಾಗಿದ್ದಂಥ ಶ್ರೀ ಶೋಭನಾದ್ರಿ ರಾವ್‌ರವರು ಒಂದು ಪ್ರಾಜೆಕ್ಟ್ ಅನ್ನು ತಂದರು. ಅಂದರೆ, ರೈತ ಬಜಾರ್ ಎನ್ನುವಂಥ ಒಂದು ಪ್ರಾಜೆಕ್ಟ್ ಹಳ್ಳಿಗೆ ಹೋಗಿ ಒಂದು ವಿಶೇಷವಾದಂಥ ಬಸ್ ಹಳ್ಳಿಯಿಂದ ಆ ರೈತನ್ನು ಹತ್ತಿಸಿಕೊಂಡು ಬರುತ್ತದೆ. ಆತನೇ ಅಲ್ಲೇ ಬೆಳೆದಂಥ ತರಕಾರಿಯನ್ನು ಬಜಾರ್‌ಗೆ ಮಾರುತ್ತಾನೆ. ಅಲ್ಲಿ ದಲ್ಲಾಳಿಗಳ ಹಾವಳಿ ಇಲ್ಲ, ಆತನಿಗೆ ಮಧ್ಯವರ್ತಿಗಳ ಹಾವಳಿ ಇಲ್ಲ. ಯಾವ ರೀತಿ ಬೆಳೆಯಬೇಕು ಮತ್ತು ಯಾವ ಬೆಳೆಯನ್ನು ಬೆಳೆಯಬೇಕೆಂಬ ನಿರ್ದೇಶನವನ್ನು ಅಗ್ರಿಕ್ಲಿನಿಕ್‌ಗಳ ಮುಖಾಂತರ ಕೊಡುವುದರ ಮೂಲಕ ಬೆಳೆಯ ಸಮತೋಲನವನ್ನು ಕಾಪಾಡಿಕೊಂಡು, ದಲ್ಲಾಳಿಗಳಿಂದಲೂ ಮುಕ್ತವಾಗಿ ರೈತನನ್ನು ಉಳಿಸಿ, ಆ ಮೂಲಕ ರೈತನಿಗೆ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ ಒಳ್ಳೆ ಬೆಲೆ ಸಿಗುವಂತೆ ಮಾಡಿದ್ದರು. ಅದನ್ನು ನಾವು ನಮ್ಮ ರಾಜ್ಯದಲ್ಲಿ ಜೋಡಿಸಿದರೆ, ರೈತನನ್ನು ಆ ದಲ್ಲಾಳಿಗಳ ಹಾವಳಿಯಿಂದ ಮುಕ್ತರನ್ನಾಗಿ ಮಾಡಿ ಒಳ್ಳೆಯ ಬೆಲೆ ಸಿಗುವಂತೆ ಮಾಡಬಹುದು ಮತ್ತು ಈ ರೈತ ಬಜಾರ್‌ಗಳು ಅಲ್ಲಿ ಯಶಸ್ವಿಯಾದವು ಏಕೆಂದರೆ, ತಾಜಾ ತರಕಾರಿ, ತಾಜಾ ವಸ್ತು ಗ್ರಾಹಕರಿಗೂ ಕೂಡ ಕಡಿಮೆ ಬೆಲೆಯಲ್ಲಿ ಸಿಕ್ಕಿದ್ದರಿಂದಾಗಿ ಅದರಿಂದ ತುಂಬಾ ಲಾಭವಾಯಿತು. ಹಾಗಾಗಿ, ನಾವು ಇಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಕನಿಷ್ಠ ತರಬೇತಿಯನ್ನು ಕೊಟ್ಟು ಬಿಎಸ್ಸಿ(ಎಜಿ) ಮಾಡಿದವರನ್ನು ಅದಕ್ಕೆ ಪ್ರಮುಖರನ್ನಾಗಿ ಮಾಡಿ ಅಗ್ರಿಕ್ಲಿನಿಕ್‌ಗಳನ್ನು ಸ್ಥಾಪನೆ ಮಾಡಿದರೆ, ಆ ಅಗ್ರಿಕ್ಲಿನಿಕ್‌ಗಳ ಮೂಲಕ ರೈತನಿಗೆ ಪೂರ್ಣಪ್ರಮಾಣದಲ್ಲಿ ಆತನನ್ನು ಎಜುಕೇಟ್ ಮಾಡತಕ್ಕಂಥ ಕಾರ್ಯವನ್ನು ಮಾಡಬಹುದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಎಲ್ಲವನ್ನೂ ಜೋಡಿಸಿಕೊಳ್ಳುವುದರ ಮೂಲಕ ನಾವು ಮಾನ್ಯ ಅಬ್ದುಲ್ ಕಲಾಂರವರ ಸಂಕಲ್ಪವನ್ನು ಈಡೇರಿಸಬಹುದೆನ್ನುವ ಮಾತನ್ನು ಹೇಳುತ್ತೇನೆ. ದಾವಣಗೆರೆ ಕರ್ನಾಟಕದ ಮ್ಯಾಂಚೆಸ್ಟರ್ ಆಗಿತ್ತು. ಬಹುಶಃ ಮಾನ್ಯ ಶ್ರೀರಾಮರೆಡ್ಡಿಯವರು ಸದನದಲ್ಲಿಲ್ಲ. ಇದ್ದಿದ್ದರೆ ಅವರಿಗೆ ನೆನಪು ಮಾಡಬೇಕೆಂದು ಅಂದುಕೊಂಡಿದ್ದೆ. ದಾವಣಗೆರೆ ಕರ್ನಾಟಕದ ಮ್ಯಾಂಚೆಸ್ಟರ್ ಆಗಿದ್ದು ಮತ್ತು ಆ ಮ್ಯಾಂಚೆಸ್ಟರ್ ಹೆಸರು ಇವತ್ತು ಅಳಿಸಿಹೋಗಲಿಕ್ಕೆ ಕಾರಣ ಏನು ಅನ್ನತಕ್ಕಂಥದ್ದು ನಮ್ಮೆಲ್ಲರಿಗಿಂತಲೂ ಶ್ರೀರಾಮರೆಡ್ಡಿಯವರಿಗೆ ಚೆನ್ನಾಗಿ ಅರ್ಥವಾಗಿದೆ ಎಂದು ಭಾವಿಸುತ್ತೇನೆ. ಅವರಿಗೆ ಇನ್ನೇನೋ ಅತಿಯಾದ ಆಸೆಯನ್ನು ಕಾರ್ಮಿಕರಿಗೆ ಹೊರಿಸಿ ಅವರಿಗೆ ಭರವಸೆಗಳನ್ನು ಕೊಡಿಸುತ್ತೇವೆಂದು ಹೇಳಿ, ಚಳುವಳಿ ಮಾಡಿ ಆ ಮ್ಯಾಂಚೆಸ್ಟರ್ ಕಾರ್ಖಾನೆಯನ್ನು

ಬಂದ್ ಮಾಡಿ, ಅವರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿ ರಾಜಕಾರಣ ಮಾಡುವುದಕ್ಕೆ ಹೋಗಿದ್ದ ಪರಿಣಾಮವಾಗಿ ಇವತ್ತು ದಾವಣಗೆರೆಯ ಮ್ಯಾಂಚೆಸ್ಟರ್ ಬಂದ್ ಆಯಿತು. ನನ್ನ ಹತ್ತಿರ ಇವರು ಶ್ರೀ ರಾಮಸ್ವಾಮಿ ಎನ್ನುವವರು ಬರೆದಂಥ ಒಂದು ಪುಸ್ತಕದಲ್ಲಿನ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ಕಾಲದಲ್ಲಿ ಪ್ರತಿ ಊರಿನಲ್ಲೂ ಕೂಡ ನೂರಾರು ನೇಕಾರ ಕುಟುಂಬಗಳಿದ್ದವು. ಇವತ್ತು ಆ ನೇಕಾರ ಕುಟುಂಬಗಳಿಗೆ ಉದ್ಯೋಗ ಇಲ್ಲದೇ ಇರುವಂಥ ಸ್ಥಿತಿ ನಿರ್ಮಾಣವಾಯಿತು. ಇವತ್ತು ಇಡೀ ದೇಶದ ಜವಳಿಯನ್ನು ನಿಯಂತ್ರಿಸತಕ್ಕಂಥದ್ದು ಕೇವಲ 600 ಮಿಲ್‌ಗಳ ಮಾತ್ರ ಆದರೆ, ಈ ಉದ್ಯೋಗದಮೇಲೆ ಅವಲಂಬಿತರಾದಂಥ ಲಕ್ಷಾಂತರ ಕುಟುಂಬಗಳು ಆ ಉದ್ಯೋಗದಿಂದ ವಂಚಿತರನ್ನಾಗಿ ಮಾಡಿದ ನೀತಿ ಏನಿದೆಯಲ್ಲಾ ಈ ನೀತಿಯಿಂದಾಗಿ ಇವತ್ತು ಈ ಜವಳಿ ಉದ್ಯಮಕ್ಕೆ ದುಸ್ಥಿತಿ ಬಂದಿದೆ. ಹಾಗಾಗಿ, ಮತ್ತೆ ಆ ನೇಕಾರರ ಕುಟುಂಬಗಳಿಗೆ ಕಾಯಕಲ್ಪ ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ರವಿಯವರೆ, ಇನ್ನೂ ಮಾತನಾಡುವವರಿದ್ದಾರೆ. ಬೇಗ ಮುಗಿಸಿ.

ಶ್ರೀ ಸಿ.ಟಿ ರವಿ : ಇನ್ನು 3 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. 1980ಕ್ಕಿಂತ ಮುಂಚೆ ದಾರಿದ್ರ್ಯ ನಿರ್ಮೂಲನಾ, ಬಡತನ ನಿರ್ಮೂಲನಾ ಸ್ಲೋಗನ್ ಆಗಿತ್ತು. ಈಗ 80ರ ನಂತರ ದಾರಿದ್ರ್ಯಶಾಮಕ ಅಂದರೆ ಈ ನೋವಾದರೆ ಮುಲಾಮು ಹಚ್ಚುತ್ತೇವಲ್ಲಾ ಹಾಗೆ ದಾರಿದ್ರ್ಯಶಾಮಕ ಬಡತನವಿದೆ, ಒಂದು ಕೆಜಿ. ಅಕ್ಕಿಗೆ 3 ರೂಪಾಯಿಯಂತೆ ಅಕ್ಕಿ ಕೊಡಿ. ಬಡತನ ನಿವಾರಣೆ ಹೋಯಿತು ಈಗ ಬಡತನ ಇದೆ ಬಿಪಿಎಲ್ ಫ್ಯಾಮಿಲಿ ಇವೆ ಅದಕ್ಕೆ ಅವರಿಗೆ 3 ರೂಪಾಯಿಗೆ ಕೆಜಿ ಅಕ್ಕಿ ಕೊಡಿ. ಅದರ ಬದಲಿಗೆ ಆ ಜನ ಸ್ವಂತ ಶಕ್ತಿಯಿಂದ ಆಹಾರೋತ್ಪಾದನೆ ಮಾಡಿ ಕೊಂಡುಕೊಳ್ಳುವಂಥ ಶಕ್ತಿಯನ್ನು ನಿರ್ಮಾಣ ಮಾಡತಕ್ಕಂಥ ಯೋಜನೆಯನ್ನು ಹಾಕಬೇಕೇ ಹೊರತು ಈ ಶಾಮಕದ ಜೊತೆಗೆ ಶಾಶ್ವತ ಯೋಜನೆಯನ್ನೂ ಕೂಡ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ಇವತ್ತು ಇನ್‌ವೆಸ್ಟರ್ ಮತ್ತು ಕನ್‌ಸ್ಯೂಮರ್ ದುಸ್ಥಿತಿ ಬಗ್ಗೆ ಬಹಳ ನೋವಿನಿಂದ ಹೇಳಬೇಕಾಗಿದೆ.

ಅಧ್ಯಕ್ಷರು : ಮಾನ್ಯ ರವಿಯವರೆ, ವಿಷಯಗಳು ಹೇಳುತ್ತಾ ಹೋದರೆ ಅದು ಹೋಗುತ್ತಾ ಇರುತ್ತದೆ ದಯಮಾಡಿ ನಿಲ್ಲಿಸಿ.

ಶ್ರೀ ಸಿ.ಟಿ. ರವಿ : ನಾನು ಇನ್ನು ಎರಡೇ ಪದಗಳಲ್ಲಿ ಮುಗಿಸುವವನಿದ್ದೇನೆ. ಇನ್‌ವೆಸ್ಟರ್ ಮತ್ತು ಕನ್‌ಸ್ಯೂಮರ್ ಎರಡೂ ಕೂಡ ಸರ್ಕಾರವೇ ಆಗಿದೆ. ದೊಡ್ಡ ಪ್ರಮಾಣದಲ್ಲಿ ತೆರಿಗೆ ಸಂಗ್ರಹಣ ಆಗುತ್ತಿಲ್ಲವೆಂದು ನಾನು ಯಾರೂ ಹೇಳುತ್ತಿಲ್ಲ. ಆದರೆ ಅದರ ಉಪಯೋಗ ಯಾರಿಗೆ ಆಗುತ್ತಿದೆ? ಮೂಗಿಗಿಂತ ಮೂಗೂತಿ ಭಾರ ಎನ್ನುವ ಸ್ಥಿತಿನಲ್ಲಿ ಇವತ್ತು ಅದರ ಉಪಯೋಗಕ್ಕಿಂತ ಈ ಸರ್ಕಾರಿ ವ್ಯವಸ್ಥೆಯನ್ನು ಸಾಕುವುದಕ್ಕೇ ಶೇಕಡಾ 85 ಕ್ಕಿಂತಲೂ ಹೆಚ್ಚಿನ ಹಣ ಆ ತೆರಿಗೆ ಹಣದಲ್ಲಿ ಖರ್ಚಾಗುತ್ತಿದೆ ತೆರಿಗೆ ಏನು ಸಂಗ್ರಹವಾಗುತ್ತದೆ. ಆ ತೆರಿಗೆ ಸಂಗ್ರಹದ ಹಣದಲ್ಲಿ ಈ ವ್ಯವಸ್ಥೆಯನ್ನು ಸಾಕುವುದಕ್ಕೆ ಶೇಕಡಾ 85 ರಷ್ಟು ಹಣ ಬೇಕಾಗುತ್ತದೆ. ಇನ್ನು ಸೇವೆ ಇತ್ಯಾದಿಗಳಿಗೆ 15 ಪರ್ಸೆಂಟ್ ಹಣ ಖರ್ಚಾದರೆ ಅಭಿವೃದ್ಧಿಗೆ ಮತ್ತೆ ಸಾಲ ತರಬೇಕಾದಂಥ ಸ್ಥಿತಿ ಇವತ್ತು ನಿರ್ಮಾಣವಾಗಿದೆ. ಹೀಗಾಗಿ ಈ ಬಗ್ಗೆ ಸರ್ಕಾರವೇ ಹಣ ಮತ್ತು ಸೇವೆಯ ದೊಡ್ಡ ಗ್ರಾಹಕವಾಗಿರುವುದರಿಂದ ಇದರಲ್ಲಿ ಮತ್ತಷ್ಟು ಚಿಂತನೆ ಮಾಡಬೇಕಾಗಿದೆಯೆಂದು ಹೇಳುತ್ತಾ, ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಿ.."

ಅಧ್ಯಕ್ಷರು : ರವಿಯವರೆ, ಇದೇನು ನೀವು ವೈಜನಾಥ್ ಪಾಟೀಲ್ ತರಹ ಮಾತನಾಡುತ್ತಿದ್ದೀರಲ್ಲಾ? ನೋಡಿ, ಮೊದಲನೇ ಸಾರಿ ಇಲ್ಲಿಗೆ ಬಂದಿದ್ದೀರಿ, ಈ ತರಹ ನೀವು ಬೆಳವಣಿಗೆ ಮಾಡಿಕೊಳ್ಳುವುದು ಒಳ್ಳೆಯದಲ್ಲ.

ಶ್ರೀ ಸಿ.ಟಿ. ರವಿ : ನನ್ನ ಜಿಲ್ಲೆಗೆ ಸಂಬಂಧಪಟ್ಟ ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ ನಮ್ಮ ಜಿಲ್ಲೆ ಟೂರಿಸಂಗೆ ಹೇಳಿ ಮಾಡಿಸಿದಂಥ ಜಿಲ್ಲೆ ಇಲ್ಲಿ ಶಿಲ್ಪಕಲೆ ಇದೆ ಬೇಲೂರು, ಹಳೇಬೀಡು, ಬೆಳವಾಡಿ, ಅಮೃತಾಪುರ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೆ, ದಯಮಾಡಿ ಮನವಿ ಮಾಡಿಕೊಳ್ಳುತ್ತಿದ್ದೇವೆ, ಉತ್ತರ ಕೊಡಿಸಿರಿ.

ಶ್ರೀ ಸಿ.ಟಿ. ರವಿ : ಈ ರೀತಿಯಾಗಿ ಶಿಲ್ಪಕಲೆಯ ದೇವಾಲಯಗಳು ಇವೆ. ಧಾರ್ಮಿಕ ಕೇಂದ್ರಗಳು ಇಲ್ಲಿ ಇವೆ. ಶೃಂಗೇರಿ ಇದೆ, ಹೊರನಾಡು ಇದೆ. ರಂಭಾಪುರಿ ಪೀಠ ಇಲ್ಲಿ ಇದೆ. ಧಾರ್ಮಿಕ ಕೇಂದ್ರಗಳು ಚಿಕ್ಕಮಗಳೂರಿನಲ್ಲಿ ಇವೆ. ಪ್ರಕೃತಿಯ ಸೌಂದರ್ಯ ಇದೆ. ಅದಕ್ಕೇ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಟೂರಿಸಂನ್ನು ಅಭಿವೃದ್ಧಿಪಡಿಸಲಿಕ್ಕೆ ಚಿಕ್ಕಮಗಳೂರು ಜಿಲ್ಲೆ ಒಂದು ಮಾದರಿ ಜಿಲ್ಲೆಯಾಗಬಹುದು. ಪಕ್ಕದಲ್ಲಿ 80 ಕಿಲೋಮೀಟರ್ ದೂರ ಹೋದರೆ ಕರಾವಳಿ ಇದೆ. ಹೀಗಾಗಿ ಕರಾವಳಿಯನ್ನೊಳಗೊಂಡಂತೆ ಚಿಕ್ಕಮಗಳೂರನ್ನು ಕೇಂದ್ರವನ್ನಾಗಿಟ್ಟುಕೊಂಡು ಒಂದು ಟೂರಿಸಂ ಸರ್ಕಲ್ ಮಾಡಿ. ಅಲ್ಲಿ ಟೂರಿಸಂಗೆ ಬೇಕಾದಂಥ ಮೂಲಭೂತ ಅವಶ್ಯಕತೆಗಳನ್ನು ಕಲ್ಪಿಸಿಕೊಡಿ, ಚಿಕ್ಕಮಗಳೂರು ಜಿಲ್ಲೆ ಕಾಫಿ ಬೆಳೆಯಿಂದ ತತ್ತರಿಸಿ ಅದಕ್ಕೆ ಅವಲಂಭಿತರಾದಂಥ ಕಾರ್ಮಿಕರು ಇವತ್ತು ನಿರುದ್ಯೋಗಿಗಳಾಗಿದ್ದಾರೆ. ಟೂರಿಸಂ ಅಲ್ಲಿ ಮಾಡುವುದರಿಂದ ಮತ್ತೆ ಅವರು ಮೇಲೆದ್ದು ನಿಲ್ಲಬಹುದು. ಅದಕ್ಕೆ ಆದ್ಯತೆ ಅವಕಾಶ ಇದೆ. ಆ ರೀತಿ ಟೂರಿಸಂ ಸರ್ಕಲ್ ಆಗಿ ಪರಿವರ್ತನೆ ಮಾಡಬೇಕೆನ್ನುವ ವಿನಂತಿಯನ್ನು ಮಾಡಿಕೊಂಡು ಇನ್ನೂ ಹೆಚ್ಚು ಮಾತನಾಡುವುದಕ್ಕೆ ಅವಕಾಶವಿದ್ದರೂ ಕೂಡ ಸಮಯದ ಕಾರಣದಿಂದ ನನ್ನ ಮಾತಿಗೆ ವಿರಾಮ ಹಾಡುತ್ತೇನೆ. ಅವಕಾಶ ನೀಡಿದ್ದಕ್ಕೆ ತಮಗೆ ಧನ್ಯವಾದಗಳು ಜೈಹಿಂದ್.

ಅಧ್ಯಕ್ಷರು : ಮಾನ್ಯ ದಿನೇಶ್ ಗುಂಡುರಾವ್‌ರವರು.

ಶ್ರೀ ಜೆ.ಹೆಚ್. ಮಹಿಮಾ ಪಟೇಲ್ : ನಮ್ಮನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಅಧ್ಯಕ್ಷರು : ಆಯಿತು. ಮಾನ್ಯ ದಿನೇಶ್ ಗುಂಡುರಾಯರೆ, ತಾವು ದಯಮಾಡಿ 10 ನಿಮಿಷದಲ್ಲಿ ಮುಗಿಸಬೇಕು.

ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾನು ಸಂಕ್ಷಿಪ್ತವಾಗಿ ಮಾತನಾಡುತ್ತೇನೆ ಇವತ್ತು ಹಿಂದೆ ನಮ್ಮ ಸರ್ಕಾರ ಇದ್ದಾಗ ಮಾನ್ಯ ರಾಷ್ಟ್ರಪತಿಗಳು ಬಂದು ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಏನು ಭಾಷಣ ಮಾಡಿದರು, ಆ ಒಂದು ಭಾಷಣದಲ್ಲಿ ಸಾಕಷ್ಟು ವಿಚಾರಗಳೂ ಕೂಡ ಪ್ರಸ್ತಾಪವಾಗಿ ಈಗ ಸುಮಾರು ಭಾಷಣಗಳು ಆಗಿವೆ. ನಾನು ಈ ಒಂದು ಸಂದರ್ಭದಲ್ಲಿ ಮಾತನಾಡತಕ್ಕಂಥಾದ್ದು, ಏನೆಂದರೆ ಇವತ್ತು ಮಾನ್ಯ ರಾಷ್ಟ್ರಪತಿಗಳ ಭಾಷಣದ ಬಗ್ಗೆ ನಾವು ಎಲ್ಲರೂ ಕೂಡ ಪ್ರಶಂಸೆ ನೀಡತಕ್ಕಂಥದ್ದು ಮತ್ತು ಅವರು ಇಟ್ಟಿರತಕ್ಕಂಥ ಸೂತ್ರಗಳ ಬಗ್ಗೆ ಯಾರೂ ಕೂಡ

ಅದರ ಬಗ್ಗೆ ಎರಡು ಮಾತು ಹೇಳುವುದಿಲ್ಲ. ಏಕೆಂದರೆ, ನಿಜಕ್ಕೂ ಅವೆಲ್ಲವೂ ಕೂಡ ನಮ್ಮ ರಾಜ್ಯಕ್ಕೆ ಬೇಕಾಗಿರತಕ್ಕಂಥ ವಿಚಾರಗಳು. ಅದರ ಬಗ್ಗೆ ಯಾರೂ ಕೂಡ ಅರ್ಗ್ಯುಮೆಂಟ್ ಮಾಡತಕ್ಕಂಥಾದ್ದು ಇಲ್ಲ. ಆದರೆ, ಈ ಸರ್ಕಾರ ಏನು ಇವತ್ತು ಈ ಸಭೆಯನ್ನು ಕರೆದು ಮೂರು ದಿವಸಗಳ ಕಾಲ ಚರ್ಚೆಯಾಗಬೇಕೆಂದು ಹೇಳಿರತಕ್ಕಂಥಾದ್ದನ್ನು ನೋಡಿದಾಗ ಬಹುಶಃ ಅವರಿಗೆ ಈ ಒಂದು ರಾಷ್ಟ್ರಪತಿಗಳ ಭಾಷಣದ ಬಗ್ಗೆ ಎಷ್ಟು ಬದ್ಧತೆ ಇದೆ ಎಂದು ಹೇಳತಕ್ಕಂಥಾದ್ದನ್ನು ಕೂಡ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಏಕೆಂದರೆ, ಮೊನ್ನೆ ತಾನೇ ಅವರು ತಮ್ಮ ಕಾಮನ್ ಮಿನಿಮಮ್ ಪ್ರೋಗ್ರಾಂನ್ನು ಅನೌನ್ಸ್ ಮಾಡಿದ್ದಾರೆ. ಇವತ್ತು ಸಭೆ ನಡೆಯತಕ್ಕಂಥ ಸಂದರ್ಭದಲ್ಲಿ ಈ ರೀತಿ ಪಾಲಿಸಿಗಳು ಕೂಡ ಅನೌನ್ಸ್ ಮಾಡತಕ್ಕಂಥಾದ್ದು ಕೂಡ ನಮ್ಮ ಶಾಸಕರ ಸಭೆಯಲ್ಲಿ ಮಾಡಬೇಕೇ ಹೊರತು ಆಚೆ ಮಾಡಬಾರದು ಎಂದು ಒಂದು ರೀತಿಯ ರೂಲಿಂಗ್‌ಗಳು ಇವೆ. ಆದುದರಿಂದಲೇ ಇವತ್ತು ಆ ಒಂದು ಕಾಮನ್ ಮಿನಿಮಮ್ ಪ್ರೋಗ್ರಾಂನಲ್ಲಿ ಮಾನ್ಯ ರಾಷ್ಟ್ರಪತಿಗಳು ಹೇಳಿರತಕ್ಕಂಥ ಸೂತ್ರಗಳ ಬಗ್ಗೆ ಯಾವುದೇ ರೀತಿಯ ಸ್ಪಂದನವಾಗಿಲ್ಲ. ಇಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದರೆ, ಅದನ್ನೆಲ್ಲವನ್ನು ಕೂಡ ನಿಮ್ಮ ಒಂದು ಕಾಮನ್ ಮಿನಿಮಮ್ ಪ್ರೋಗ್ರಾಂನಲ್ಲಿ ತಂದಿಟ್ಟು ನಾವು ಅದನ್ನು ಕೂಡ ಅಳವಡಿಸುತ್ತಿದ್ದೇವೆ ಎನ್ನುವಂಥ ಮಾತುಗಳು ಇದರಲ್ಲಿ ಬಂದಿದ್ದರೆ, ನಾವು ಇವತ್ತು ಇದನ್ನು ಒಪ್ಪಿಕೊಳ್ಳಬಹುದಾಗಿತ್ತು, ಈ ಸರ್ಕಾರಕ್ಕೆ ಮಾನ್ಯ ರಾಷ್ಟ್ರಪತಿಗಳ ಭಾಷಣದ ಬಗ್ಗೆ ಸಾಕಷ್ಟು ಗೌರವ ಇದೆ. ಮತ್ತು ನಿಜಕ್ಕೂ ಕೂಡ ಅನುಷ್ಠಾನ ಮಾಡುವಂಥ ಮನಸ್ಸು ಅವರಲ್ಲಿದೆ ಎಂದು ನಾವು ಬಹಳ ಧೈರ್ಯವಾಗಿ ಹೇಳಬಹುದಾಗಿತ್ತು. ಆದರೆ ಇಲ್ಲಿ ಅದು ಇವತ್ತು ಆಗಿಲ್ಲ. ಇವತ್ತು ಬೆಳಿಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರೂ ಕೂಡ ಈ ವಿಚಾರ ಬಗ್ಗೆ ಮಾತನಾಡುವಾಗ ಅವರೂ ಕೂಡ ಹೇಳಿದರು. ಇದು ನಮ್ಮ ಒಂದು ಅಧಿಕೃತ ಪ್ರಕಟಣೆ ಅಲ್ಲವೆಂದು ಹೇಳಿದರು, ಅದು ಯಾವುದು ಎಂದರೆ ನಿಮ್ಮ ಕರ್ನಾಟಕ ಅಭಿವೃದ್ಧಿ ರಂಗ ಅದು ಕೂಡ ನಮಗೆ ಒಂದು ಅನುಮಾನ ಬರತಕ್ಕಂಥ ಪರಿಸ್ಥಿತಿ ಇದೆ. ಅವರು ಅಧಿಕೃತ ಅಲ್ಲವೆಂದು ಹೇಳಿದ್ದಾರೆ. ನೀವು ಅದನ್ನು ಎಲ್ಲಾ ಪತ್ರಿಕೆಗಳ ಮುಖಾಂತರ ಬಹಿರಂಗ ಮಾಡಿದ್ದೀರಿ. ಸರ್ಕಾರದ ಮುದ್ರೆ ಕೂಡ ಅದರ ಮೇಲೆ ಇದೆ. ಆದರೆ ಇವತ್ತು ನಿಮ್ಮ ಸಚಿವರು ಹೇಳಿದ ಮಾತು ಅದು ಅಧಿಕೃತ ಅಲ್ಲ. ಇವೆಲ್ಲಾ ನೋಡಿದಾಗ ಇದಕ್ಕೆ ನಿಮ್ಮಲ್ಲಿ ಎಲ್ಲಿ ಬದ್ಧತೆ ಇದೆ ಎಂದು ಪ್ರಶ್ನೆ ಮಾಡಬೇಕಾದ ಪರಿಸ್ಥಿತಿ ಇದೆ. ಆದುದರಿಂದಲೇ ಅದು ಒಂದು ಕಡೆಯಾದರೆ, ಇನ್ನೊಂದು ಕಡೆ, ಮಾನ್ಯ ರಾಷ್ಟ್ರಪತಿಗಳು ಭಾಷಣ ಬಹುಶಃ ಅನೇಕ ವಿಚಾರಗಳಲ್ಲಿ ಅವರು ಹೇಳಿರತಕ್ಕಂಥಾದ್ದನ್ನು ನಾವು ಎಲ್ಲರೂ ಕೂಡ ಒಪ್ಪುತ್ತಿದ್ದೇವೆ. ಆದರೆ ಒಂದು ವಿಚಾರ ನಾವು ಏನು ಹೇಳಬೇಕು ಎಂದರೆ, ಈ ರಾಷ್ಟ್ರಪತಿಗಳ ಭಾಷಣದಲ್ಲಿ ಮುಖ್ಯವಾಗಿರತಕ್ಕಂಥಾದ್ದು ಏನು? ಈಗ ಪವರ್ ಜನರೇಷನ್ ಬಗ್ಗೆ ಮಾತನಾಡುತ್ತೇವೆ. ಎಲ್ಲರಿಗೂ ಕೂಡ ಗೊತ್ತಿದೆ. ಹೆಚ್ಚು ಪವರ್ ಜನರೇಷನ್ ನಮ್ಮ ರಾಜ್ಯದಲ್ಲಿ ಆಗಬೇಕು. ಹೊಸ ಹೊಸ ಥರ್ಮಲ್ ಪ್ಲಾಂಟ್ ಇರಬಹುದು. ಅಥವಾ ಹೈಡ್ರೋ ಎಲೆಕ್ಟ್ರಿಕ್ ಪ್ಲಾಂಟ್‌ಗಳಿರಬಹುದು, ಅದು ಮಾಡಬೇಕೆಂದು ನಮ್ಮ ಎಲ್ಲರ ಮನಸ್ಸಿನಲ್ಲಿ ಇರುತ್ತದೆ. ಆದರೆ ಅದಕ್ಕಿಂತ ಹೆಚ್ಚಾಗಿ ಅವರು ಹೇಳಿರತಕ್ಕಂಥಾದ್ದು ಏನೆಂದರೆ, ಹೊಸ ತಂತ್ರಜ್ಞಾನ. ಅದನ್ನು ಉಪಯೋಗಿಸತಕ್ಕಂಥಾದ್ದು ಕೂಡ ಆಗಬೇಕೆಂದು ಅವರ ಮುಖ್ಯ ಕಾಳಜಿ. ಅದನ್ನು ಅವರು ಹೇಳಿದ್ದಾರೆ. ಈ ಜಾತ್ರೋಪ ಮುಖಾಂತರ ತಯಾರು ಮಾಡತಕ್ಕಂಥ ಒಂದು ಎನರ್ಜಿ

ಇರಬಹುದು. ಅಥವಾ ತ್ಯಾಜ್ಯವಸ್ತುಗಳಿಂದ ತಯಾರು ಮಾಡತಕ್ಕಂಥ ಎನರ್ಜಿ ಇರಬಹುದು. ಇದಕ್ಕೆ ಅವರು ಗಮನ ಕೊಟ್ಟಿದ್ದಾರೆ. ಏಕೆಂದರೆ, ಇದು ಹೊಸ ಚಿಂತನೆ. ಸರ್ಕಾರ ಯಾವಾಗಲೂ ಕೂಡ ಹೊಸ ಚಿಂತನೆಗಳಿಗೆ ಅವಕಾಶ ಮಾಡಿಕೊಡಬೇಕು ಮತ್ತು ಹೊಸ ಪ್ರಯೋಗಗಳನ್ನು ಕೂಡ ಮಾಡಬೇಕಾಗುತ್ತದೆ. ಕೇವಲ ಹಳೆಯ ಪದ್ಧತಿಗಳನ್ನು ನಾವು ನಡೆಸಿಕೊಂಡು ಹೋಗುತ್ತಿದ್ದರೆ ಅಭಿವೃದ್ಧಿಯಾಗುವುದಿಲ್ಲ. ಆ ದೃಷ್ಟಿಯಿಂದ ಇವತ್ತು ಮಾನ್ಯ ರಾಷ್ಟ್ರಪತಿಗಳ ಭಾಷಣದಲ್ಲಿ ಏನೊಂದು ಅಳವಡಿಕೆ ಇದೆ ಎಂದರೆ ಅವರು ಕೂಡ ವಿಜ್ಞಾನಿಗಳು. ಮತ್ತು ಈ ಒಂದು ರಾಷ್ಟ್ರದ ಅತಿ ದೊಡ್ಡ ವಿಜ್ಞಾನಿಯಾಗಿರತಕ್ಕಂಥ ವ್ಯಕ್ತಿ, ವಿಜ್ಞಾನದ ಬಗ್ಗೆ ಮತ್ತು ತಂತ್ರಜ್ಞಾನದ ಬಗ್ಗೆ ಹೆಚ್ಚು ಕಾಳಜಿ ಇರತಕ್ಕಂಥಾವರು. ಆದುದರಿಂದಲೇ ಅವರು ಈ ಅಂಶ ಸೇರಿಸಿದ್ದಾರೆ. ಇದನ್ನು ನಾವು ನಮ್ಮ ಸರ್ಕಾರದವರು ಕಾಮನ್ ಮಿನಿಮಮ್ ಪ್ರೋಗ್ರಾಂನಲ್ಲಿ ಸೇರಿಸಿಕೊಳ್ಳಬೇಕಾಗಿತ್ತು. ನಾವು ಇದನ್ನು ಪ್ರಯೋಗದಲ್ಲಿ ಪ್ರಾರಂಭ ಮಾಡುತ್ತೇವೆ. ಈ ರೀತಿ ಇಂಧನ ಉತ್ಪಾದನೆ ಮಾಡತಕ್ಕಂಥ ಹೊಸ ತಂತ್ರಜ್ಞಾನವನ್ನು ನಾವು ಪ್ರಯೋಗ ಮಾಡುತ್ತೇವೆ. ಎಂದು ಇದನ್ನು ಹೇಳಬೇಕಾಗಿತ್ತು. ಆದರೆ ಯಾವುದೇ ರೀತಿಯ ಪ್ರಸ್ತಾವನೆ ಇದರಲ್ಲಿ ಆಗಿಲ್ಲ. ಬಹುಶಃ ಈ ಎಲ್ಲಾ ಕಾರ್ಯಕ್ರಮಗಳಿಗೆ ಸಾಕಷ್ಟು ಹಣಬೇಕಾಗುತ್ತದೆ. ಸಾಕಷ್ಟು ಖರ್ಚು ಮಾಡಬೇಕಾಗುತ್ತದೆ. ಅದನ್ನು ಯಾವ ರೀತಿ ಮಾಡುತ್ತೇವೆಂದು ಅವರು ಯಾವುದೇ ರೀತಿ ಹೇಳಿಲ್ಲ. ಬಹುಶಃ ಅವರು ಇಲ್ಲಿ ಹೇಳಿರತಕ್ಕಂಥದ್ದು ಏನೆಂದರೆ, ಇದು ಅವರ ಮಾತುಗಳಲ್ಲಿ ಹೇಳಿರತಕ್ಕಂಥಾದ್ದು. ಬೇರೆ ಬೇರೆ ರಾಜ್ಯಗಳಲ್ಲಿ ಇದನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಇದು ವಿಶೇಷವಾಗಿರತಕ್ಕಂಥಾದ್ದು, ಮಧ್ಯಪ್ರದೇಶದಲ್ಲಿ ಛತ್ತೀಸ್‌ಘಡ್‌ನಲ್ಲಿ, ತಮಿಳುನಾಡಿನಲ್ಲಿ, ಆಂಧ್ರಪ್ರದೇಶದಲ್ಲಿ, ಇಲ್ಲೆಲ್ಲಾ ಕೂಡ ಈ ಜೈವಿಕ ಇಂಧನ ಅದರಿಂದ ಉತ್ಪಾದನೆ ಮಾಡಿದ್ದಾರೆಂದು ಹೇಳಿದ್ದಾರೆ. ಹಾಗಾದರೆ ನಮ್ಮ ರಾಜ್ಯದಲ್ಲಿ ಏಕೆ ಮಾಡಬಾರದು? ಈ ಸರ್ಕಾರ ಇದರ ಬಗ್ಗೆ ಏನು ಬದ್ಧತೆ ತೋರಿಸುತ್ತದೆ, ಅದನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ನಮಗೆ ಪ್ರಯೋಜನವಾಗುತ್ತದೆಯೇ ಹೊರತು ಕೇವಲ ಭಾಷಣ ಅಥವಾ ಚರ್ಚೆಯ ಮುಖಾಂತರ ಆಗುವುದಿಲ್ಲ. ಆದರೆ ನಾನಂತೂ ನಂಬಿಕೊಂಡಿದ್ದೇನೆ. ಏನೆಂದರೆ ಇದರ ಮುಖಾಂತರ ಖಂಡಿತವಾಗಿಯೂ ಮುಂದಿನ ದಿವಸಗಳಲ್ಲಿ ಈ ರಾಜ್ಯದಲ್ಲಿ ರಾಷ್ಟ್ರಪತಿಗಳ ಏನೇನು ವಿಶೇಷ ಅಂಶಗಳು ಇವೆ ಅದು ಅನುಷ್ಠಾನವಾಗಬೇಕು. ಆ ನಿಟ್ಟಿನಲ್ಲಿ ಅವರು ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ, ಮತ್ತೊಂದು ಅಂಶ ಏನೆಂದರೆ, ನಮ್ಮ ರಾಜ್ಯದಲ್ಲಿ ವಿಶೇಷವಾಗಿ ನಗರಾಭಿವೃದ್ಧಿ ಬಗ್ಗೆ ಕೂಡ ಸಾಕಷ್ಟು ವಿಚಾರಗಳನ್ನು ಮಾನ್ಯ ರಾಷ್ಟ್ರಪತಿಗಳೂ ಕೂಡ ಹೇಳಿದ್ದಾರೆ. ಬೆಂಗಳೂರು ನಗರದ ವಿಚಾರ ಮತ್ತು ಸಣ್ಣ ಸಣ್ಣ ನಗರಗಳನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕು, ಯಾವ ರೀತಿ ಅದನ್ನು ಮೇಲೆ ತರಬೇಕೆಂದು ಅವರು ಹೇಳಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ ಕೂಡ ನಾವು ನೋಡಿದ್ದೇವೆ. ಹಿಂದೆ 1999 ರಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ, ಯಾವ ರೀತಿಯಲ್ಲಿ ಬೆಂಗಳೂರಿನ ಒಂದು ಪರಿಸ್ಥಿತಿ ಹದಗೆಟ್ಟು ಹೋಗಿತ್ತು. ಬೆಂಗಳೂರಿನ ಬಗ್ಗೆ ಹೆಚ್ಚು ಆಸಕ್ತಿ ಇರಲಿಲ್ಲ. ರಾಷ್ಟ್ರಮಟ್ಟದಲ್ಲಿ ಎಲ್ಲರೂ ಕೂಡ ಹೈದರಾಬಾದ್ ಬೆಳೆಯುತ್ತಿದೆ, ಬೇರೆ ನಗರಗಳು ಬೆಳೆಯುತ್ತಿವೆ ಎಂದು ಹೇಳಿದಾಗ, ಈ ಸಂದರ್ಭದಲ್ಲಿ ಒಂದು ದೃಢ ಸಂಕಲ್ಪ ಮಾಡಿ ಇವತ್ತು ಬೆಂಗಳೂರು ನಗರ ಬಹಳ ಒಂದು ರೀತಿಯಲ್ಲಿ ಮತ್ತೆ ಈ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನ ಪಡೆಯತಕ್ಕಂಥ ಸ್ಪರ್ಧೆಗೆ ಇಳಿಯತಕ್ಕಂಥ ಒಂದು ವಾತಾವರಣ

ನಿರ್ಮಾಣವಾಯಿತು. ಅದಕ್ಕೆ ಸಾಕಷ್ಟು ಕಾರಣಗಳು ಇವೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ವಿಶೇಷವಾಗಿ ಬಿಡಿಎ ಎನ್ನುವ ಒಂದು ಸಂಸ್ಥೆ ಇದೆ. ಯಾವ ಒಂದು ಸಂಸ್ಥೆ ಮುಚ್ಚಿ ಹೋಗಬೇಕು ಎನ್ನುವಂಥಾದ್ದನ್ನು ನಾವು ಪುನರ್ ಜೀವ ಕೊಟ್ಟು, ಇವತ್ತು ಇಡೀ ರಾಷ್ಟ್ರಕ್ಕೆ ಒಂದು ಮಾದರಿ ಸಂಸ್ಥೆಯನ್ನಾಗಿ ಮಾಡಿರತಕ್ಕಂಥಾದ್ದು ನಮ್ಮ ಸಾಧನೆ. ಇವತ್ತು ಅದನ್ನು ಬೆಳೆಸತಕ್ಕಂಥಾದ್ದು ಕೂಡ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಚಂದ್ರಶೇಖರ್‌ರವರು ಮಾತನಾಡುವಾಗ ಎಲ್ಲಾ ಕಾರ್ಪೋರೇಷನ್‌ನಿಂದಲೇ ಆಗಿದ್ದು, ನಾವೇ ಎಲ್ಲಾ ಸ್ವತಃ ಮಾಡಿಕೊಂಡಿದ್ದೇವೆ ಎನ್ನುವ ರೀತಿಯಲ್ಲಿ ಅವರು ಮಾತನಾಡಿದರು. ಅವರು ಬಹಳ ಹುರುಪಿನಿಂದ ಹೇಳುತ್ತಿದ್ದರು ಎನ್ನುವ ಕಾರಣಕ್ಕಾಗಿ ನಾವು ಅಡ್ಡಬರಲಿಲ್ಲ. ತಾವು ದಯವಿಟ್ಟು ಗಮನಿಸಬೇಕು. ನಾನು ಲೋನ್ ರೆವಿನ್ಯೂ ರಿಸೀಟ್ಸ್ ಸ್ವಲ್ಪ ಹೆಚ್ಚು ಕಡಿಮೆ 29 ಸಾವಿರ ಕೋಟಿ ರೂ ಬರುತ್ತದೆ. ನಾನು ಲೋನ್ ರೆವಿನ್ಯೂ ರಿಸೀಟ್ಸ್‌ನಲ್ಲಿ ಈಗ ಲ್ಯೂಯೇಷನ್ ಆಫ್ ಫಂಡ್ಸ್‌ನಲ್ಲಿ 36 ಪರ್ಸೆಂಟ್‌ನ್ನು ಲೋಕಲ್ ಸೆಲ್ಫ್ ಗೌರ್ನಮೆಂಟ್‌ಗೆ ಕೊಡುತ್ತೇವೆ. ಅದರಲ್ಲಿ 85 ಪರ್ಸೆಂಟ್ ಪಂಚಾಯಿತಿಗೆ ಹೋಗುತ್ತದೆ. 15 ಪರ್ಸೆಂಟ್ ಅರ್ಬನ್ ಡೆವಲಪ್ ಮೆಂಟ್‌ಗೆ ಅಂದರೆ ಅರ್ಬನ್ ಬಾಡಿಗೆ ಹೋಗುತ್ತದೆ. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇಲ್ಲಿನ ಜನಸಂಖ್ಯೆಯ ಆಧಾರದ ಮೇಲೆ 6 ಸಾವಿರ ಕೋಟಿ ರೂ. ಗಿಂತ ಹೆಚ್ಚು ಬರುತ್ತದೆ. ಈ ಲೆಕ್ಕಾಚಾರ ಬಿಟ್ಟು ನಿಮ್ಮ ಸರ್ಕಾರಕ್ಕೆಲ್ಲಾ ನಾವು ಕೊಟ್ಟಿರತಕ್ಕಂಥ ಹಣ ಎಂದರೆ ಹೇಗೆ? ಮಾಮೂಲಿ ರೈತ ಕೊಟ್ಟಿರತಕ್ಕಂಥ ತೆರಿಗೆ ಹಣ ಕೂಡ ಇದರಲ್ಲಿ ಸೇರಿದೆ. ನೀವು ಏನೂ ಕೊಟ್ಟಿಲ್ಲ, ಎಲ್ಲ ಬೆಂಗಳೂರಿನವರಿಂದ ಸ್ವಯಂ ಉದ್ಭವವಾಗಿದೆ ಎನ್ನತಕ್ಕಂಥಾದ್ದು ತಪ್ಪು ಅಭಿಪ್ರಾಯ. ಈ ರೀತಿಯಾಗಬಾರದು.

ಶ್ರೀ ನೆ.ಲ. ನರೇಂದ್ರಬಾಬು : ಇಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಸುಮಾರು 6 ಸಾವಿರ ಕೋಟಿ ರೂ. ಗಿಂತ ಹೆಚ್ಚು ಬರುತ್ತದೆಂದು ತಾವು ಹೇಳಿದ್ದೀರಿ. ಇದು ಯಾವುದರಲ್ಲಿ ಬರುತ್ತದೆಂಬುದನ್ನು ತಾವು ದಯವಿಟ್ಟು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : 6 ಸಾವಿರ ಕೋಟಿ ರೂಪಾಯಿ ಬರಬಹುದೆಂದು ಲೆಕ್ಕ ಹೇಳಿದ್ದೇನೆ. ಈ ಲೆಕ್ಕ ಯಾವರೀತಿ ಎಂದರೆ, ನಾನ್ ಲೋನ್ ರೆವಿನ್ಯೂ ರಿಸೀಟ್ಸ್ ಎನ್ನತಕ್ಕಂಥಾದ್ದೊಂದು ಇದೆ. ಆ ನಾನ್ ಲೋನ್ ರೆವಿನ್ಯೂ ರಿಸೀಟ್ಸ್‌ನಲ್ಲಿ ಡಿವಾಲ್ಯುಯೇಷನ್ ಆಫ್ ಫಂಡ್ಸ್‌ನಲ್ಲಿ 36% of the total non-loan revenue receipts will be divided between the urban and as well as panchayaths. out of the 35%, 85% goes to local self government panchayaths, ಇದರೊಳಗೆ 15% goes to urban bodies. ಆ ಅರ್ಬನ್‌ಬಾಡಿಸ್‌ನೊಳಗೆ ಪಾಪ್ಯುಲೇಷನ್ ಆಧಾರದ ಮೇಲೆ ಹಣ ಕೊಡುತ್ತೇವೆ. ಅದು ಸ್ವಲ್ಪ ಹೆಚ್ಚು ಕಡಿಮೆ 70 ರಿಂದ 75 ಲಕ್ಷ ಇರುವುದರಿಂದ, ಈ ಒಂದು ಪ್ರಮಾಣದಲ್ಲಿ ನಿಮಗೆ ಹಣ ಬರುತ್ತದೆಯೆಂದು ನಾನು ಹೇಳಿದೆಯಷ್ಟೆ.

ಶ್ರೀ ದಿನೇಶ್ ಗುಂಡುರಾವ್ : ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳತಕ್ಕಂಥಾದ್ದಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ, ನಮ್ಮ ವಾದ ಏನೆಂದರೆ, ಬೆಂಗಳೂರು ನಗರದಲ್ಲಿ ಉತ್ಪಾದನೆಯಾಗತಕ್ಕಂಥ ಆದಾಯದಲ್ಲಿ ಸರ್ಕಾರಕ್ಕೆ ಬರತಕ್ಕಂಥ ಶೇರ್ ಜಾಸ್ತಿ ಇದೆ. ಆದ್ದರಿಂದ,

ಇಲ್ಲಿಂದ ಬರತಕ್ಕಂಥ ಶೇರ್‌ಗೆ ಹೋಲಿಸಿದಾಗ ಬೆಂಗಳೂರು ನಗರದ ಅಭಿವೃದ್ಧಿಗೋಸ್ಕರ ಬರುತ್ತಿರುವ ಶೇರ್ಸ್ ತುಂಬಾ ಕಡಿಮೆ ಎನ್ನತಕ್ಕಂಥಾದ್ದು ನಮ್ಮ ವಾದವಾಗಿದೆ. ನಮ್ಮ ಬೆಂಗಳೂರಿಗೆ ಏನು ಬರುತ್ತಿಲ್ಲವೆಂದು ನಾವು ಹೇಳುತ್ತಿಲ್ಲ. ಆದರೆ, ಕಡಿಮೆ ಪ್ರಮಾಣದಲ್ಲಿ ಬರುತ್ತಿದೆ ಮತ್ತು ಎಷ್ಟು ಬೇಕಾಗಿದೆಯೋ ಅಷ್ಟು ಬರುತ್ತಿಲ್ಲವೆಂಬುದು ನಮ್ಮ ವಾದವಾಗಿದೆ. ಅವರು ಬೆಂಗಳೂರು ಮಹಾನಗರ ಪಾಲಿಕೆ ಬಗ್ಗೆ ಮಾತನಾಡಿದರು. ಇವತ್ತು ಬೆಂಗಳೂರಿನಲ್ಲಿ ಬಿಡಿಎ ಕೂಡ ಬಹಳ ದೊಡ್ಡ ಸಂಸ್ಥೆ ಆಗಿದೆ. ಇದೂ ಕೂಡ ಸ್ವಾವಲಂಬನೆಯ ಒಂದು ಸಂಸ್ಥೆಯಾಗಿದೆ. ಇವತ್ತು ಸಾಕಷ್ಟು ಕೆಲಸವನ್ನು ಬಿಡಿಎ ತನ್ನ ಸ್ವಂತ ಬಲದ ಮೇಲೆ ಮಾಡುತ್ತಿದೆ. ಸರ್ಕಾರದ ಕಡೆಯಿಂದ ಅವರು ಒಂದು ಪೈಸೆ ಕೂಡ ತೆಗೆದುಕೊಳ್ಳುತ್ತಿಲ್ಲ. ಹಾಗೆಯೇ ಸರ್ಕಾರದ ಕಡೆಯ ಆದಾಯದಿಂದ ಬಿಡಿಎ ಗೆ ಯಾವುದೇ ರೀತಿಯ ಪಾಲುದಾರಿಕೆ ಕೊಡುತ್ತಿಲ್ಲ. ಇವತ್ತಿನ ದಿವಸ ಬಿಡಿಎ ನವರು ರಿಂಗ್ ರೋಡ್ ಮತ್ತು ಫ್ಲೈ ಓವರ್ ಮಾಡಿದ್ದಾರೆ. ಮತ್ತೆ ಒಂದು ದೊಡ್ಡ ಪೆರಿಫೆರಾಲ್ ರೋಡ್ ಮಾಡಬೇಕೆಂದು ಇದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಗಳು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇರುತ್ತದೆ. ಬಹುಶಃ ಇದಕ್ಕೆ ಸುಮಾರು ಸಾವಿರ ಕೋಟಿ ರೂಪಾಯಿ ಖರ್ಚಾಗುತ್ತದೆ. ಆದರೆ ತಮ್ಮ ಸ್ವಂತ ಸಂಪತ್ತಿನಲ್ಲಿ ಅದನ್ನು ಮಾಡುತ್ತೇವೆ ಎಂದು ಹೇಳತಕ್ಕಂಥ ಶಕ್ತಿ ಇವತ್ತು ಬಿ.ಡಿ.ಎ.ಗೆ ಬಂದಿದೆ. ಯಾವ ಒಂದು ಸಂಸ್ಥೆ ಮುಚ್ಚಬೇಕಾಗಿತ್ತೋ ಆ ಸಂಸ್ಥೆಗೆ ಇಂಥ ಒಂದು ಶಕ್ತಿ ಬಂದಿರತಕ್ಕಂಥಾದ್ದನ್ನು ನೋಡಿದಾಗ ಬಹುಶಃ ನಾವು ಯಾವುದೇ ಒಂದು ಸಂಸ್ಥೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದರೆ ಖಂಡಿತವಾಗಿ ಆ ಸಂಸ್ಥೆಗೆ ನಾವು ಜೀವ ತುಂಬಬಹುದು ಮತ್ತು ಆ ಸಂಸ್ಥೆ ಕ್ರಿಯಾಶೀಲವಾಗಿ ಕೆಲಸ ಮಾಡುವುದಕ್ಕೆ ಶಕ್ತಿಯನ್ನು ಕೊಡಬಹುದು. ಇದು ಕೇವಲ ಬಿಡಿಎ ಒಂದೇ ಅಲ್ಲ, ನಮ್ಮಲ್ಲಿರತಕ್ಕಂಥ ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ ಸಂಸ್ಥೆಗಳೂ ಕೂಡ ಇರಬಹುದು. ಇವತ್ತಿನ ದಿವಸ ಅನೇಕ ಪಬ್ಲಿಕ್ ಅಂಡ್‌ರ್ ಟೇಕಿಂಗ್ ಸಂಸ್ಥೆಗಳು ಮುಚ್ಚಿಹೋಗುತ್ತಿವೆ. ಇವುಗಳು ಏಕೆ ಮುಚ್ಚಿಹೋಗುತ್ತಿವೆಂದರೆ, ಆ ಸಂಸ್ಥೆಗಳನ್ನು ಚೆನ್ನಾಗಿ ನಡೆಸಬೇಕೆಂಬ ಒಂದು ದೃಢಸಂಕಲ್ಪ ಅಥವಾ ಒಂದು ದೃಢನಿರ್ಧಾರವನ್ನು ಯಾರು ಮಾಡುವುದಿಲ್ಲ. ಅಧಿಕಾರಿಗಳು ಆಗಾಗ ವರ್ಗಾವಣೆ ಆಗುತ್ತಿರುತ್ತಾರೆ. ಹೊಸದಾಗಿ ಬಂದವರಿಗೆ ಆ ಸಂಸ್ಥೆಗಳ ಬಗ್ಗೆ ಹೆಚ್ಚು ಕಾಳಜಿ ಇರುವುದಿಲ್ಲ. ಹಾಗೆಯೇ ಯಾವರೀತಿಯಾಗಿ ಮಾರ್ಕೆಟಿಂಗ್ ಮಾಡಬೇಕೆಂಬುದು ಅವರಿಗೆ ಗೊತ್ತಿರುವುದಿಲ್ಲ. ಆದುದರಿಂದ ಇವತ್ತಿನದಿವಸ ನಾವು ಹೊಸ ಕಾರ್ಯಕ್ರಮಗಳನ್ನು ಮಾಡಿಕೊಳ್ಳುವುದು ಒಂದು ಕಡೆ ಇದ್ದರೂ ಕೂಡ ಇರತಕ್ಕಂಥ ವ್ಯವಸ್ಥೆಯನ್ನು ಸರಿಮಾಡಿಕೊಳ್ಳಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ, ಇದರ ಬಗ್ಗೆ ಹೆಚ್ಚು ಚಿಂತನೆ ಮಾಡಿದರೆ ಇನ್ನೂ ಒಳ್ಳೆಯದೆಂದು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮಲ್ಲಿರತಕ್ಕಂಥ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಇರಬಹುದು, ಈಗ ನಮ್ಮಲ್ಲಿರತಕ್ಕಂಥ ಮಲೆನಾಡು ಅಭಿವೃದ್ಧಿ ಮಂಡಳಿ ಇದೆ, ಮತ್ತೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹಾಗೂ ಬಯಲುಸೀಮೆ ಅಭಿವೃದ್ಧಿ ಮಂಡಳಿ ನಮ್ಮಲ್ಲಿವೆ. ಇವುಗಳಿಂದ ನಮ್ಮ ಜನಗಳಿಗೆ ನಿಜವಾಗಿ ಯಾವರೀತಿಯಾದ ಪ್ರಯೋಜನ ಆಗುತ್ತಿದೆ ಎನ್ನತಕ್ಕಂಥಾದ್ದು ನೀವೇ ಹೇಳಿ? ಆದ್ದರಿಂದ, ಇರತಕ್ಕಂಥಾದ್ದನ್ನೇ ನಾವು ಸರಿಯಾಗಿ ನೋಡಿಕೊಳ್ಳುವುದಕ್ಕೆ ಮತ್ತು ಸರಿಯಾಗಿ ನಡೆಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಇದರ ಜೊತೆಗೆ ಹೊಸ ಚಿಂತನೆ, ಹೊಸ ಕಾರ್ಯಕ್ರಮಗಳನ್ನು ಮಾಡಿಕೊಂಡು ಹೋದರೆ ಹೇಗೆ? ಆದ್ದರಿಂದ, ನಮ್ಮ ಒಂದು ಆಲೋಚನೆ ಏನೆಂದರೆ ಆಡಳಿತದಲ್ಲಿ ಒಂದು

ಸುಧಾರಣೆಯಾಗಬೇಕು, ಕೇವಲ ಘೋಷಣೆಗಳು ಅಲ್ಲ. ಮತ್ತೆ ಈ ಟ್ರಾನ್ಸ್‌ಫರ್ ಪಾಲಿಸಿ ಕೂಡ ಕರೆಕ್ಟ್ ಆಗಿ ಆಗಬೇಕು. ಇವೆಲ್ಲವನ್ನೂ ನಾವು ಮಾಡಿದಾಗ ಮಾತ್ರ ನಮಗೆ ಒಳ್ಳೆಯದೊಂದು ಪ್ರತಿಫಲ ಸಿಗುತ್ತದೆ. ಮತ್ತು ಜನರಿಗೂ ಕೂಡ ಒಳ್ಳೆಯದಾಗುತ್ತದೆ. ಕೇವಲ ಘೋಷಣೆ ಮಾಡಿದರೆ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶೇಷವಾಗಿ ನಗರಾಭಿವೃದ್ಧಿ ವಿಚಾರ ಹೇಳಬೇಕೆಂದರೆ ಇವತ್ತಿನ ದಿವಸ ನಾಗರೀಕತೆ ಬೆಳೆಯುತ್ತಿದೆ. ಇವತ್ತು ಇಲ್ಲಿ ಅನೇಕ ಜನರು ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಗ್ರಾಮೀಣ ಜನರಿಗೆ ಅನ್ಯಾಯವಾಗಬೇಕೆಂದು ಯಾರೂ ಕೂಡ ಹೇಳತಕ್ಕಂಥಾದ್ದು ಇಲ್ಲ ಅಥವಾ ಅವರಿಗೆ ಕಡಿಮೆ ದುಡ್ಡು ಕೊಡಬೇಕೆಂದು ಯಾರೂ ಕೂಡ ಹೇಳುವುದಿಲ್ಲ. ಆದರೆ, ಕಾಲಕ್ರಮೇಣ ಬರುತ್ತಾ ಬರುತ್ತಾ ನಗರ ಪ್ರದೇಶಕ್ಕೆ ಹೆಚ್ಚು ಜನರು ಬರುತ್ತಿದ್ದಾರೆ. ಬಹುಶಃ ಇನ್ನೊಂದು 20 ವರ್ಷಗಳಲ್ಲಿ ಇಡೀ ರಾಷ್ಟ್ರದ 50 ಪರ್ಸೆಂಟ್ ಜನ ನಗರ ಪ್ರದೇಶಗಳಲ್ಲಿರುತ್ತಾರೆ. ಆದ್ದರಿಂದ ನಗರಗಳ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಆದರೆ, ಇದರ ಬಗ್ಗೆ ಚಿಂತನೆ ಮಾಡುತ್ತಿರುವುದೇ ತಪ್ಪು ಎನ್ನತಕ್ಕಂಥ ಅಭಿಪ್ರಾಯವನ್ನು ಎಲ್ಲೋ ಒಂದು ಕಡೆ ಕೆಲವರು ಇಲ್ಲಿ ಮಾಡಿದರು. ಇವತ್ತು ಬೆಂಗಳೂರು ನಗರ ಬೆಳೆದಿದೆ. ಇದರಿಂದ ನಮ್ಮ ರಾಜ್ಯಕ್ಕೆ ಸಾಕಷ್ಟು ಪ್ರಯೋಜನವಾಗಿದೆ. ಬೆಂಗಳೂರು ನಗರ ಬೆಳೆಯುತ್ತಿರುವುದಕ್ಕೆ ಒಂದು ಕಡೆ ಕಡಿವಾಣ ಹಾಕಬೇಕೋ ಅಥವಾ ಬಿಡಬೇಕೋ ಎನ್ನತಕ್ಕಂಥ ಪ್ರಶ್ನೆ ಬೇರೆ. ಆದರೆ, ಮುಂಬಯಿ, ದೆಹಲಿ ಮತ್ತು ಕಲ್ಕತ್ತಾ ನಗರಗಳು ಇದರ ಎರಡರಷ್ಟು ಬೆಳೆದಿವೆ. ಬೆಂಗಳೂರು ಕೂಡ ಇನ್ನೂ ಬೆಳೆಯಬಹುದು. ಇದನ್ನು ನಿಲ್ಲಿಸಬೇಕೆಂಬುದು ಏನೂ ಇಲ್ಲ. ಇದು ಇನ್ನೂ ಬೆಳೆಯಲಿ. ನ್ಯೂಯಾರ್ಕ್ ಎನ್ನತಕ್ಕಂಥ ನಗರಗಳು ಇವತ್ತಿನ ದಿವಸ ಬೃಹತ್ ಆಗಿ ಬೆಳೆದಿವೆ. ಬಹುಶಃ ಅಮೇರಿಕಾ ರಾಷ್ಟ್ರವನ್ನು ನೋಡಿದರೆ ಇದು ದೊಡ್ಡ ವಿಶಾಲವಾದ ರಾಷ್ಟ್ರವಾಗಿದೆ. ಆದರೆ, ಅಲ್ಲಿರತಕ್ಕಂಥ ಐದಾರು ನಗರಗಳಲ್ಲಿ ಮಾತ್ರ ಹೆಚ್ಚಿನ ಜನಸಂಖ್ಯೆ ಇರತಕ್ಕಂಥಾದ್ದು. ಇವತ್ತಿನದಿವಸ ನಗರ ಪ್ರದೇಶಗಳಿಗೆ ಹೆಚ್ಚು ಜನರು ಬರುತ್ತಿದ್ದಾರೆ. ಏಕೆಂದರೆ, ಇಲ್ಲಿ ಉದ್ಯೋಗ ಸಿಗುತ್ತದೆ. ಇವತ್ತಿನದಿವಸ ಎಲ್ಲರೂ ಕೂಡ ಕೃಷಿ ಕ್ಷೇತ್ರದಲ್ಲಿ ಜೀವನ ನಡೆಸುವುದಕ್ಕೆ ಕಷ್ಟದ ಪರಿಸ್ಥಿತಿ ಇದೆ. ಏಕೆಂದರೆ, ಇವತ್ತಿನದಿವಸ ಜಾಗತೀಕರಣ ಮತ್ತು ಉದಾರಿಕರಣ ನೀತಿಗಳು ಬಂದಿರುವುದರಿಂದ ಇದರಲ್ಲಿ ನಾವೆಲ್ಲರೂ ಸ್ಪರ್ಧೆ ಮಾಡಬೇಕಾಗಿದೆ. ಕೇವಲ ಒಂದೇ ಒಂದು ದೃಷ್ಟಿಯಿಂದ ನೋಡಿ ಅರ್ಬನೈಜೇಷನ್ ಸರಿಯಲ್ಲ, ಇದು ಆಗಬಾರದು ಎಂದು ಹೇಳತಕ್ಕಂಥಾದ್ದು ಸಹ ತಪ್ಪು ಆದ್ದರಿಂದ, ಈ ಒಂದು ದೃಷ್ಟಿಯ ಹಿನ್ನೆಲೆಯಲ್ಲಿ ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೆ ಇವತ್ತಿನದಿವಸ ಪರಿಸರದ ಬಗ್ಗೆ ವಿಚಾರ ಕೂಡ ಮಾಡಬೇಕಾಗಿದೆ. ನಮ್ಮಲ್ಲಿರತಕ್ಕಂಥ ಅರಣ್ಯ ಭೂಮಿ ಬಗ್ಗೆ ಕೂಡ ಚಿಂತನೆ ಮಾಡಬೇಕಾಗಿದೆ. ಏಕೆಂದರೆ ನಾವು ಏನೇ ಒಂದು ಕಾರ್ಯಕ್ರಮ ಮಾಡಿದಾಗ ನಮ್ಮ ಒಂದು ಜನರೇಷನ್ ಒಂದನ್ನು ಮಾತ್ರ ನೋಡಬಾರದು. ಮುಂದಿನ ಒಂದು ಪೀಳಿಗೆಯ ಬಗ್ಗೆ ಮತ್ತು ಮುಂದಿನ 100 ಅಥವಾ 200 ವರ್ಷಗಳಲ್ಲಿ ಏನಾಗಬಹುದು ಎಂಬುದರ ಬಗ್ಗೆ ಕೂಡ ಚಿಂತನೆ ಮಾಡಬೇಕಾಗುತ್ತದೆ. ಇವತ್ತಿನದಿವಸ ನಶಿಸಿಹೋಗುತ್ತಿರುವುದನ್ನು ಯಾವರೀತಿಯಾಗಿ ಕಾಪಾಡಬಹುದು ಎನ್ನತಕ್ಕಂಥಾದ್ದರ ಬಗ್ಗೆ ಕೂಡ ಚಿಂತನೆ ಮಾಡಬೇಕಾಗಿದೆ ಏಕೆಂದರೆ, ಇವತ್ತಿನ ಪರಿಸ್ಥಿತಿಗೆ ಯಾವರೀತಿಯಾಗಿ ಸುಧಾರಣೆ ಮಾಡಿಕೊಳ್ಳಬಹುದೋ ಅದನ್ನು ಮಾತ್ರ ನಾವು

ಮಾಡುತ್ತಿದ್ದೇವೆ ಹೊರತು ದೂರದೃಷ್ಟಿಯ ಚಿಂತನೆ ಮಾಡುತ್ತಿಲ್ಲ. ಅದು ಕೂಡ ಆಗಬೇಕಾಗಿದೆ. ಈ ಸರ್ಕಾರ 20, 30, 40 ತಿಂಗಳು ಇರುತ್ತದೆಯೋ ಅದು ಬೇಕಾಗಿಲ್ಲ. ಈಗಾಗಲೇ ಭಾಷಣ ಮಾಡುವ ಸಂದರ್ಭದಲ್ಲಿ ಮಾನ್ಯ ಹೆಗಡೆಯವರು ಅಥವಾ ಬೇರೆ ಯಾರೋ ಮಾನ್ಯ ಸದಸ್ಯರು ಮಾತನಾಡುತ್ತಾ ನಾವು ಇನ್ನೂ 20 ವರ್ಷಗಳು ಇರುತ್ತೇವೆಂದು ಹೇಳಿದರು. ನೀವೇ ಇದ್ದು ಸರ್ಕಾರ ಮಾಡಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಏನೇ ಮಾಡಿದರೂ ಕೂಡ ದೂರದೃಷ್ಟಿಯ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಿ, ಮತ್ತೆ ಮೈನ್ಸ್ ವಿಚಾರ ಕೂಡ ಬಹಳ ಮುಖ್ಯವಾದದ್ದು. ಇವತ್ತಿನದಿವಸ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾವು ಕೇಳತಕ್ಕಂಥ ಪ್ರಶ್ನೆ ಏನೆಂದರೆ, ಮೈನ್ಸ್‌ನಿಂದ ಸಾಕಷ್ಟು ಸಂಪಾದನೆ ಇದೆ. ಸಾವಿರಾರು ಕೋಟಿ ರೂಪಾಯಿಗಳಷ್ಟು ಮೈನ್ಸ್‌ನಿಂದ ಅದಿರು ನಮ್ಮ ರಾಜ್ಯದಿಂದ ರಫ್ತು ಆಗುತ್ತಿದೆ. ಮತ್ತು ಇದರಿಂದ ಸಾಕಷ್ಟು ಜನ ಶ್ರೀಮಂತರೂ ಕೂಡ ಆಗಿದ್ದಾರೆ. ನಾವು ಅದರ ಬಗ್ಗೆ ಆಲೋಚನೆ ಮಾಡುವುದಕ್ಕೆ ಆಗುವುದಿಲ್ಲ. ಅಷ್ಟೊಂದು ಮಟ್ಟದಲ್ಲಿ ಹಣಕಾಸನ್ನು ಅವರು ಸಂಪಾದನೆ ಮಾಡಿದ್ದಾರೆ ಮತ್ತೆ ಇದೊಂದು ವೃತ್ತಿ ಕೂಡ ಆಗಿದೆ. ಆದರೆ, ಇದರಿಂದ ನಮ್ಮ ರಾಜ್ಯಕ್ಕೆ ಏನು ಬೆನಿಫಿಟ್ ಆಗುತ್ತಿದೆ? ಅಂದರೆ ನಮ್ಮ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹಣ ಬರುತ್ತಿದೆ? ಇದು ನಮ್ಮ ರಾಜ್ಯದ ಒಂದು ಸಂಪತ್ತು. ಇದನ್ನು ತೆಗೆದು ಎಕ್ಸ್‌ಪೋರ್ಟ್ ಮಾಡಿ ಕರಗಿಸಿದರೆ ಮತ್ತೆ ಇದು ಸಿಗದೇ ಇರತಕ್ಕಂಥ ವಸ್ತು. ಕೆಜಿಎಫ್ ಬಗ್ಗೆ ಮಾನ್ಯ ರಾಜೇಂದ್ರನ್‌ರವರು ಬಹಳ ಚೆನ್ನಾಗಿ ಹೇಳಿದರು. ಗೋಲ್ಡ್ ಇದ್ದಾಗ ಕೆಜಿಎಫ್ ಚೆನ್ನಾಗಿತ್ತು. ಆದರೆ, ಇವತ್ತು ಗೋಲ್ಡ್ ಮೈನ್ಸ್ ಮುಚ್ಚಿರುವುದರಿಂದ ಅದರ ಬಗ್ಗೆ ಯಾರೂ ಚಿಂತನೆ ಮಾಡುತ್ತಿಲ್ಲ. ನಾಳೆ ಬಳ್ಳಾರಿಯ ಪರಿಸ್ಥಿತಿ ಕೂಡ ಅದೇ ಆಗುತ್ತದೆ. ಇವತ್ತು ಇರುವುದರಿಂದ ಎಲ್ಲರೂ ಚೆನ್ನಾಗಿ ಲೂಟಿ ಮಾಡುತ್ತಿದ್ದಾರೆ. ನಾಳೆದಿವಸ ಇದೆಲ್ಲಾ ಹೋದಮೇಲೆ ಪರಿಸ್ಥಿತಿ ಏನಾಗುತ್ತದೆ? ಆದ್ದರಿಂದ ಸ್ಥಳೀಯವಾಗಿರತಕ್ಕಂಥ ಜನರಿಗೂ ಕೂಡ ಸಹಾಯವಾಗಬೇಕಾಗುತ್ತದೆ. ಇದರ ಬಗ್ಗೆ ಚಿಂತನೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಇದು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೂ ಕೂಡ ಚೆನ್ನಾಗಿ ಗೊತ್ತಿದೆ. ಏಕೆಂದರೆ, ಇದು ಅವರ ಜಿಲ್ಲೆಯಲ್ಲಿಯೇ ಬರತಕ್ಕಂಥಾದ್ದು. ಇವತ್ತಿನ ದಿವಸ ಸಾವಿರಾರು ಕೋಟಿ ರೂಪಾಯಿ ಎಲ್ಲೋ ಹೋಗುತ್ತಿದೆ. ನಮ್ಮ ರಾಜ್ಯಕ್ಕೆ ಇದರಿಂದ ಏನು ಉಪಯೋಗ ಆಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಕೂಡ ಸರ್ಕಾರ ಚಿಂತನೆ ಮಾಡಲಿ. ಹಾಗೆಯೇ ನಮ್ಮ ರಾಜ್ಯದ ಬೊಕ್ಕಸಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಕೊನೆಯದಾಗಿ ಪ್ರವಾಸೋದ್ಯಮ ವಿಚಾರದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಕೇರಳ ಮತ್ತು ರಾಜಸ್ಥಾನ್ ರಾಜ್ಯಗಳಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ಕೊಟ್ಟಿದ್ದಾರೆ. ಕೇರಳ ರಾಜ್ಯದಲ್ಲಿ ಇವತ್ತಿನದಿವಸ ಕೈಗಾರಿಕೆಗಳೇ ಇಲ್ಲ. ಆದರೂ ಕೂಡ ಆ ರಾಜ್ಯದಲ್ಲಿ ಸಂಪತ್ತು ಇದೆ. ಏಕೆಂದರೆ ಅಲ್ಲಿ ಟೂರಿಸಂ ಅಷ್ಟೊಂದು ಬೆಳೆದಿದೆ. ಮಾನ್ಯ ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ, ಒಬ್ಬ ಟೂರಿಸ್ಟ್ ನಮ್ಮ ರಾಜ್ಯಕ್ಕೆ ಬಂದರೆ ಕನಿಷ್ಠ ನಾಲ್ಕು ಜನರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆಂದು ಹೇಳಿದ್ದಾರೆ. ಒಬ್ಬ ಪ್ರವಾಸಿ ನಮ್ಮ ರಾಜ್ಯಕ್ಕೆ ಬಂದರೆ ನಾಲ್ಕು ಜನರು ಆ ಒಬ್ಬ ಪ್ರವಾಸಿ ಮುಖಾಂತರ ಅವರುಗಳ ಜೀವನ ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಆದ್ದರಿಂದ, ಈ ಒಂದು ಪ್ರವಾಸೋದ್ಯಮವನ್ನು ಹೆಚ್ಚು ಮಾಡತಕ್ಕಂಥದ್ದರ ಬಗ್ಗೆ ಕೂಡ ಅವರ

ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತಿನದಿವಸ ಪ್ರವಾಸೋದ್ಯಮಕ್ಕೆ ಹೆಚ್ಚಿಗೆ ಏನೂ ಬೇಕಾಗಿಲ್ಲ. ಬಹಳ ಮುಖ್ಯವಾಗಿ ಇದಕ್ಕೆ ಸರ್ಕಾರದ ಕಡೆಯಿಂದ ಅಂದರೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು ಮತ್ತು ಅದರ ಬಗ್ಗೆ ಕಾಳಜಿ ಇರಬೇಕು, ಹಾಗೆಯೇ ಇದಕ್ಕೊಂದು ವಾತಾವರಣವನ್ನು ನಿರ್ಮಾಣ ಮಾಡಬೇಕು. ನಮ್ಮ ರಾಜ್ಯ ಪ್ರವಾಸೋದ್ಯಮದ ದೃಷ್ಟಿಯಲ್ಲಿ ಇವತ್ತಿನದಿವಸ ಮುಂದೆ ಇದೆ ಎನ್ನತಕ್ಕಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕು. ಹಾಗೆಯೇ ಎಲ್ಲಾ ಕಡೆ ರಸ್ತೆಗಳು, ಏರ್‌ಪೋರ್ಟ್ ವ್ಯವಸ್ಥೆ ಮತ್ತು ರೈಲಿನ ವ್ಯವಸ್ಥೆ ಹಾಗೂ ಒಳ್ಳೆಯ ಹೋಟಲ್‌ಗಳ ವ್ಯವಸ್ಥೆ ಮಾಡಬೇಕಾಗುತ್ತದೆ. ಎಲ್ಲವನ್ನೂ ಸರ್ಕಾರ ಮಾಡುವುದಕ್ಕೆ ಆಗುವುದಿಲ್ಲ. ಇವತ್ತಿನದಿವಸ ಕೇರಳದಲ್ಲಿ ಖಾಸಗಿ ಜನರು ಬಂದು ಫೈವ್‌ಸ್ಟಾರ್ ಅಥವಾ ತ್ರೀಸ್ಟಾರ್ ಹೋಟಲ್‌ಗಳನ್ನು ಮಾಡಿದ್ದಾರೆ. ಪ್ರವಾಸಿಗಳು ಅಲ್ಲಿಗೆ ಹೋಗುತ್ತಾರೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡುತ್ತಾ ಪಂಚತಾರ ಹೋಟಲ್‌ಗಳು ಬಂದು ಯಾರಿಗೆ ಏನು ಪ್ರಯೋಜನವೆಂದು ಕೇಳಿದರು. ಆ ಹೋಟೇಲ್‌ಗಳಲ್ಲಿ ಎಷ್ಟು ಜನರು ಬಂದು ಕೆಲಸವನ್ನು ಮಾಡುತ್ತಾರೆ. ಎಷ್ಟು ಜನರು ಬಂದು ಅಲ್ಲಿ ಉಳಿಯುತ್ತಾರೆ. ಅಲ್ಲಿಗೆ ಬಂದು ಕೆಲಸವನ್ನು ಮಾಡುತ್ತಾರೆ. ಎಷ್ಟು ಜನರಿಗೆ ಇದರಿಂದ ಉದ್ಯೋಗ ಸಿಗುತ್ತದೆ ಎಂಬುದನ್ನು ನೋಡಬೇಕು. ಯಾವುದೇ ಬಂಡವಾಳ ನಮ್ಮ ರಾಜ್ಯಕ್ಕೆ ಬಂದರೂ ನಮಗೆ ಅದರಿಂದ ಅನುಕೂಲ ಇದ್ದೇ ಇದೆ. ಅದು ಫೈವ್ ಸ್ಟಾರ್ ಹೋಟೇಲ್‌ನ್ನಾದರೂ ಮಾಡಲಿ, ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಆದರೂ ಮಾಡಲಿ, ಮೆಟ್ರೋ ರೈಲ್‌ನ್ನಾದರೂ ಮಾಡಲಿ, ಅವರು ಏನಾದರೂ ಮಾಡಲಿ, ಬಂಡವಾಳ ಹೂಡಿಕೆಯು ನಮ್ಮ ರಾಜ್ಯದಲ್ಲಿ ಆಗಬೇಕು. ಅದು ಖಾಸಗಿಯಿಂದಲೇ ಆಗಬೇಕು. ಸರ್ಕಾರದ ರೆವಿನ್ಯೂವನ್ನು ನೋಡಿದರೆ ನಾವು ಹೆಚ್ಚು ಖರ್ಚನ್ನು ಮಾಡುವುದಕ್ಕಾಗುವುದಿಲ್ಲ. ಎಲ್ಲವನ್ನು ನಾವು ಸಾಲದ ಮುಖಾಂತರವೇ ಮಾಡುತ್ತೇವೆ. ಆದ್ದರಿಂದಲೇ ಖಾಸಗಿ ಜನರು ಬರತಕ್ಕಂಥಹ ಬಂದು ವಾತಾವರಣ ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಬೇಕು. ಇವತ್ತು ನಾವು ಯಾವುದೇ ತತ್ವದ ಬಗ್ಗೆ ಮಾತನಾಡಬಹುದು, ಆದರೆ ನಮ್ಮ ಕಮ್ಯುನಿಷ್ಟ್ ಪಾರ್ಟಿ ಒಂದು ತತ್ವದ ಬಗ್ಗೆ ಮಾತನಾಡುತ್ತದೆ. ಇವತ್ತು ನೀವು ಚೈನಾ ರಾಷ್ಟ್ರವನ್ನೇ ನೋಡಿ, ಕಮ್ಯೂನಿಸಂ ಎಲ್ಲಿದೆ? ಕೇವಲ ತತ್ವದ ಒಂದು ಮಾತಿಗೋಸ್ಕರ ಇದೆಯೇ ಹೊರತು ಅದು ಚಾಲನೆಯಲ್ಲಿ ಇಲ್ಲ. ಚೈನಾದ ಡೆವಲಪ್‌ಮೆಂಟ್ ಯಾವ ರೀತಿಯಾಗಿದೆ. They have attracted FDI. Foreign Direct Investment attract ಮಾಡಿದ್ದಾರೆ. ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕುತ್ತಾರೆ. ಅದರಿಂದ ಬಹುಶಃ ಅಮೇರಿಕಾವನ್ನು ಕಾಂಪಿಟ್ ಮಾಡತಕ್ಕ ರೀತಿಯಲ್ಲಿ ಚೈನಾದೇಶವು ಬೆಳೆದಿದೆ. ತಾವು ಅಲ್ಲಿಗೆ ಹೋಗಿದ್ದೀರಿ ಎಂದು ಕಾಣಿಸುತ್ತದೆ. ಅದು ಎಷ್ಟು ವ್ಯತ್ಯಾಸ ಇದೆ. ಆ ಪ್ರಕಾರ ನಾವೂ ಕೂಡ ಈ ಓಪನ್ ಮಾರ್ಕೆಟ್‌ನಲ್ಲಿ ಇವತ್ತು ಕಾಂಪಿಟ್ ಮಾಡಲೇಬೇಕು. ನಮ್ಮಲ್ಲಿ ಯಾವುದೇ ಒಂದು ಕ್ಷೇತ್ರದಲ್ಲಿ ಹೆಚ್ಚು ಇನ್‌ವೆಸ್ಟ್‌ಮೆಂಟ್ ಬರುವುದಕ್ಕೆ ಕೂಡ ನಮ್ಮ ಸರ್ಕಾರ ಮುಂದೆ ನಿಂತುಕೊಂಡು ಮಾಡಬೇಕು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ತಿಂಗಳಿಂದ ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ನಗರದ ಬಗ್ಗೆಯೂ ಕೂಡ ಸಾಕಷ್ಟು ಹೇಳಿದ್ದಾರೆ. ಆದರೆ ಬೆಂಗಳೂರು ಮೆಟ್ರೊ ಬಗ್ಗೆ ಕೊನೆಯದಾಗಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಇವತ್ತು ಎಲ್ಲೋ ಒಂದು ಕಡೆ ನಮಗೆ ಬೆಂಗಳೂರು ಮೆಟ್ರೊ ಬಗ್ಗೆ ಗೊಂದಲ

ನಿರ್ಮಾಣವಾಗಿದೆ. ಮೆಟ್ರೊ ರೈಲಿನ ಬಗ್ಗೆ ಒಂದು ಕಡೆ ಮಾನೋ ರೈಲನ್ನು ಮಾಡಬೇಕೆಂದಲೂ ಕೂಡ ಹೇಳಿದ್ದಾರೆ. ಇನ್ನೊಂದು ಕಡೆ ಮೆಟ್ರೊ ರೈಲಿನ ಬಗ್ಗೆಯೂ ಕೂಡ ಹೇಳಿದ್ದಾರೆ. ಇದರ ಬಗ್ಗೆ ನಿನ್ನೆಯೂ ಕೂಡ ಪತ್ರಿಕೆಯಲ್ಲಿ ನೋಡಿದ್ದೇನೆ. ಏನು ಆ ಮೆಟ್ರೊ ರೈಲಿಗೆ ಬೇಕಾಗಿರುವಂತಹ ಜಮೀನುಗಳನ್ನು ನಾವು ಅಕ್ವೈರ್ ಮಾಡಬೇಕಾಗಿದೆ ಅದನ್ನೂ ಕೂಡ ಸ್ಟೇ ಮಾಡಿದ್ದಾರೆಂದು ಹೇಳಿದ್ದಾರೆ ಇದರ ಬಗ್ಗೆ ಮಾನ್ಯ ಧರ್ಮಸಿಂಗ್‌ರವರು ಇದ್ದಾಗ ಹಿಂದಿನ ಸರ್ಕಾರ ಬಹಳ ಕಷ್ಟಪಟ್ಟಿದ್ದಾರೆ. ಇದಕ್ಕಾಗಿ ಅನೇಕ ಅಡಚಣೆಗಳು ಇದ್ದರೂ ಕೂಡ ಈಗಿನ ವಿರೋಧಪಕ್ಷದ ನಾಯಕರು ಅದರ ಹಿಂದೆ ಬಿದ್ದು ಅದನ್ನು ಸ್ಯಾಂಕ್ಷನ್ ಆಗುವಂತೆ ಮಾಡಿದ್ದಾರೆ. ರಾಷ್ಟ್ರಮಟ್ಟದಲ್ಲಿ ಅದಕ್ಕೆ ಬಹಳಷ್ಟು ಒತ್ತಡವನ್ನು ಕೊಟ್ಟು ಇವತ್ತು ಅದು ಅನುಷ್ಠಾನಕ್ಕೆ ಬರುವಂತಹ ಪರಿಸ್ಥಿತಿಗೆ ಈ ಮೆಟ್ರೋರೈಲ್ ಬಂದಿದೆ. ನಾವು ಅದನ್ನು ಇವತ್ತು ಕೈಬಿಡಬಾರದು. ಯಾವುದೇ ಒಂದು ಕಾರಣಕ್ಕೆ ಯಾರೋ ಏನೋ ಹೇಳಿದ್ದಾರೆ ಎನ್ನುವ ಕಾರಣಕ್ಕೆ ಅದು ಆಗಬಾರದು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಬಹಳ ಸ್ಪಷ್ಟತೆ ಬೇಕಾಗುತ್ತದೆ. ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಇರಬಹುದು ಮೆಟ್ರೋ ರೈಲ್ ಇರಬಹುದು, ಇಂತಹ ಒಂದು ಪ್ರಾಜೆಕ್ಟ್‌ಗಳಲ್ಲಿ ನಾವು ಏನು ಮಾಡಬೇಕೆಂದು ಇದ್ದೇವೆ ಅದರ ಬಗ್ಗೆ ಬಹಳ ಗಂಭೀರವಾದ ಚಿಂತನೆ ಮತ್ತು ಸ್ಪಷ್ಟತೆ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ದಯವಿಟ್ಟು ಇದರ ಬಗ್ಗೆ ನೀವು ನಿಮ್ಮ ಉತ್ತರದಲ್ಲಿಯೂ ಕೂಡ ಹೇಳಬೇಕಾಗುತ್ತದೆ. ಇವೆಲ್ಲವೂ ಕೂಡ ಬಹುಶಃ ಇದು ಮಾನ್ಯ ರಾಷ್ಟ್ರಪತಿಯವರ ಭಾಷಣದಲ್ಲಿ ಬರುವುದಿಲ್ಲ. ಆದರೂ ಕೂಡ ಮಾನ್ಯ ರಾಷ್ಟ್ರಪತಿಗಳ ಭಾಷಣದಲ್ಲಿ ನನ್ನ ಪ್ರಕಾರ ಅವರ ಉದ್ದೇಶವೇನಿದೆ ಎಂದು ಹೇಳಿದರೆ ಹೊಸ ತಂತ್ರಜ್ಞಾನ, ಹೊಸ ವಿಚಾರಗಳು, ಹೊಸ ಚಿಂತನೆಗಳು, ಅವೆಲ್ಲವನ್ನೂ ಕೂಡ ಈ ಸರ್ಕಾರ ಅದನ್ನು ಉಪಯೋಗಿಸಿಕೊಳ್ಳಬೇಕು, ಕೇವಲ ಹಳೆಯ ಪದ್ಧತಿಗಳು ಒಂದೇ ಅಲ್ಲ. ಇದರಲ್ಲಿ ಬದಲಾವಣೆಯಾಗುತ್ತಲೇ ಇರಬೇಕು. ಇದರಲ್ಲಿ ಬದಲಾವಣೆಗಳು ಆಗದೇಹೋದರೆ ನಮ್ಮ ರಾಜ್ಯವು ಬದಲಾವಣೆಯಾಗುವುದಿಲ್ಲ ಹಾಗೂ ಅಭಿವೃದ್ಧಿಯೂ ಕೂಡ ಆಗುವುದಿಲ್ಲ. ಆ ಬದಲಾವಣೆಗಳು ಆಗಬೇಕಾದರೆ ಮನಸ್ಸು ಮುಕ್ತವಾಗಿರಬೇಕು. ಮುಕ್ತ ಮನಸ್ಸು ಇದ್ದರೆ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಆದ್ದರಿಂದ ಮುಕ್ತ ಮನಸ್ಸಿನಿಂದ ಆಡಳಿತಪಕ್ಷದವರು ಕೆಲಸವನ್ನು ಮಾಡಿ ಒಳ್ಳೆಯ ರೀತಿಯಲ್ಲಿ ಈ ರಾಜ್ಯವನ್ನು ಅಭಿವೃದ್ಧಿಪಡಿಸಬೇಕು. ನಿಮ್ಮೆಲ್ಲರ ಅಭಿವೃದ್ಧಿಯಲಿ ನಮ್ಮೆಲ್ಲರ ಸಹಕಾರವಿರುತ್ತದೆ. ಆದರೆ ಕೇವಲ ಘೋಷಣೆಗಳು ಬೇಡ, ಕಾರ್ಯಕ್ರಮಗಳು ಅನುಷ್ಠಾನವಾಗಲೆಂದು ಹೇಳಿ ಮಾನ್ಯ ರಾಷ್ಟ್ರಪತಿಗಳ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಅಧ್ಯಕ್ಷರು : ಈಗ ಚರ್ಚೆಯನ್ನು ಮುಕ್ತಾಯ ಮಾಡೋಣ. ಈಗ ರಾತ್ರಿ 8–15 ಗಂಟೆಯಾಗಿದೆ, ಏನು ನಮ್ಮ ಮಾನ್ಯ ರಾಷ್ಟ್ರಪತಿಗಳು ವಿಷನ್ 10 ಈಯರ್ಸ್ ಕರ್ನಾಟಕದ ಡೆವಲಪ್‌ಮೆಂಟ್ ಬಗ್ಗೆ ಕೊಟ್ಟಿದ್ದಾರೆ. ಅದಕ್ಕೆ ಯಾವ ರೀತಿಯಲ್ಲಿ ಯೋಜನೆಯನ್ನು ಕಾರ್ಯರೂಪಕ್ಕೆ ತರತಕ್ಕಂತಹ.......

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮುಖ್ಯಮಂತ್ರಿಗಳು ಎಲ್ಲೋ ಹೋಗುವವರಿದ್ದರೆ ನಾಳೆಗೆ ಹಾಕಿಬಿಡಿ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡಬಹುದು.

ಶ್ರೀ ಎಂ. ಕೃಷ್ಣಪ್ಪ : ನಾಳೆ ಹಾಕಿಬಿಡಿ. ಇಲ್ಲದೇ ಹೋದರೆ ಉತ್ತರವನ್ನು ಕೊಡಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾತನಾಡುವವರು ಬಹಳಷ್ಟು ಜನರು ಇರುವುದರಿಂದ ಈಗಾಗಲೇ ರಾತ್ರಿ 8–15 ಗಂಟೆಯಾಗಿದೆ. ಇನ್ನೊಂದು ದಿವಸ ಇದನ್ನು ಮುಂದುವರಿಸುವುದು ಒಳ್ಳೆಯದು.

ಶ್ರೀ ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಇನ್ನೊಂದು ದಿವಸ ಬೇಡ, ಇವತ್ತೇ ಉತ್ತರವನ್ನು ಕೊಡಿಸಿಬಿಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇನ್ನೊಂದು ದಿವಸವಾದರೂ ಮುಂದುವರೆಸಿ ಈಗಾಗಲೇ 8–15 ಗಂಟೆಯಾಗಿದೆ. ಏನು ಮಾಡೋಣ?

ಅಧ್ಯಕ್ಷರು : ನಮ್ಮ ನಾಯಕರು ಇದರ ಬಗ್ಗೆ ಉತ್ತರವನ್ನು ಕೊಡುತ್ತಾರೆ. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ಎನ್. ಯೋಗೀಶ್‌ಭಟ್ : ಸನ್ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಶ್ರೀ ಕೃಷ್ಣಪ್ಪ : ದಯಮಾಡಿ ನಾನು ನಿಮ್ಮನ್ನು ಕೇಳಲೇ ಇಲ್ಲ. ಎರಡೂವರೆ ವರ್ಷದಲ್ಲಿ ನಾನು ಮಾತನಾಡಬೇಕು, ಸಮಯವನ್ನು ಕೊಡಬೇಕೆಂದು ನಿಮಗೆ ಡಿಸ್ಟರ್ಬ್ ಮಾಡಿಲ್ಲ. ಬೇರೆಯವರು ಭಾಷಣವನ್ನು ಮಾಡುವಾಗ ಮಧ್ಯದಲ್ಲಿ ಇಂಟರ್‌ಫಿಯರೆನ್ಸ್ ಮಾಡಿಲ್ಲ. ನನ್ನ ಎರಡೇ ಎರಡು ಸಜೆಷನ್ಸ್‌ಗಳು ಇವೆ. ದಯವಿಟ್ಟು ಕೇಳಬೇಕು.

ಅಧ್ಯಕ್ಷರು : ದಯಮಾಡಿ ಕೇಳಿ......

ಶ್ರೀ ಎ. ಕೃಷ್ಣಪ್ಪ : ಎರಡೇ ಎರಡು ಸಜೆಷನ್ಸ್‌ಗಳನ್ನು ಹೇಳುತ್ತೇನೆ.

ಅಧ್ಯಕ್ಷರು : ಆಯಿತು ಹೇಳಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ........

ಅಧ್ಯಕ್ಷರು : ಈಗ ಎಲ್ಲರೂ ಕೂಡ ಈ ತರಹ ಮಾಡಿದರೆ ಹೇಗೆ? ನೀವು ಸಹಕರಿಸದೇ ಇದ್ದರೆ ಹೇಗೆ ಆಗುತ್ತದೆ? ಈಗ ಎರಡು ದಿವಸಗಳಿಗೆ ರಿಸ್ಟ್ರಿಕ್ಟ್ ಮಾಡದೇ ಇದ್ದರೆ.....

(ಗೊಂದಲ)

ಶ್ರೀ ಎ. ಕೃಷ್ಣಪ್ಪ : ಎರಡೇ ಎರಡು ಸಜೆಷನ್ಸ್‌ಗಳನ್ನು ಹೇಳುತ್ತೇನೆ.

ಅಧ್ಯಕ್ಷರು : ಈಗಲೂ ಕೂಡ ಹೇಳಿ. ನಾಳೇ ಮಾಡುತ್ತೀರಾ? ಇನ್ನೊಂದು ದಿವಸ ಮಾಡುತ್ತೀರಾ? ಇದರ ಬಗ್ಗೆ ಹೌಸ್ ಡಿಸೈಡ್ ಮಾಡಬೇಕು.

ಶ್ರೀ ಎಸ್. ಯೋಗೀಶ್‌ಭಟ್ : ಸನ್ಮಾನ್ಯ ಅಧ್ಯಕ್ಷರೆ, ನನ್ನದು ಒಂದು ವಿನಂತಿ ಇದೆ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೆ, ಏನು ಸಲಹೆ ಇದೆ ಅದರ ಬಗ್ಗೆ ಹೇಳಿಬಿಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಷ್ಟ್ರಪತಿಗಳ...........

ಶ್ರೀ ಎಸ್. ಯೋಗೀಶ್‌ಭಟ್ : ಒಂದು ನಿಮಿಷ, ದಯವಿಟ್ಟು ಕೇಳಿ...

ಶ್ರೀ ಹೆಚ್.ಡಿ. ಬಸವರಾಜು : ಆ ಭಾಗದಲ್ಲಿ ಎಲ್ಲರೂ ಕೂಡ ಮಾತನಾಡಿದ್ದಾರೆ. ಆ ಭಾಗದಲ್ಲಿ ಇರುವವರೆಲ್ಲರೂ ಮಾತನಾಡುವುದೇನಾ? ತಾವು ಹೇಳಿಬಿಡಿ ಅಧ್ಯಕ್ಷರೆ, ನಾವು ಯಾರೂ ಕೂಡ ಮಾತನಾಡುವುದಿಲ್ಲ.

ಶ್ರೀ ಎಸ್. ಯೋಗೀಶ್‌ಭಟ್ : ಮಾನ್ಯ ರಾಷ್ಟ್ರಪತಿಗಳು ಮಾಡಿರುವಂತಹ ಚಾರಿತ್ರಿಕ ಮತ್ತು ಐತಿಹಾಸಿಕ ಈ ಭಾಷಣದ ಬಗ್ಗೆ ಮತ್ತು ತಮ್ಮ ಸೂತ್ರಗಳ ಬಗ್ಗೆ ಇಲ್ಲಿರುವಂತಹ ಎಲ್ಲಾ ಶಾಸಕರುಗಳೂ ಕೂಡ ತಮ್ಮ ಅನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಬೇಕು. ಇದು ಒಂದು ಚಾರಿತ್ರಿಕವಾದ ಘಟನೆಯಾಗಿದೆ. ಇಲ್ಲಿ ದಿವಸದ ಪ್ರಶ್ನೆ ಇಲ್ಲ. ಉತ್ತರವನ್ನು ಬೇಕಾದರೆ ನಾಡಿದ್ದು ಕೊಡಲಿ. ದಯವಿಟ್ಟು ಎಲ್ಲರಿಗೂ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಇದರ ಬಗ್ಗೆ ನನ್ನದು ಏನೂ ಇಲ್ಲ. ಈ ಸಭೆ ನಿರ್ಧಾರ ಮಾಡಿದರೆ ಹಾಗೆಯೇ ಆಗಬಹುದು. ನಾನು ಆಗಲೇ ಹೇಳಿದ್ದೇನೆ. ಮಾನ್ಯ ಸಭಾನಾಯಕರು ಹಾಗೂ ವಿರೋಧಪಕ್ಷದ ನಾಯಕರು ನನಗೆ ಇದರ ಬಗ್ಗೆ ಸೂಚನೆಯನ್ನು ಕೊಡಬೇಕು. ಅದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಇಲ್ಲದೇ ಹೋದರೆ 9 ಗಂಟೆ 10 ನಿಮಿಷಗಳ ಕಾಲ ಸದನ ನಡೆಸಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾಡಿ, ಇನ್ನೂ ಒಂದು ದಿವಸ ಮಾಡಿ.

ಅಧ್ಯಕ್ಷರು : ಈ ತರಹ ಆದರೆ ವೆರಿ ಡಿಫಿಕಲ್ಟ್, ಸಭೆಗೆ ಎಲ್ಲರೂ ಕೂಡ ಸಹಕಾರವನ್ನು ಕೊಡಬೇಕು. ಇಲ್ಲದೇ ಹೋದರೆ ಕಷ್ಟವಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಎಲ್ಲಾ ಸದಸ್ಯರುಗಳಲ್ಲಿ ನಾನು ಅಧ್ಯಕ್ಷರು ಮುಖಾಂತರ ಮನವಿ ಮಾಡತಕ್ಕಂತಹದ್ದು, ಏನೆಂದರೆ ಗೌರವಾನ್ವಿತ ರಾಷ್ಟ್ರಪತಿಗಳು ಎರಡೂ ಸದನಗಳ ಉದ್ದೇಶಿಸಿ ಬಗ್ಗೆ ಮಾತನಾಡಿರುವಂತಹ ಅವರ ಅಭಿಪ್ರಾಯಗಳಲ್ಲಿ ಯಾವ ರೀತಿಯಾಗಿ ಈ ರಾಜ್ಯದ ಅಭಿವೃದ್ಧಿಗೆ ಮುನ್ನಡೆಯನ್ನು ತರಬೇಕೆಂಬುದರ ಬಗ್ಗೆ ಏನು ಹೇಳಿದ್ದಾರೆ, ಈ ವಿಷಯದಲ್ಲಿ ಎಲ್ಲಾ ಸದಸ್ಯರ ಒಂದು ಉತ್ಸಾಹ ಏನು ಇದೆ, ಅದರ ಬಗ್ಗೆ ನಾನು ಸದಸ್ಯರಲ್ಲಿ ಮನವಿಯನ್ನು ಮಾಡುತ್ತೇನೆ, ಬಜೆಟ್‌ನ ಅಧಿವೇಶನ ಇವತ್ತು ಏನು ನಡೆಯುತ್ತಿದೆ, ಬಜೆಟ್‌ನ್ನು ಮಂಡನೆ ಮಾಡಿದ ನಂತರ, ಆ ಬಜೆಟ್‌ನಲ್ಲಿ ಸೂಚನೆ ಮಾಡತಕ್ಕಂತಹ ಸಂದರ್ಭದಲ್ಲಿ ಇದರ ಬಗ್ಗೆಯೂ ಕೂಡ ತಾವು ಗಮನವನ್ನು ಸೆಳೆಯುವುದಕ್ಕೆ ಅವಕಾಶವಿದೆ. ಇವತ್ತು ಎರಡೂ ಬದಿಯ ಸದಸ್ಯರಲ್ಲಿ ನಾನು ಮನವಿಯನ್ನು ಮಾಡುತ್ತೇನೆ, ಈಗಾಗಲೇ ಸಾಕಷ್ಟು ಚರ್ಚೆಯಾಗಿರುವುದರಿಂದ ತಾವು ಅನುಮತಿಯನ್ನು ಕೊಟ್ಟರೆ ನಾನು ಈ ಎರಡು ದಿವಸಗಳಲ್ಲಿ ಆಗಿರುವಂತಹ ಚರ್ಚೆಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ : ನಾನು ಎರಡು ನಿಮಿಷಗಳ ಕಾಲ ಅವಕಾಶವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಈಗ ಫ್ಲೋರ್ ಲೀಡರ್.

ಅಧ್ಯಕ್ಷರು : ಮಾತನಾಡುವುದಕ್ಕೆ ಯಾರ್ಯಾರಿಗೆ ಅವಕಾಶವನ್ನು ಕೊಟ್ಟಿಲ್ಲ, ಅವರಿಗೆ ಬಜೆಟ್ ಅಧಿವೇಶನದಲ್ಲಿ ಅವಕಾಶವನ್ನು ಕೊಡಲಾಗುತ್ತದೆ. ಯಾರ್ಯಾರು ಮಾತನಾಡುವ ಬಗ್ಗೆ ಹೆಸರುಗಳನ್ನು ಕೊಟ್ಟಿದ್ದಾರೆ, ಅವರಿಗೆ ಅವಕಾಶವನ್ನು ಕೊಡುವುದಕ್ಕಾಗಲಿಲ್ಲ, ಇದರ ಬಗ್ಗೆ ಎಲ್ಲರೂ ದಯಮಾಡಿ ಸಹಕರಿಸಬೇಕು. ಬಜೆಟ್ ಅಧಿವೇಶನದಲ್ಲಿ ಅವರಿಗೆ ಅವಕಾಶವನ್ನು ಮಾಡಿಕೊಡುತ್ತೇನೆ

(ಗೊಂದಲ)

ಶ್ರೀ ಎ. ಕೃಷ್ಣಪ್ಪ : ಗೌರವಾನ್ವಿತ ರಾಷ್ಟ್ರಪತಿಗಳು, ನಮ್ಮ ಕರ್ನಾಟಕ ರಾಜ್ಯ...

ಶ್ರೀ ಹೆಚ್. ಆಂಜನೇಯ : ಕೊನೆಯ ಜಾಗದಲ್ಲಿರುವಂತಹ ನಮ್ಮನ್ನೂ ಸಹ ಗಮನಿಸಿ. ಬರೀ ಮುಂದಿನ ಬೆಂಚಿನಲ್ಲಿರುವುದನ್ನು ಮಾತ್ರ ಗಮನಿಸಬೇಡಿ.

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಮಾನ್ಯ ರಾಷ್ಟ್ರಪತಿಗಳು ಬಹಳ ಅಭಿಮಾನದಿಂದ ಕೊಟ್ಟಂತಹ ಈ ಹನ್ನೊಂದು ಸೂತ್ರಗಳು ಇದನ್ನು ಸ್ವಾಗತ ಮಾಡುವಂತಹದ್ದು. ಮಾನ್ಯ ಸದಸ್ಯರು ಈ ಮನೆಯಲ್ಲಿ ಬಹಳ ಗಂಟೆಗಳ ಕಾಲ ಅದರ ಬಗ್ಗೆ ಮಾತನಾಡಿದ್ದಾರೆ. ನಾನು ತಮ್ಮ ಗಮನಕ್ಕೆ ತರುವಂತಹ ವಿಚಾರಗಳೇನೆಂದರೆ, ಈ ಎಲ್ಲಾ ಸೂತ್ರಗಳನ್ನು ನಾವು ಸುಸೂತ್ರವಾಗಿ ಜಾರಿಗೆ ಮಾಡಬೇಕಾದರೆ ಬಹುಶಃ ಮೂಲಭೂತವಾಗಿ ಕ್ರಮ ತೆಗೆದುಕೊಳ್ಳುವಂತಹ ಕೆಲವು ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ನಿಮ್ಮ ಮುಖಾಂತರ ಸೆಳೆಯುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅದು ಏನೆಂದರೆ, ಇವತ್ತು ಗ್ರಾಮೀಣ ಪ್ರದೇಶದಿಂದ ಬರುವಂತಹ ಮಕ್ಕಳು ಮತ್ತು ಬೆಳೆದಂತಹ ಪಟ್ಟಣಗಳಲ್ಲಿ ಇರುವಂತಹ ಮಕ್ಕಳ ವಿಚಾರದಲ್ಲಿ ಮೂಲಭೂತ ಸೌಕರ್ಯಗಳಿಗೆ ವಂಚನೆಯಾದ ಕಾರಣ ಶಿಕ್ಷಣ ಕ್ಷೇತ್ರದಲ್ಲಿ ಗ್ರಾಮೀಣ ಪ್ರದೇಶದಿಂದ ಬಂದಿರುವಂತಹ ಮಕ್ಕಳು ಇಂಜಿನಿಯರ್ ಆಗಲಿ, ಡಾಕ್ಟರ್ ಆಗಲಿ, ಡೆಂಟಿಸ್ಟ್ ಆಗಲಿ ಯಾವುದೇ ಪ್ರೊಫೆಷನಲ್ ಕೋರ್ಸಿಗೆ ಹೋಗಬೇಕಾದರೆ ಒಂದು ದೊಡ್ಡ ಅನ್ಯಾಯದ ವಿಚಾರವನ್ನು ನಾನು ಈ ರಾಜ್ಯದ ಆಡಳಿತದಲ್ಲಿ ಕಂಡಿದ್ದೇವೆ. ಅದು ಏನೆಂದರೆ, ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಬೆಂಗಳೂರು ಮಹಾನಗರ, ಮತ್ತು ಮಂಗಳೂರು, ಬೆಳಗಾಂ, ಮೈಸೂರು ಇಂತಹ ಪ್ರದೇಶದಲ್ಲಿ ಓದುವಂತಹ ಮಕ್ಕಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳು ಇವೆ. ಲಾಬರೇಟರಿಗಳು ಇವೆ, ಲೈಬ್ರರಿ ಇದೆ, ಕಂಪ್ಯೂಟರ್ ಇದೆ, ಮಾಸ್ಟರ್ ಹಾಗೂ ಪ್ರೊಫೆಸರ್‌ಗಳು ಇದ್ದಾರೆ. ಒಳ್ಳೆಯ ವಾತಾವರಣ ಹಾಗೂ ಒಳ್ಳೆಯ ಕಟ್ಟಡಗಳು ಇವೆ. ಇಂತಹ ವಾತಾವರಣದಲ್ಲಿ ಓದುವಂತಹ ಮಕ್ಕಳು ಮತ್ತು ಹಳ್ಳಿಗಾಡಿನಿಂದ ಬಂದಂತಹ ಮಕ್ಕಳು ಇಬ್ಬರಿಗೂ ನಾವು ಕೊಡುವಂತಹ ಕೊಶ್ಚಿನ್ ಪೇಪರ್ ಒಂದೇ. ಅದನ್ನು ಕೊಟ್ಟಂತಹ ಸಂದರ್ಭದಲ್ಲಿ ಒಟ್ಟಾರೆ ಸಿಇಟಿನಲ್ಲಿ ಈ ಪ್ರೊಫೇಷನಲ್ ಕೋರ್ಸಿಗೆ ಸಿಗುವಂತಹದ್ದು, ಆ ಭಾಗದ ಮಕ್ಕಳಿಗೆ 17 ರಿಂದ 23. ಇದು ಅಂಕಿಸಂಖ್ಯೆಗಳು ರಾಜ್ಯ ಸರ್ಕಾರ ನಡೆದು ಬಂದಂತಹ ಐದಾರು ವರ್ಷಗಳಲ್ಲಿ ನಾವು ಕಂಡಿದ್ದೇವೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ಈ ಗ್ರಾಮೀಣ ಪ್ರದೇಶದಲ್ಲಿರುವಂತಹ ಎಸ್‌ಸಿ:ಎಸ್‌ಟಿ ಮಕ್ಕಳ ಹಾಸ್ಟೆಲ್‌ಗಳು ಇರಬಹುದು, ಬ್ಲಾಕ್‌ವರ್ಡ್ ಕ್ಲಾಸ್ ಮಕ್ಕಳ ಹಾಸ್ಟೆಲ್‌ಗಳು ಇರಬಹುದು, ಅದೇ ರೀತಿಯಾಗಿ ಹೈಸ್ಕೂಲ್ ಮತ್ತು ಜ್ಯೂನಿಯರ್ ಕಾಲೇಜುಗಳು ಇರಬಹುದು, ಇದಕ್ಕೆ ಪ್ರಥಮವಾಗಿ ನೀವು ಮೂಲಭೂತ ಸೌಕರ್ಯಗಳನ್ನು ಕೊಡುವಂತಹ ಒಂದು ಅಗತ್ಯವಾದ ಕ್ರಮವನ್ನು ನಾಳೆ ಸೋಮವಾರ ಮಂಡನೆ ಮಾಡುವಂತಹ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಕಡೆಗೆ ಗಮನಹರಿಸಿದಾಗ ಮಾತ್ರ ಮಾನ್ಯ ರಾಷ್ಟ್ರಪತಿಗಳು ಈ 11 ಐಟ್ಯೆಂ ಏನು ಕೊಟ್ಟಿದ್ದಾರೆ. ಅದರಿಂದ ಉಜ್ವಲವಾದ ಭವಿಷ್ಯ ನಾಡಿನ ಮಕ್ಕಳಿಗೆ ಸಿಗಲು ಸಾಧ್ಯವಾಗುತ್ತದೆ. ಮಾನ್ಯ ರಾಷ್ಟ್ರಪತಿಗಳು ಏನು ಹನ್ನೊಂದು ಐಟಂಗಳನ್ನು ರಾಜ್ಯಕ್ಕೆ ಕೊಟ್ಟಿದ್ದಾರೆ. ಇದು ಭವಿಷ್ಯದಲ್ಲಿ ನಾಡಿನ ಮಕ್ಕಳಿಗೆ ಉಜ್ವಲವಾದ ಭವಿಷ್ಯ ಸಿಕ್ಕಬೇಕಾದರೆ ಮೂಲಭೂತವಾಗಿ ಈ ಸೌಕರ್ಯಗಳನ್ನು ಸೃಷ್ಟಿ ಮಾಡುವಂತಹ

ಕೆಲಸವಾಗಬೇಕು. ಆದರೆ ನೀವು ಸರ್ಕಾರದಲ್ಲಿದ್ದಾಗ ಏನು ಮಾಡುತ್ತಿದ್ದೀರಿ ಎಂದು ಆ ಕಡೆಯ ಸದಸ್ಯರು ಕೇಳಬಹುದು. ಆ ದಿಕ್ಕಿನಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರ ಕಾಂಗ್ರೆಸ್ ಸರ್ಕಾರವಿದ್ದಾಗ ಹಲವಾರು ವಿಚಾರಗಳನ್ನು ಕೈಗೆತ್ತಿಕೊಂಡಿದ್ದೆವು. ಆದರೆ ಇವತ್ತು ಅದನ್ನು ಕೈಬಿಟ್ಟರೆ ಈ ಒಂದು ರಾಜ್ಯದ ಹಿತದೃಷ್ಟಿಯಲ್ಲಿ ರಾಷ್ಟ್ರಪತಿಗಳು ಏನು ಹೇಳಿದ್ದಾರೆ ಅವೆಲ್ಲವನ್ನು ನಾವು ಅಚೀವ್ ಮಾಡಲಿಕ್ಕೆ ಕಷ್ಟವಾಗಬಹುದು. ಅದು ಕೆಲವರಿಗೇ ಮಾತ್ರ ದಕ್ಕುತ್ತದೆ. ಮತ್ತು ಗ್ರಾಮೀಣ ಮಕ್ಕಳಿಗೆ ಅನ್ಯಾಯವಾಗಬಹುದು. ಅದಕ್ಕಾಗಿ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ ನಾಳೆ ಸೋಮವಾರ ಘೋಷಣೆ ಮಾಡುವ ಬಜೆಟ್ಟಿನಲ್ಲಿ ಇವೆಲ್ಲವನ್ನೂ ನಾವು ಅಚೀವ್ ಮಾಡಬೇಕಾದರೆ ನಮ್ಮ ಮಕ್ಕಳ ಪರಿಣಿತಿಯನ್ನು ನಾವು ಅಭಿವೃದ್ಧಿ ಮಾಡಬೇಕಾಗಿದೆ. ಗ್ರಾಮೀಣ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳು ಸಿಗಬೇಕು. ನಾಲ್ಕು ಲಕ್ಷ ಅರವತ್ತೈದು ಸಾವಿರಕ್ಕೂ ಹೆಚ್ಚು ಮಕ್ಕಳು ಈ ಬ್ಯಾಕ್‌ವರ್ಡ್ ಹಾಗು ಎಸ್.ಸಿ/ ಎಸ್.ಟಿ. ಮಕ್ಕಳು ಈ ಸೋಷಿಯಲ್ ವೆಲ್‌ಫೇರ್ ಇಲಾಖೆಯಡಿ ಓದುತ್ತಿದ್ದಾರೆ. ಅದಕ್ಕಾಗಿ ಇದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಎರಡನೆಯದು ಹಾರ್ಟಿಕಲ್ಚರ್ ವಿಚಾರದಲ್ಲಿ ನಮ್ಮ ಮಾನ್ಯ ರಾಷ್ಟ್ರಪತಿಗಳು ಬಹಳ ವಿಶೇಷವಾಗಿ ಕಳಕಳಿಯಾಗಿ ಕರ್ನಾಟಕಕ್ಕೆ ಹೇಳಿದ್ದಾರೆ. ನನಗೆ ಈಗ ನೆನಪಾಗುತ್ತಿರುವ ಒಂದು ವಿಚಾರವನ್ನು ನಿಮ್ಮ ಜೊತೆಗೆ ಹಂಚಿಕೊಳ್ಳಬೇಕೆಂದು ಇಷ್ಟವಾಗುತ್ತದೆ. 1992–93 ರಲ್ಲಿ ಕೋಲ್ಡ್ ಸ್ಟೋರೇಜಸ್‌ನ ಅನುಕೂಲಗಳು ನಮ್ಮ ರಾಜ್ಯದಲ್ಲಿ ಇಲ್ಲದೇನೇ ನಾವು ಪಕ್ಕದ ರಾಜ್ಯವಾದ ತಮಿಳುನಾಡಿನ ಆಸರೆ ಪಡೆದು ನಮ್ಮ ಆಲೂಗೆಡ್ಡೆ ಮಾಲುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಇಟ್ಟಾಗ ಪವರ್ ಸಪ್ಲೈ ಪ್ರಾಪರ್ ಆಗಿಲ್ಲದೆ ಸುಮಾರು ನಾಲ್ಕು ಕೋಟಿ ರೂಪಾಯಿಗಳು ಬೆಲೆ ಬಾಳುವ ಆಲೂಗೆಡ್ಡೆ ಹಾಗೆಯೇ ಕರಗಿಹೋಯಿತು. ಅಂಥ ಒಂದು ಕಷ್ಟದ ಪರಿಸ್ಥಿತಿಯಲ್ಲಿ ಆ ರೈತರಿಗೆ ಹಿಂದಿನ ಸರ್ಕಾರ 50 ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ನೀಡಿತು, ಹಾಗಿದ್ದ ಮೇಲೆ ಸೋಮವಾರ ಮಂಡನೆ ಮಾಡುವಂತಹ ಬಜೆಟ್ಟಿನಲ್ಲಿ ತೋಟಗಾರಿಕೆ ಇಲಾಖೆಯ ವಿಚಾರದಲ್ಲಿ ಮಾನ್ಯ ರಾಷ್ಟ್ರಪತಿಗಳು ಏನು ಇಲ್ಲಿ ಹೇಳಿದ್ದಾರೆ, ಅವರು ನೀಡಿರುವ ಮಾರ್ಗದರ್ಶನವನ್ನು ನಾವು ಕಾರ್ಯರೂಪಕ್ಕೆ ತರಬೇಕಾದರೆ ತೋಟಗಾರಿಕೆ ಇಲಾಖೆಗೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು ತರುವಂಥ ಒಂದು ಪ್ರಯತ್ನವನ್ನು ನಾವು ಮಾಡಿದಾಗ ಮಾತ್ರ ಅದು ಸಫಲವಾಗುತ್ತದೆ. ಈ ದಿಕ್ಕಿನಲ್ಲಿ ನಮ್ಮ ಸರ್ಕಾರವಿದ್ದಾಗ ಸುಮಾರು 505 ಕೋಟಿ ರೂಪಾಯಿಗಳನ್ನು ಎನ್.ಡಿ.ಡಿ.ಬಿ.ಐ. ಕಡೆಯಿಂದ ನಾವು ಸಾಲದ ರೂಪದಲ್ಲಿ ಪಡೆದು ಸಫಲ್ ಯೋಜನೆಗಳನ್ನು ಹೊಸಕೋಟೆ ಪ್ರಾಂತ್ಯದಲ್ಲಿ ನಾವು ಪ್ರಾರಂಭ ಮಾಡಿದೆವು. ಅಂದರೆ ಮಾರಾಟ ಮಾಡಲಿಕ್ಕೆ ಸ್ಟೋರೇಜ್ ಮಾಡಲಿಕ್ಕೆ, ಸೆಗ್ರಿಗೇಷನ್ ಮಾಡಲಿಕ್ಕೆ ಜೊತೆಜೊತೆಯಲ್ಲಿ ಅದನ್ನು ಎಕ್ಸ್‌ಪೋರ್ಟ್ ಮಾಡಲಿಕ್ಕೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು ನಾವು ಅಲ್ಲಿ ಸೃಷ್ಟಿ ಮಾಡಿದೆವು. ಆದರೆ ಇಡೀ ರಾಜ್ಯಕ್ಕೆ ಒದಗಿಸದೆ ಒಂದು ಜಾಗದಲ್ಲಿ ಮಾತ್ರ ಮಾಡಿದರೆ ಈಗ ಮಾನ್ಯ ರಾಷ್ಟ್ರಪತಿಗಳು ಏನು ಮಾರ್ಗಸೂಚಿಯನ್ನು ಕೊಟ್ಟಿದ್ದಾರೆ, ಅದನ್ನು ಅಚೀವ್ ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಮೂಲಭೂತವಾಗಿ ಈ ಕೋಲ್ಡ್ ಸ್ಟೋರೇಜಸ್‌ನ್ನು ನಾವೇ ಮಾಡಲಿಕ್ಕೆ ಸಾಧ್ಯವಾಗದಿದ್ದರೆ ಸರ್ಕಾರ ಪವರ್ ವಿಚಾರದಲ್ಲಿ ನಾವು ಒಂದು ಕನ್ಸೆಷನ್ ಅನ್ನು ಅವರಿಗೆ ಕೊಡುತ್ತೇವೆಂದು ಸರ್ಕಾರ ನಾಡಿನ ರೈತರಿಗೆ ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಈ ರೀತಿಯ ಸಂದರ್ಭದಲ್ಲಿ ಎನರ್ಜಿಯ ಬಗ್ಗೆ

ಮಾನ್ಯ ರಾಷ್ಟ್ರಪತಿಗಳು ಎರಡನೆಯ ಐಟಂ ಅನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಇವತ್ತು ಹಲವಾರು ಹೊಸ ಹೊಸ ರೀತಿಯ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. ಆದರೆ ನಾವು ಸರ್ಕಾರದಲ್ಲಿದ್ದಾಗ ಸಕ್ಕರೆ ಕಾರ್ಖಾನೆಗಳಿಗೆ ಪವರ್ ಪ್ರೊಡಕ್ಷನ್‌ಗೆ ಏನೊಂದು ಅವಕಾಶಗಳನ್ನು ಕೊಟ್ಟಿದ್ದೆವು. ಶುಗರ್ ಡೆವಲಪ್‌ಮೆಂಟ್ ಫಂಡ್‌ನಿಂದ ಅವರಿಗೆ ಲೋನ್‌ಗಳನ್ನು ಕೊಡಲಿಕ್ಕೆ ಭಾರತ ಸರ್ಕಾರದ ಮೇಲೆ ಏನು ಒತ್ತಡವನ್ನು ಹೇರಿದ್ದೆವು, ಅದೇರೀತಿ ಇವತ್ತು ಕರ್ನಾಟಕ ರಾಜ್ಯದಲ್ಲಿರುವ ಒಂದೆರಡು ಖಾಸಗಿ ಸಕ್ಕರೆಕಾರ್ಖಾನೆಗಳನ್ನು ಬಿಟ್ಟರೆ ಉಳಿದವೆಲ್ಲಾ ದಿವಾಳಿಯಾಗಿವೆ. ಆ ದಿವಾಳಿತನದಿಂದ ಅವರನ್ನು ಹೊರಗೆ ತಂದು ಕಾಲಕಾಲಕ್ಕೆ ರೈತರಿಗೆ ನಾವು ಬಟವಾಡೆ ಮಾಡಿ ಅವರನ್ನು ರಕ್ಷಿಸಬೇಕಾದರೆ ಇವತ್ತು ಅವರಿಗೆ ನಾವು ಆದಷ್ಟು ಪ್ರೋತ್ಸಾಹ ಕೊಡಬೇಕಾಗಿದೆ. ಪವರ್ ಪ್ರೊಡಕ್ಷನ್ ಅನ್ನು ಕಡ್ಡಾಯ ಮಾಡಿ ಅವರಿಗೆ ಬೇಕಾದಂಥ ಆರ್ಥಿಕ ಸಹಾಯಗಳನ್ನು ಜೊತೆಜೊತೆಯಲ್ಲಿ ಕೊಟ್ಟು ಆ ಒಂದು ಕರೆಂಟ್ ತಯಾರು ಮಾಡಿದ್ದನ್ನು ಕೊಂಡುಕೊಳ್ಳುವಂತಹ ಸಂದರ್ಭದಲ್ಲಿ ನ್ಯಾಯಸಮ್ಮತವಾದಂಥ ಬೆಲೆಯನ್ನು ಕಟ್ಟಿ ಅದನ್ನು ಕೊಂಡುಕೊಳ್ಳುವಂಥ ಸಂದರ್ಭದಲ್ಲಿ ನ್ಯಾಯಸಮ್ಮತವಾದಂಥ ಬೆಲೆಯನ್ನು ಕಟ್ಟಿ ಅದನ್ನು ಕೊಂಡುಕೊಳ್ಳುವಂಥ ಏರ್ಪಾಟನ್ನು ಮಾಡಿದರೆ ಬಹುಶಃ ಈ ಎನರ್ಜಿ ಸೆಕ್ಟರ್‌ನಲ್ಲಿ ಮಾನ್ಯ ರಾಷ್ಟ್ರಾಧ್ಯಕ್ಷರು ಏನು ಮಾರ್ಗದರ್ಶನ ಮಾಡಿದ್ದಾರೆ ಅದನ್ನು ಕೂಡ ಅಚೀವ್ ಮಾಡಲು ಸಾಧ್ಯವಾಗುತ್ತದೆ. ಅಧ್ಯಕ್ಷರೇ, ಈ ಹನ್ನೊಂದು ಕಾರ್ಯಕ್ರಮಗಳಲ್ಲಿ ಕೆಲವೊಂದು ವಿಚಾರ ಸಂಬಂಧಪಡದಿದ್ದರೂ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಕರ್ನಾಟಕ ರಾಜ್ಯಸರ್ಕಾರ ಹಲವಾರು ಹಂತದಲ್ಲಿ 1952ರಿಂದ ಈ ತಹಲ್‌ವರೆಗೂ ಪಬ್ಲಿಕ್ ಸೆಕ್ಟಾರ್ಸ್ ಅನ್ನು ಸ್ಥಾಪನೆ ಮಾಡುವುದಕ್ಕೆ ಈ ರಾಜ್ಯದಲ್ಲಿ ನಮ್ಮದೇ ಆದ ಭೂಮಿಯನ್ನು ರೈತರ ಕಡೆಯಿಂದ 2,000, 3,000 ಹಾಗೂ 1,000 ರೂಪಾಯಿಗಳ ಬೆಲೆಯಲ್ಲಿಯೂ ಕೂಡ ಲ್ಯಾಂಡ್ ಅಕ್ವಿಸಿಷನ್ ಮಾಡಿಸಿಕೊಟ್ಟಿದ್ದೇವೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಪಬ್ಲಿಕ್ ಸೆಕ್ಟಾರ್ಸ್ ಅನ್ನು ನೆಹರೂರವರು ಟೆಂಪಲ್ಸ್ ಆಫ್ ಇಂಡಿಯಾ ಎಂದು ಹೇಳಿದರು, ಅದು ಮಾಡರ್ನ್ ಟೆಂಪಲ್ಸ್ ಎಂದು ಹೇಳಿದರು ಅದು ಸತ್ಯದ ಸಂಗತಿ, ಎಷ್ಟು ಕೋಟಿ ಜನ ಇವತ್ತು ಅನ್ನ ತಿಂದು ಆರ್ಥಿಕ ಸಂಪತ್ತನ್ನು ಪಡೆದುಕೊಂಡು ತಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ, ಮರಿಮಕ್ಕಳಿಗೆ ಇವತ್ತೇನು ಆರ್ಥಿಕ ಸಹಾಯದ ಜೊತೆಗೆ ಶಿಕ್ಷಣವನ್ನು ನೀಡಲಿಕ್ಕೆ ಸಾಧ್ಯತೆಯಾಯಿತು ಅಂತಹ ಸಮಸ್ಯೆಗಳ ಬಗ್ಗೆ ನಿನ್ನೆ ಯಾರೋ ಒಬ್ಬರು ಲಘುವಾಗಿ ಮಾತನಾಡಿದರು. ನೆಹರು ಅವರ ಬಗ್ಗೆ ಪಾಪ, ನೆಹರೂ ಅವರ ಬಗ್ಗೆ ಅವರಿಗೇನು ಗೊತ್ತಿದೆ? ಅಂಥ ಕೋಟಿ ಕೋಟಿ ಜನಕ್ಕೆ ಅನ್ನಕ್ಕೆ ದಾರಿ ಮಾಡಿಕೊಟ್ಟಂಥವರು ಪಂಡಿತ್ ಜವಾಹರಲಾಲ್ ನೆಹರು ಅವರು. ಇವತ್ತು ಆ ಒಂದು ಪರಿಸ್ಥಿತಿಯಲ್ಲಿ ಗ್ರೀನ್ ರೆವಲ್ಯೂಷನ್ ಜೊತೆಗೆ ಇಂಡಸ್ಟ್ರಿಯಲೈಸೇಷನ್ ಬಿಲ್ಡ್ ಮಾಡಬೇಕು, ಆಗಮಾತ್ರ ಎಕಾನಮಿಕ್ ಸ್ಟ್ರೆಂಗ್ತ್ ನಿರ್ಮಾಣವಾಗಿ ಷೆಡ್ಯೂಲ್ ಕ್ಲಾಸ್ಟ್, ಷೆಡ್ಯೂಲ್ ಟ್ರೈಬ್, ಬ್ಯಾಕ್‌ವರ್ಡ್ ಕ್ಲಾಸ್ ಇಂತಹ ಜನಗಳಿಗೆ ಉದ್ಯೋಗವನ್ನು ಕೊಡಲಿಕ್ಕಾಗುತ್ತದೆ. ಆಗ ಇಂಥ ಸೋಷಿಯಲ್ ಜಸ್ಟೀಸ್ ಅನ್ನು ಎಕ್ಸ್‌ಟೆಂಡ್ ಮಾಡಲಿಕ್ಕಾಗುತ್ತದೆಂಬ ಅನಿಸಿಕೆಯನ್ನು ಇಟ್ಟುಕೊಂಡು ಉತ್ಪಾದನೆಗಳಿಗಾಗಿ ಪಬ್ಲಿಕ್ ಸೆಕ್ಟಾರ್ಸ್‌ಗಳನ್ನು ಏನು ಈ ದೇಶದಲ್ಲಿ ತೆರೆದರು ಅದು ಈ ದೇಶದಲ್ಲಿ ಮಹತ್ತರವಾದ ಪರಿಣಾಮವನ್ನು ಬೀರಿದೆ. ಹಾಗಾಗಿ ಇವತ್ತು ಬೆಂಗಳೂರಿನ ಆಜುಬಾಜು ಇರುವಂತಹ ಐ.ಟಿ.ಐ. ಎಚ್.ಎಂ.ಟಿ. ಬೆಮೆಲ್, ಬಿ.ಇ.ಎಲ್. ಜಿ.ಟಿ.ಆರ್.

ಇರಬಹುದು. ಮತ್ತು ಕಮ್ಯುನಿಕೇಷನ್ ಸೆಕ್ಟಾರ್ಸ್‌ಗಳನ್ನು ಇವತ್ತೇನು ರೆವಲ್ಯೂಷನ್ ಮಾಡಿದ್ದೇವೆ, ಐ.ಎಸ್.ಆರ್.ಓ. ಸಂಸ್ಥೆಗಳಿರಬಹುದು. ಇವೆಲ್ಲವನ್ನೂ ಸೃಷ್ಟಿ ಮಾಡಿದಂಥ ಕಾಂಗ್ರೆಸ್ಸಿನ ವಿಚಾರದಲ್ಲಿ ಮೊನ್ನೆ ಕೆಲವು ಸದಸ್ಯರು ಲಘುವಾಗಿ ಮಾತನಾಡಿದರು, ಅವರವರ ವಿವೇಚನೆಗೆ ಅದು ಬಿಟ್ಟಿದ್ದು, ನಾನು ಅದನ್ನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ, ಕೆಲವರ ಕಣ್ಣಿಗೆ ಅಭಿವೃದ್ಧಿ ಕಾಣುವುದಿಲ್ಲ, ಕೆಲವರಿಗೆ ಒಳ್ಳೆಯ ಮಾತುಗಳು ಕಿವಿಗಳಿಗೆ ಕೇಳುವುದಿಲ್ಲ, ಅದು, ದುರಾದೃಷ್ಟದ ಸಂಕೇತ. ಮಾನ್ಯ ಸಭಾಧ್ಯಕ್ಷರೇ, ಇವತ್ತು ಸಮಸ್ಯೆ ನಮ್ಮ ಮುಂದೆ ಏನಿದೆಯೆಂದರೆ ಯಾವ ಒಂದು ಮೂಲಭೂತ ಕಾರಣಕ್ಕಾಗಿ ಈ ರಾಜ್ಯಸರ್ಕಾರ ಜಮೀನುಗಳನ್ನು ಈ ಕಾರ್ಖಾನೆಗಳಿಗೆ ಕೊಟ್ಟರು, ಆ ಜಮೀನುಗಳನ್ನು ಇವತ್ತು ಖಾಸಗಿ ದೊರೆಗಳಿಗೆ ಮಾರಾಟ ಮಾಡುವ ಹುನ್ನಾರವನ್ನು, ಪ್ರಯತ್ನವನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಎಚ್.ಎಂ.ಟಿ.ಗೆ ಐ.ಟಿ.ಐ.ಗೆ ಬೆಮಲ್‌ಗೆ, ಬಿ.ಹೆಚ್.ಇ.ಎಲ್.ಗೆ ನಾವೇ ಜಮೀನು ಕೊಟ್ಟಿದ್ದೆವು. ಆದರೆ ಕಾರ್ಖಾನೆಗಳಿಗೆ ಸ್ಥಾಪನೆ ಮಾಡಿ ರಾಜ್ಯದಲ್ಲಿ ಆರ್ಥಿಕ ವಿಚಾರಗಳು ಬಲವರ್ಧನೆಯಾಗಲಿ, ಜನರಿಗೆ ಉದ್ಯೋಗ ಸಿಗಲಿ ಎಂಬ ಮುಖ್ಯವಾದ ವಿಚಾರವನ್ನಿಟ್ಟುಕೊಂಡು ರಾಜ್ಯಸರ್ಕಾರ ಆವತ್ತಿನ ಕಾಲಕ್ಕೆ ಕೊಟ್ಟಿತ್ತು. ಆದರೆ ಅದನ್ನು ಇವತ್ತು ಖಾಸಗಿಯವರಿಗೆ ಮಾರಾಟ ಮಾಡಲಿಕ್ಕೆ ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ಪ್ರಾವಿಷನ್ ಇದೆಯೇ? ಹಾಗಿದ್ದರೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮುಖೇನ ಪ್ರಾರ್ಥನೆ ಮಾಡುತ್ತೇನೆ. ಅದನ್ನು ರಾಜ್ಯಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು. ರಾಜ್ಯಸರ್ಕಾರ can develop, ಅದು ನಮ್ಮ ರಾಜ್ಯಸರ್ಕಾರಕ್ಕೆ ಸೇರುವಂಥ ಹಲವಾರು ಇನ್‌ಸ್ಟಿಟ್ಯೂಷನ್ಸ್ ಇರಬಹುದು, ಮೆಡಿಕಲ್ ಸೆಕ್ಟರ್ಸ್ ಇರಬಹುದು, ಇಂಜಿನಿಯರಿಂಗ್ ಕಾಲೇಜುಗಳು, ಪ್ಯಾರಾ ಮೆಡಿಕಲ್ಸ್ ಸಂಸ್ಥೆಗಳಿರಬಹುದು ಅಥವಾ ಬೇರೆ ಬೇರೆ ಸಂಸ್ಥೆಗಳನ್ನು ಸ್ಥಾಪನೆ ಮಾಡಲಿಕ್ಕೆ ಇವತ್ತು ಬೆಂಗಳೂರಿನ ಆಜುಬಾಜು ಏನು ದುಬಾರಿಯಾಗಿದೆ. ಈ ದುಬಾರಿಯಾದ ಆಸ್ತಿಗಳನ್ನು ಮಾರಾಟ ಮಾಡಲಿಕ್ಕೆ ಈ ಪಬ್ಲಿಕ್ ಸೆಕ್ಟಾರ್ಸ್‌ಗಳು ಏನು ಮುಂದೆ ಹೋಗಿವೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತತ್‌ಕ್ಷಣಕ್ಕೆ ಆದೇಶ ಮಾಡಿ ಕಡಿವಾಣ ಹಾಕಿ, ಆ ಆಸ್ತಿ, ನಮ್ಮ ಬಡರೈತರ ಆಸ್ತಿ. ಅದು 600 ರಿಂದ 700 ರೂಪಾಯಿಗಳಿಗೆ ಲ್ಯಾಂಡ್ ಅಕ್ವಿಸಿಷನ್ ಆಗಿರುವಂಥಹದ್ದು, ಇವತ್ತು ಅದನ್ನು ಅವರು ಮಾರಾಟ ಮಾಡಿ ಕೋಟಿ ಕೋಟಿ ರೂಪಾಯಿಗಳಷ್ಟು ದುಡ್ಡುಮಾಡಿ ಪಬ್ಲಿಕ್ ಸೆಕ್ಟಾರ್ಸ್‌ಗಳನ್ನು ಮುಚ್ಚಿಕೊಂಡು ಹೋಗುವ ಪ್ರಯತ್ನಗಳೇನು ನಡೆಯುತ್ತಿವೆ ಅದಕ್ಕೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿ ನಮ್ಮ ಮಾನ್ಯ ರಾಷ್ಟ್ರಪತಿಗಳಾದ ಕಲಾಂ ಸಾಹೇಬರು ಏನು 11 ಸೂತ್ರಗಳನ್ನು ಕೊಟ್ಟಿದ್ದಾರೆ ಈ ದಿಕ್ಕಿಗೆ ಬೇಕಾದಂಥ ಬಜೆಟ್, ಮೂಲಭೂತ ಸೌಕರ್ಯಗಳಿಗೆ ಬೇಕಾದಂಥ ವಿಚಾರಗಳಿಗೆ ಆದ್ಯತೆ ಕೊಟ್ಟು ಜಾರಿ ಮಾಡುವುದರ ಮೂಲಕ ಇದನ್ನು ಅವರು ನಿಜವಾದಂಥ ಗೌರವವನ್ನು ರಾಷ್ಟ್ರಪ್ರಜೆಗೆ ತೋರಿಸುವಂತಹ ಕೆಲಸ ಸೋಮವಾರ ಮಂಡನೆ ಮಾಡುವಂಥ ಬಜೆಟ್‌ನಲ್ಲಿ ಅದರ ಹೈಲೈಟ್ಸ್ ಅನ್ನು ಹೊಸ ತರಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆಯನ್ನು ಮಾಡಿ ನಾನು ಕೊನೆಯಲ್ಲಿ ತಮ್ಮಲ್ಲಿ ಕೇಳಿಕೊಂಡಾಗ ತಾವು ದೊಡ್ಡ ಮನಸ್ಸು ಮಾಡಿ ಎರಡು ನಿಮಿಷ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ. ನಮಸ್ಕಾರ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನವೆಂಬರ್ 20ನೇ ತಾರೀಖು ರಾಜ್ಯದ ಎರಡೂ ಸದನಗಳ ಮಾನ್ಯ ಸದಸ್ಯರನ್ನು ಉದ್ದೇಶಿಸಿ ಸುವರ್ಣ ಕರ್ನಾಟಕದ ಹಿನ್ನೆಲೆಯೊಳಗೆ ಗೌರವಾನ್ವಿತ ರಾಷ್ಟ್ರಪತಿಗಳಿಗೆ ಆಹ್ವಾನವನ್ನು ಕೊಡುವುದರ ಮುಖಾಂತರ ತಾವು ಹಾಗೂ ಅಂದು ಮುಖ್ಯಮಂತ್ರಿಗಳಾಗಿದ್ದಂತಹ, ಹಿರಿಯರಾಗಿರತಕ್ಕಂಥ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದ ಮಂತ್ರಿಮಂಡಲ ತೀರ್ಮಾನ ಮಾಡಿ ಆ ಒಂದು ಕಾರ್ಯಕ್ರಮದ ಮುಖಾಂತರ ಈ 11 ಅಂಶಗಳ ಕಾರ್ಯಕ್ರಮಗಳನ್ನು ಈ ಸದನದ ಮುಖಾಂತರ ವ್ಯಕ್ತಪಡಿಸುವುದಕ್ಕೆ ಏನು ಮಾನ್ಯ ರಾಷ್ಟ್ರಪತಿಗಳು ಉಪಯೋಗ ಮಾಡಿಕೊಂಡರು, ಆ ಒಂದು ತೀರ್ಮಾನ ಮಾಡಿದಂತಹ ಸನ್ನಿವೇಶ ಏನಿದೆ ನಾನು ಈ ಸಂದರ್ಭದಲ್ಲಿ ತಮಗೂ ಹಾಗೂ ಹಿರಿಯರಾದ ಮಾನ್ಯ ಧರ್ಮಸಿಂಗ್‌ರವರ ಮಂತ್ರಿಮಂಡಲದ ಎಲ್ಲಾ ಸಚಿವ ಸಂಪುಟದ ಸದಸ್ಯರಿಗೂ ಅಭಿನಂದನೆಗಳನ್ನು ತಿಳಿಸಲಿಕ್ಕೆ ಬಯಸುತ್ತೇನೆ. ಕಳೆದ ಎರಡು ದಿವಸಗಳಿಂದ ನಿನ್ನೆ ಮತ್ತು ಇವತ್ತು ಇಲ್ಲಿಯವರೆಗೆ ಸದನದ ಎಲ್ಲಾ ಹಿರಿಯ ಸದಸ್ಯರುಗಳು ಹಾಗೂ ಹೊಸದಾಗಿ ಆಯ್ಕೆಯಾಗಿರತಕ್ಕಂಥ ಯುವಕ ಶಾಸಕ ಮಿತ್ರರು ಮಾನ್ಯ ರಾಷ್ಟ್ರಪತಿಗಳ ಈ ಹನ್ನೊಂದು ಅಂಶಗಳ ಬಗ್ಗೆ ಚರ್ಚೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ಹಿರಿಯ ಸದಸ್ಯರುಗಳು ಅದರಲ್ಲಿ ಪ್ರಮುಖವಾಗಿ ಮಾನ್ಯ ಮಾಧುಸ್ವಾಮಿಯವರು ಕೆಲವು ವಿಷಯಗಳನ್ನು ಏನು ಚರ್ಚೆ ಮಾಡಿದ್ದಾರೆ, ಮಾನ್ಯ ವಾಟಾಳ್ ನಾಗರಾಜ್‌ರವರು ರಾಜ್ಯದ ಏಕೀಕರಣದ ಸಂದರ್ಭದಲ್ಲಿ ಹೋರಾಟ ಮಾಡಿರತಕ್ಕಂಥ ಹಲವಾರು ಹಿರಿಯ ನಾಗರೀಕರ ಬಗ್ಗೆ ಹಾಗೂ ರಾಜ್ಯದ ಗಡಿ ಸಮಸ್ಯೆಗಳ ಬಗ್ಗೆ ಪ್ರಸ್ತಾವನೆಗಳು ಇಲ್ಲಿ ಬಂದಿಲ್ಲ ಅಂತ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದೇ ರೀತಿ ಮಾನ್ಯ ಸದಸ್ಯರಾದ ವೈಜನಾಥ ಪಾಟೀಲರು ಈಗ ಇಲ್ಲಿ ಇಲ್ಲ. ಹೊರಗಡೆ ಹೋಗಿದ್ದಾರೆ ಅವರು ಆವತ್ತು ಮಾನ್ಯ ರಾಷ್ಟ್ರಪತಿಗಳ ಭಾಷಣ ಪ್ರಾರಂಭವಾಗತಕ್ಕಂಥ ಸಂದರ್ಭದಲ್ಲಿ ಸಭೆಯಿಂದ ಸಭಾತ್ಯಾಗ ಏನು ಮಾಡಿದರು ಆದರೆ ಇವತ್ತು 379 ಆರ್ಟಿಕಲ್ ವಿಷಯದ ಬಗ್ಗೆ ಅದರಲ್ಲು ಹೈದ್ರಾಬಾದ್ ಕರ್ನಾಟಕದ ಆ ಭಾಗದ ಜನರಿಗೆ ಆಗಿರತಕ್ಕಂಥ ಕಾರ್ಯಕ್ರಮಗಳ ಅಭಿವೃದ್ಧಿ ದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳು ಆಗಿಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸುವುದಕ್ಕೆ ಇವತ್ತು ಏನು ಅವರು ಸಮಯವನ್ನು ಮೀಸಲಿಟ್ಟಿದ್ದರು, ಅದೇ ರೀತಿ ಹಲವಾರು ಸದಸ್ಯರುಗಳು ಹಲವಾರು ವಿಷಯಗಳ ಬಗ್ಗೆ ಇವತ್ತು ಏನು ಕೆಲವು ಹಿರಿಯ ಸದಸ್ಯರುಗಳು ರಾಷ್ಟ್ರಪತಿಗಳ ಈ ಕಾರ್ಯಕ್ರಮಗಳನ್ನು ನಿಜವಾಗಿಯೂ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಿದೆಯೇ ಎನ್ನುವ ಒಂದು ಅನುಮಾನಗಳು ಮತ್ತು ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ಕೆಲವು ಯುವಕ ಶಾಸಕ ಮಿತ್ರರು ಈ ಕಾರ್ಯಕ್ರಮಗಳನ್ನು ಜಾರಿಗೆ ತರತಕ್ಕಂಥ ಸವಾಲನ್ನು ಈ ಸರ್ಕಾರ ಇವತ್ತು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎನ್ನುವ ಒಂದು ನಂಬಿಕೆಯ ಮಾತುಗಳನ್ನು ಏನು ಹೇಳಿದ್ದಾರೆ ಹಾಗೂ ಈ ಒಂದು ಸಂದರ್ಭದಲ್ಲಿ, ಚರ್ಚೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಈ ಒಂದು ಹೊಸ ಮೈತ್ರಿ ಸರ್ಕಾರ ಎಷ್ಟು ದಿನಗಳು ಇರಬಹುದು ಎನ್ನುವ ಒಂದು ಅನುಮಾನಗಳನ್ನು ಈ ಒಂದು ಚರ್ಚೆಯ ಸಂದರ್ಭದಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ನಾನು ಹಿಂದೆ ಸ್ವಾತಂತ್ರ ಬಂದ ನಂತರ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸರ್ಕಾರಗಳು ಮಾಡಿರತಕ್ಕಂಥ ಕಾರ್ಯಕ್ರಮಗಳ ಬಗ್ಗೆ ಕೆಲವು ತಪ್ಪುಗಳು ಇರಬಹುದು ಹಲವಾರು ರೀತಿ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಪ್ರಾಮಾಣಿಕವಾಗಿ

ಸ್ಪಂದಿಸತಕ್ಕಂಥ ಕೆಲಸಗಳನ್ನು ಏನು ಮಾಡಿದ್ದಾರೆ ಇವತ್ತು ಇಲ್ಲಿಯವರೆಗೆ ನಡೆಸಿರತಕ್ಕಂಥ ಎಲ್ಲಾ ಸರ್ಕಾರಗಳ ಬಗ್ಗೆಯೂ ನಾನು ಇವತ್ತು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಪ್ಪುಗಳಾಗಿರತಕ್ಕಂಥಾದ್ದರ ಬಗ್ಗೆ ನಾನು ಟೀಕೆಗಳನ್ನು ಮಾಡುವುದಕ್ಕೆ ಈ ಸದನವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತರತಕ್ಕಂಥ ಸಂದರ್ಭದಲ್ಲಿ ಕೆಲವು ತಪ್ಪುಗಳು ಆಗಿರಬಹುದು, ಆದರೆ ನಾವು ಅದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದಕ್ಕಿಂತ ಹೆಚ್ಚಾಗಿ ಅಭಿವೃದ್ಧಿಯನ್ನು ಮಾಡಿರತಕ್ಕಂಥ ವಿಷಯಗಳ ಬಗ್ಗೆ ಈ ರಾಜ್ಯಕ್ಕೆ ಸಲ್ಲಿಸಿರತಕ್ಕಂಥ ಆ ಒಂದು ಅವಧಿಯ ಸಂದರ್ಭದಲ್ಲಿ ಮಾಡಿರತಕ್ಕಂಥ ಒಳ್ಳೆಯ ಕೆಲಸಗಳ ಬಗ್ಗೆ ನಾವು ಇವತ್ತು ನೆನಸಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯ. ಇವತ್ತು ಏನು ಮಾನ್ಯ ರಾಷ್ಟ್ರಪತಿಗಳ ಈ ಕಾರ್ಯಕ್ರಮದ ಬಗ್ಗೆ ಚರ್ಚೆಗಳನ್ನು ಏನು ಮಾಡಿದ್ದಾರೆ ನಾನು ಈ ಸಂದರ್ಭದಲ್ಲಿ ಅವರು ಏನು 11 ಭಾವನೆಗಳನ್ನು ಈ ಸದನದಲ್ಲಿ ಮುಂದಿಟ್ಟಿರತಕ್ಕಂಥ ಸಂದರ್ಭದಲ್ಲಿ ಬಹುಶಃ ರಾಷ್ಟ್ರಪತಿಗಳಾಗಿ ಬಂದಿರತಕ್ಕಂಥ ಹಲವಾರು ಹಿಂದಿನ ರಾಷ್ಟ್ರಪತಿಗಳ ಹೆಸರುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳತಕ್ಕಂಥಾದ್ದಕ್ಕೆ ನಾನು ಬಯಸುತ್ತೇನೆ. ಅದರಲ್ಲಿ ರ್ವೇಪಲ್ಲಿ ಶ್ರೀ ರಾಧಾಕೃಷ್ಣನ್‌ರವರು, ಶಿಕ್ಷಣ ಕ್ಷೇತ್ರದಲ್ಲಿ ಅವರದ್ದೇ ಆದಂತಹ ಒಂದು ಭಾವನೆಗಳನ್ನು ಕಾರ್ಯರೂಪಕ್ಕೆ ತರುತಕ್ಕಂಥದ್ದಕ್ಕೆ ಈ ದೇಶದಲ್ಲಿ ಸಂದೇಶವನ್ನು ಕೊಟ್ಟಿದ್ದರು, ಆದೇ ರೀತಿ ಬಾಬು ರಾಜೇಂದ್ರಪ್ರಸಾದ್‌ರವರು ಒಬ್ಬ ಆದರ್ಶ ವ್ಯಕ್ತಿಯಾಗಿ ಅವರ ಒಂದು ಕಾರ್ಯಕ್ರಮಗಳನ್ನು ಕೊಟ್ಟಿದ್ದರು. ಡಾಕ್ಟರ್ ಶಂಕರ್‌ದಯಾಳ್ ಶರ್ಮರವರು ಅತ್ಯುತ್ತಮ ಲೇಖಕರಾಗಿದ್ದರು ಹಾಗೂ ವಾಗ್ಮಿಗಳಾಗಿದ್ದರು, ಅದೇ ರೀತಿಯಲ್ಲಿ ಡಾಕ್ಟರ್ ಜಾಕೀರ್ ಹುಸೇನ್‌ರವರು ಶಿಕ್ಷಣ ತಜ್ಞರಾಗಿ ಅವರೇನು ಒಂದು ಕೊಡುಗೆಯನ್ನು ಕೊಟ್ಟಿದ್ದಾರೆ. ಅವರನ್ನೆಲ್ಲಾ ನಾನು ಈ ಸಂದರ್ಭದಲ್ಲಿ ನೆನಸಿಕೊಳ್ಳುತ್ತೇನೆ. ಇದೆಲ್ಲಕ್ಕಿಂತ ಹೆಚ್ಚಾಗಿ ಇವತ್ತಿನ ನಮ್ಮ ಮಾನ್ಯ ರಾಷ್ಟ್ರಪತಿಗಳು ಏನು ರಾಷ್ಟ್ರಪತಿಗಳಾಗಿ ಈ ಸಂವಿಧಾನದ ಅಡಿಯಲ್ಲಿ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಇರತಕ್ಕಂಥ ಇತಿಮಿತಿಗಳಲ್ಲಿ ಅವರು ಅದಕ್ಕೆ ಸೀಮಿತವಾಗಿ ಏನು ಕೆಲಸವನ್ನು ಮಾಡುತ್ತಿದ್ದಾರೆ, ಈ ರೀತಿಯಲ್ಲಿ ಒಂದು ಇತಿಮಿತಿಯೊಳಗೆ ಕೆಲಸವನ್ನು ಮಾಡತಕ್ಕಂಥ ಒಂದು ಸಂದರ್ಭದಲ್ಲಿ ಅವರು ಈ ರಾಷ್ಟ್ರಕ್ಕೆ ವಿಜ್ಞಾನಿಗಳಾಗಿ ಹಲವಾರು ರೀತಿಯ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅವರು ಒಂದು ಬಡ ಕುಟುಂಬದಲ್ಲಿ ಜನಿಸಿ, ರಾಷ್ಟ್ರದ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿ, ಇವತ್ತು ಅವರು ಕೇವಲ ರಾಷ್ಟ್ರಪತಿಗಳಾಗಿ ಅವರ ಇತಿಮಿತಿಯಲ್ಲಿ ಇವತ್ತು ಏನು ಕಾರ್ಯವನ್ನು ನಿರ್ವಹಿಸಬೇಕು ಅಂತ ಹೇಳಿ ಅವರು ಯಾವುದೇ ರೀತಿಯಲ್ಲಿ ಹಿಂದೆ ಸರಿಯಿದೆ, ಹಿಂಜರಿಕೆಗೆ ಒಳಗಾಗದೆ ಇವತ್ತು ಏನು ರಾಷ್ಟ್ರದ ಈ ಒಂದು ಆಧುನೀಕ ಯುಗದಲ್ಲಿ, ಜಾಗತೀಕರಣ ಯುಗದಲ್ಲಿ ಈ ರಾಷ್ಟ್ರ ಅಭಿವೃದ್ಧಿಯಾಗತಕ್ಕಂಥದ್ದಕ್ಕೆ ಯಾವ ಒಂದು ದಿಕ್ಕಿನಲ್ಲಿ ಹೋಗಬೇಕು ಅಂತ ಹೇಳಿ ಇವತ್ತು ಅವರು ಅವರ ಕಲ್ಪನೆಗಳನ್ನು ಈ ಒಂದು ಸದನದಲ್ಲಿ ಮಂಡನೆಯನ್ನು ಮಾಡಿದ್ದಾರೆ, ಅದಕ್ಕೆ ನಾನು ಅವರನ್ನು ಅಭಿನಂದಿಲೇಬೇಕು. ಕೆಲವರಲ್ಲಿ ಅವರವರದ್ದೇ ಆದಂತಹ ಭಿನ್ನಾಭಿಪ್ರಾಯಗಳು ಇರಬಹುದು, ಅವರು ಇಲ್ಲಿ ಈ ಸದನದಲ್ಲಿ ಮಂಡಿಸತಕ್ಕಂಥಾದ್ದು ಏನು ಅವಶ್ಯಕತೆ ಇತ್ತಾ ಎಂದು ಕೆಲವರು ಪ್ರಶ್ನೆ ಮಾಡಿದರು, ಅದು ಅವರ ವೈಯಕ್ತಿಕ ಅಭಿಪ್ರಾಯಗಳು, ಆದರೆ ಅವರು ಈ ಸದನದಲ್ಲಿ ಕೊಟ್ಟಿರತಕ್ಕಂಥ ಒಂದು ಸಂದೇಶ ಏನಿದೆ ಅದು ಮುಂದೆ ಇವತ್ತಿನ ಸರ್ಕಾರ ಇರಬಹುದು,

ಮಾನ್ಯ ಧರ್ಮ ಸಿಂಗ್‌ರವರು ಹಿಂದೆ ಅವರೇನು ಸರ್ಕಾರವನ್ನು ನಡೆಸತಕ್ಕಂಥ ಸಂದರ್ಭದಲ್ಲಿ ಹಲವಾರು ರೀತಿಯ ಒಳ್ಳೆಯ ಅಭಿವೃದ್ಧಿ ಕೆಲಸವನ್ನು ಮಾಡತಕ್ಕಂಥಾದ್ದಕ್ಕೆ ನಿರ್ಧಾರಗಳನ್ನು ಮಾಡಿರತಕ್ಕಂಥಾದ್ದು ಇರಬಹುದು, ಮುಂದಿನ ದಿನಗಳಲ್ಲಿ ಬರತಕ್ಕಂಥ ಸರ್ಕಾರಗಳು ಇರಬಹುದು, ಈ ಎಲ್ಲಾ ಸರ್ಕಾರಗಳಿಗೂ ಸನ್ಮಾನ್ಯ ರಾಷ್ಟ್ರಪತಿಗಳು ಹಾಕಿಕೊಟ್ಟಿರತಕ್ಕಂಥ ಈ ಅಂಶಗಳು ಇವತ್ತು ಸರ್ಕಾರಗಳನ್ನು ನಡೆಸತಕ್ಕಂಥವರಿಗೆ ಜವಾಬ್ದಾರಿಯನ್ನು ಎಚ್ಚರಿಸತಕ್ಕಂಥ ಸಂದೇಶ ಅಂತ ನಾನು ಈ ಸಂದರ್ಭದಲ್ಲಿ ಹೇಳುವುದನ್ನು ಬಯಸುತ್ತೇನೆ. ಇವತ್ತು ಈ ಒಂದು ಕಾರ್ಯಕ್ರಮಗಳನ್ನು ಮಾಡತಕ್ಕಂಥಾದ್ದಕ್ಕೆ ನಮ್ಮ ಕೆಲವು ಸದಸ್ಯರುಗಳು ಏನು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮೈತ್ರಿ ಸರ್ಕಾರ ಏನು ಕಾರ್ಯಕ್ರಮಗಳನ್ನು ಕೊಡುತ್ತದೆ, ಈ ವರ್ಷ ನಿಮ್ಮ ಕಾರ್ಯಕ್ರಮಗಳು ಏನು ಎನ್ನುವುದನ್ನು ಈ ಸದನದಲ್ಲಿ ಇಡಬೇಕು ಅಂತ ತಾವು ಏನು ಹೇಳಿದ್ದೀರಿ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಕಾರ್ಯಕ್ರಮಗಳು ಕೇವಲ ಒಂದು ವರ್ಷದಲ್ಲಿಯೇ ಮುಗಿಸಬೇಕು ಅಂಥ ಹೇಳಿರತಕ್ಕಂಥಾದ್ದು ಅಲ್ಲ. ಮುಂದಿನ 10 ವರ್ಷಗಳ ಅವಧಿಯಲ್ಲಿ ಈ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದರ ಮೂಲಕ ರಾಜ್ಯದ ಅಭಿವೃದ್ಧಿಗೆ ಇವತ್ತು ಈ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುವುದರ ಮುಖಾಂತರ ಅಭಿವೃದ್ಧಿಪಡಿಸುವುದಕ್ಕೆ ಅನುಕೂಲಗಳು ಏನಿದೆ ಎನ್ನುವುದನ್ನು ಅವರು ಹೇಳಿದ್ದಾರೆ. ಈ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಈ ರಾಜ್ಯದ ಅಭಿವೃದ್ಧಿಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಈ ಸರ್ಕಾರ ಬದ್ಧವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಮಾನ್ಯ ರಾಷ್ಟ್ರಪತಿಗಳು ಏನು ಕೆಲವು ವಿಷಯಗಳ ಬಗ್ಗೆ ಚರ್ಚೆ ಮಾಡಿಲ್ಲ ಅಂತ ಹೇಳಿ ನಮ್ಮ ಮಾನ್ಯ ಹಿರಿಯ ಸದಸ್ಯರುಗಳು ಕೆಲವು ಮಾತುಗಳನ್ನು ಹೇಳಿದರು. ಮಾನ್ಯ ರಾಷ್ಟ್ರಪತಿಗಳನ್ನು ಸುವರ್ಣ ಕರ್ನಾಟಕದ ಹೆಸರಿನಲ್ಲಿ ಭಾಷಣ ಮಾಡಲು ಏನು ಕರೆದಿದ್ದೀರಿ, ಆ ಸಂದರ್ಭದಲ್ಲಿ ರಾಜ್ಯದ ಅಭಿವೃದ್ಧಿ ಮತ್ತು ರಾಜ್ಯಕ್ಕೆ ಸೇವೆಯನ್ನು ಮಾಡಿರತಕ್ಕಂಥ ಹಲವಾರು ಹಿಂದಿನ ಪ್ರಮುಖ ವ್ಯಕ್ತಿಗಳ ಹೆಸರುಗಳನ್ನು ಜ್ಞಾಪಕ ಮಾಡಿಲ್ಲ ಹಾಗೂ ಹಲವಾರು ಕೆಲಸಗಳು ಏನು ಆಗತಕ್ಕಂಥಾದ್ದಕ್ಕೆ ನಾವು ಹಿಂದೆ ಬಿದ್ದಿದ್ದೇವೆ ಎನ್ನುವ ಬಗ್ಗೆ ಈ ಒಂದು ರಾಷ್ಟ್ರಪತಿಗಳ ಭಾಷಣದಲ್ಲಿ ವ್ಯಕ್ತವಾಗಿಲ್ಲ ಎನ್ನುವ ಮಾತನ್ನು ಹೇಳಿದಿರಿ, ಇದು ರಾಜ್ಯ ಸರ್ಕಾರ ಮಾಡಿರತಕ್ಕಂಥ ರಾಷ್ಟ್ರಪತಿಗಳ ಭಾಷಣ ಅಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದು ರಾಷ್ಟ್ರಪತಿಗಳ ಅವರ ಒಂದು ಕಛೇರಿಯಿಂದ ಮಾಡಿರತಕ್ಕಂಥ ಭಾಷಣ. ಅವರ ಒಂದು ಭಾವನೆಗಳನ್ನು ಈ ಒಂದು ವಿಧಾನ ಮಂಡಲದಲ್ಲಿ ಇಡಬೇಕು ಎನ್ನುವ ದೃಷ್ಟಿಯಿಂದ ಮಾಡಿರತಕ್ಕಂಥ ಭಾಷಣ. ಇದು ರಾಜ್ಯ ಸರ್ಕಾರ ಮಾಡಿರತಕ್ಕಂಥ ಒಂದು ಪ್ರತಿ ಅಲ್ಲ ಎಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟೀಕರಣವನ್ನು ಕೊಡುತ್ತಾ ಇವತ್ತು ಏನು ಈ ಒಂದು ರಾಷ್ಟ್ರಪತಿಗಳ ಈ 11 ಅಂಶಗಳ ಕಾರ್ಯಕ್ರಮದಲ್ಲಿ ಪ್ರಮುಖವಾಗಿ ಜವಳಿ ಕ್ಷೇತ್ರದ ಬಗ್ಗೆ ಹಲವಾರು ಹಿರಿಯ ಸದಸ್ಯರುಗಳು ಅವರ ಭಾವನೆಗಳನ್ನು ವ್ಯಕ್ತಪಡಿಸಿದರು. ಜವಳಿ ಕ್ಷೇತ್ರದಲ್ಲಿ ಇವತ್ತು ನಾವು ಏನು ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥಾದ್ದಕ್ಕೆ ಹೆಚ್ಚಿನ ಅವಕಾಶ ಏನಿದೆ, ನನಗೆ ಆದಂತಹ ಒಂದು ಅನುಭವವನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ಇವತ್ತು ಬೆಂಗಳೂರು ನಗರಕ್ಕೆ ಈ ಒಂದು ಜವಳಿ ಕ್ಷೇತ್ರದಲ್ಲಿರುವ ಗಾರ್ಮೆಂಟ್

ಫ್ಯಾಕ್ಟರಿಯಲ್ಲಿ ಕೆಲಸವನ್ನು ಮಾಡತಕ್ಕಂಥಾದ್ದಕ್ಕೆ ಕೇವಲ ಬೆಂಗಳೂರು ನಗರದಲ್ಲಿ ವಾಸ ಮಾಡತಕ್ಕಂಥ ನಮ್ಮ ಹೆಣ್ಣು ಮಕ್ಕಳು ಬರತಕ್ಕಂಥಾದ್ದು ಒಂದೇ ಅಲ್ಲ, ಇವತ್ತು ಮೈಸೂರು ನಗರದಿಂದ, ಮಂಡ್ಯ, ತುಮಕೂರು ನಗರದಿಂದ ಹಲವಾರು ಹೆಣ್ಣುಮಕ್ಕಳು ಅವರ ಕುಟುಂಬದ ನಿರ್ವಹಣೆಗೆ ಈ ಒಂದು ಜವಳಿ ಕ್ಷೇತ್ರದಲ್ಲಿರುವ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಉದ್ಯೋಗಕ್ಕೆ ಬೆಳಿಗ್ಗೆ ಬಂದು ಸಾಯಂಕಾಲ ಮತ್ತೆ ಹೋಗತಕ್ಕಂಥ ಒಂದು ವ್ಯವಸ್ಥೆ ಇದೆ. ಇವತ್ತು ಗಾರ್ಮೆಂಟ್ ಫ್ಯಾಕ್ಟರಿಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಾರಂಭ ಮಾಡತಕ್ಕದ್ದಕ್ಕೆ ಉದ್ಯಮಿಗಳ ಮನಸ್ಸನ್ನು ಒಲಿಸತಕ್ಕದ್ದು ಅವಶ್ಯಕತೆ ಇದೆ. ಇವತ್ತು ಕೆಲವು ಸದಸ್ಯರುಗಳು ಈ ಕೈಗಾರಿಕೆಗಳನ್ನು ಮಾಡತಕ್ಕವರು ಕೇವಲ ಬೆಂಗಳೂರು ನಗರವನ್ನು ಗಮನದಲ್ಲಿಟ್ಟುಕೊಂಡು ಕೈಗಾರಿಕೆಗಳನ್ನು ಮಾಡಲಿಕ್ಕೆ ಹೊರಟಿದ್ದಾರೆ ಎಂಬ ಭಾವನೆಯನ್ನು ಏನು ವ್ಯಕ್ತಪಡಿಸುತ್ತಿದ್ದೀರಿ, ಈ ಕೆಲಸವನ್ನು ಜಿಲ್ಲಾ ಮಟ್ಟಕ್ಕೆ ಇವತ್ತು ತೆಗೆದುಕೊಂಡು ಹೋಗುವುದಕ್ಕೆ ಈ ಸರ್ಕಾರ ಕೈಗಾರಿಕಾ ಉದ್ಯಮಿಗಳ ಮನ ಒಲಿಸಲಿಕ್ಕೆ ಪ್ರಯತ್ನವನ್ನು ಪಡುತ್ತದೆಯೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತೇನು ಈ ಉದ್ಯೋಗದ ವಿಷಯದಲ್ಲಿ ನನಗೇ ಆಗಿರತಕ್ಕ ಒಂದು ಅನುಭವವನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ನಾನು ಶಾಸಕನಾಗಿ ರಾಮನಗರದಲ್ಲಿ, ಶಾಸಕರ ಕಛೇರಿಯಲ್ಲಿ ಹೆಣ್ಣು ಮಕ್ಕಳಿಗೆ ಉದ್ಯೋಗದ ತರಬೇತಿ ಸಲುವಾಗಿ ಟೈಲರಿಂಗ್ ವಿಷಯದಲ್ಲಿ ಅವರಿಗೆ ಉದ್ಯೋಗವನ್ನು ಕಲ್ಪಿಸತಕ್ಕದ್ದಕ್ಕೆ ಏನು ನಾನು ಇಲ್ಲಿ ಟೈಲರಿಂಗ್ ತರಬೇತಿಯನ್ನು ಕೊಡಲು ಪ್ರಾರಂಭ ಮಾಡಿದ್ದೇನೆ, ಕೇವಲ 18 ತಿಂಗಳಲ್ಲಿ ಸುಮಾರು 2000 ಜನ ಹೆಣ್ಣು ಮಕ್ಕಳಿಗೆ ಉದ್ಯೋಗವನ್ನು ಕೊಡಿಸತಕ್ಕದ್ದಕ್ಕೆ ಚಾಲನೆ ಕೊಟ್ಟಿದ್ದೇನೆ, ಮಾನ್ಯ ರಾಷ್ಟ್ರಪತಿಗಳು ಹೇಳಿರತಕ್ಕದ್ದು 100ಕ್ಕೆ 100 ಸೂಕ್ತ ಇದೆ ಇದು. ಇವತ್ತು ಜವಳಿ ಕ್ಷೇತ್ರದಲ್ಲಿ ಯಾವುದೇ ಸರ್ಕಾರಗಳು ಇರಲಿ, ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವುದರ ಮುಖಾಂತರ ಉದ್ಯೋಗದ ಸಮಸ್ಯೆಯನ್ನು ಅದರಲ್ಲೂ ಇವತ್ತೇನು ಅನ್‌ಸ್ಕಿಲ್ಡ್ ವರ್ಕರ್ಸ್ ಇದ್ದಾರೆ ಅವರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದೆ. ಇವತ್ತು ಕೆಲವು ಉದ್ಯೋಗವನ್ನು ಸೃಷ್ಟಿ ಮಾಡತಕ್ಕದ್ದಕ್ಕೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಓದಿರತಕ್ಕವರಿಗೆ ಉದ್ಯೋಗವನ್ನು ಸೃಷ್ಟಿ ಮಾಡುವುದಕ್ಕೆ ಜವಳಿ ಕ್ಷೇತ್ರ ಪ್ರಮುಖವಾದ ಕ್ಷೇತ್ರವಾಗಿದ್ದು ಈ ವಿಷಯದಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಇದನ್ನು ಜಿಲ್ಲಾ ಮಟ್ಟಕ್ಕೂ ವಿಸ್ತರಿಸತಕ್ಕದ್ದಕ್ಕೆ ನಾವು ಪ್ರಯತ್ನವನ್ನು ಪಡುತ್ತೇವೆ. ಅದರ ಜೊತೆಯಲ್ಲಿ ರೇಷ್ಮೆ ಮತ್ತು ಹತ್ತಿ ವಿಷಯದಲ್ಲಿ ಇವತ್ತೇನು ನಮ್ಮ ಸನ್ಮಾನ್ಯ ಸದಸ್ಯರುಗಳು ಹಲವಾರು ಸಲಹೆಗಳನ್ನು ಏನು ಕೊಟ್ಟಿದ್ದಾರೆ. ಆ ಸಲಹೆಗಳಿಗೆ ಇವತ್ತು ಈ ಸರ್ಕಾರ ಸ್ಪಂದಿಸುತ್ತದೆ. ರೇಷ್ಮೆ ಬೆಳೆಗಾರರಿಗೆ ಮತ್ತು ಹತ್ತಿ ಬೆಳೆಗಾರರಿಗೆ ಅನುಕೂಲಗಳನ್ನು ಮಾಡಿಕೊಡತಕ್ಕದ್ದಕ್ಕೆ ಮುಂದಿನ ದಿನಗಳಲ್ಲಿ ನಾವು ಕಾರ್ಯಕ್ರಮವನ್ನು ಕೊಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂಧನ ಕ್ಷೇತ್ರದಲ್ಲಿ ಏನು ಇವತ್ತು ಹಲವಾರು ರೀತಿಯ ಚರ್ಚೆಗಳು ಆಗಿವೆ. ಜವಳಿ ಕ್ಷೇತ್ರದ ಬಗ್ಗೆ ನಾನು ಸುದೀರ್ಘವಾಗಿ ಹೇಳಬೇಕು ಎಂದರೆ 2–3 ಗಂಟೆಗಳ ಕಾಲ ಸಮಯವನ್ನು ನಾನು ತೆಗೆದುಕೊಳ್ಳಬೇಕಾಗುತ್ತದೆ. ಅದರಿಂದ ನಾನು ನನ್ನ ಕೆಲವೊಂದು ವಿಷಯಗಳ ಬಗ್ಗೆ ಹೇಳುವುದನ್ನು ಕಡಿಮೆ ಮಾಡುತ್ತಿದ್ದೇನೆ. ಅದರಲ್ಲಿ ನಾನು ಪ್ರಮುಖವಾಗಿ ಹೇಳಿಬಿಡುತ್ತೇನೆ. ಜವಳಿ ಕ್ಷೇತ್ರದ ವಿಷಯದಲ್ಲಿ 7 ಅಪರೆಲ್ ಪಾರ್ಕ್‌ಗಳನ್ನು ತೆಗೆಯತಕ್ಕದ್ದಕ್ಕೆ ಹಿಂದಿನ ಸರ್ಕಾರವೇ ಚಾಲನೆಯನ್ನು ಕೊಟ್ಟಿದೆ. ಆ ಅಪರೆಲ್ ಪಾರ್ಕುಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಇವತ್ತು ಉದ್ಯೋಗವನ್ನು

ಸೃಷ್ಟಿ ಮಾಡತಕ್ಕದ್ದಕ್ಕೆ ಮತ್ತು ಈ ಕಾರ್ಯಕ್ರಮವನ್ನು ಮುಂದುವರಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ಅದರ ಜೊತೆಗೆ ಹಾಸನದ ವಿಷಯದಲ್ಲಿ ಇಲ್ಲಿ ಯಾರೋ ಸದಸ್ಯರು ಮಾತನಾಡಬೇಕಾದರೆ ಏನು ಸ್ಪೆಷಲ್ ಏಕಾನಮಿ ಜೋಲ್‌ಇವತ್ತು ಮಾಡುವುದರ ಮುಖಾಂತರ ಅಲ್ಲಿ ಒಂದು ಚಾಲನೆ ಸಿಕ್ಕಿದೆ. ಅದನ್ನು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು ಎಂದಾಗ ಆ ಭಾಗದ ಸದಸ್ಯರು ಸ್ವಲ್ಪ ಕುಚೋದ್ಯವಾಗಿ ನಡೆದುಕೊಳ್ಳತಕ್ಕದ್ದನ್ನು ನಾನು ನೋಡಿದೆ. ಇದರಲ್ಲಿ ಕುಚೋದ್ಯದಿಂದ ನಡೆದುಕೊಳ್ಳುವುದರಿಂದ ನಾವು ನಮ್ಮ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಆಗುವುದಿಲ್ಲ. ಇವತ್ತು ಪ್ರಾಮಾಣಿಕವಾಗಿ ಸ್ಪಂದಿಸತಕ್ಕದ್ದಕ್ಕೆ ನಾನು ಎಲ್ಲರ ಸಹಕಾರವನ್ನು ಈ ಸಂದರ್ಭದಲ್ಲಿ ಕೋರುತ್ತೇನೆ. ಕನಕಪುರದಲ್ಲೂ ಸಹ ಎಸ್‌ಇ ಜೆಡ್ ಜೋನ್ ತರುವುದರ ಮುಖಾಂತರ ಅಲ್ಲೂ ಒಂದು ಜವಳಿ ಪಾರ್ಕನ್ನು ತರತಕ್ಕದ್ದಕ್ಕೆ ಇವತ್ತು ಗೋಕುಲ್‌ದಾಸ್ ಕಂಪನಿಯವರು ಸುಮಾರು 300 ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡುವುದಕ್ಕೆ ಸಮ್ಮತಿಯನ್ನು ಕೊಟ್ಟಿದ್ದಾರೆ. ಇದೇ ತಿಂಗಳು 24ನೇ ತಾರೀಖು ನನ್ನ ನೇತೃತ್ವದಲ್ಲೇ ಒಂದು ಸಭೆಯನ್ನು ಕರೆದಿದ್ದೇನೆ, ಆ ಸಭೆಯಲ್ಲಿ ಆ ಒಂದು ಉದ್ದಿಮೆ ಪ್ರಾರಂಭವಾಗಲು ಒಂದು ಚಾಲನೆಯನ್ನು ಕೊಡತಕ್ಕದ್ದಕ್ಕೆ ತೀರ್ಮಾನ ಮಾಡುತ್ತಿದ್ದೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ

ಇವತ್ತು ಇಂಧನದ ವಿಷಯದಲ್ಲಿ ಏನು ಜೈವಿಕ ಇಂಧನ ವಿಷಯದ ಬಗ್ಗೆ ಅದರಲ್ಲೂ ಜೆಟ್ರೋಪ ಬೆಳೆಯನ್ನು ಬೆಳೆಯುವುದರ ಮುಖಾಂತರ ಒಂದು ಹೊಸ ಕಾರ್ಯಕ್ರಮವನ್ನು ಮಾಡಲು ಹೆಚ್ಚಿನ ಆದ್ಯತೆ ಕೊಡಬೇಕೆಂದು ಮಾನ್ಯ ರಾಷ್ಟ್ರಪತಿಗಳು ಮನವಿ ಮಾಡಿದ್ದಾರೆ. ಈ ವಿಷಯದಲ್ಲಿ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಜೆಟ್ರೋಪ ಬೆಳೆ ಬೆಳೆಯತಕ್ಕದ್ದು, ಎಣ್ಣೆ ತೆಗೆಯುವ ಘಟಕ ಸ್ಥಾಪನೆ ಮಾಡತಕ್ಕದ್ದು, ಜೈವಿಕ ಡೀಸೆಲ್ ಮತ್ತು ಡೀಸೆಲ್ ಸಂಯೋಗ ಮತ್ತು ಅಂತಹ ಇಂಧನದ ಮಾರಾಟ ಮಾಡತಕ್ಕಂಥ ಕಾರ್ಯಕ್ರಮಗಳು ಜಾರಿಯಲ್ಲಿವೆ. ಜೆಟ್ರೋಪ ಸಸ್ಯಗಳ ಉತ್ತಮ ಗುಣಮಟ್ಟದ ಬೀಜ ಉತ್ಪಾದನೆಗೆ ಸಮರ್ಥವಾಗಿ ನಿರ್ವಹಿಸತಕ್ಕದ್ದಕ್ಕೆ ಮೂರು ವರ್ಷಗಳ ಕಾಲ ಬೇಕಾಗುತ್ತದೆ. ಅದಕ್ಕೆ ಚಾಲನೆಯನ್ನು ಕೊಡತಕ್ಕದ್ದು ಅವಶ್ಯಕ. ಅದೇ ರೀತಿ ಮಳೆ ಆಧಾರಿತ ಪ್ರದೇಶದಲ್ಲಿ ಹೆಕ್ಟೇರ್‌ಗೆ ವಾರ್ಷಿಕ 12 ಸಾವಿರ ರೂಪಾಯಿ ಆದಾಯ ಮತ್ತು ಹನಿ ನೀರಾವರಿ ಪದ್ಧತಿ ಅಡಿಯಲ್ಲಿ ಇನ್ನೂ ಹೆಚ್ಚಿನ ಆದಾಯವನ್ನು ಗಳಿಸಬಹುದಾದಂತಹ ಅವಕಾಶಗಳು ಏನು ಇದ್ದಾವೆ. ಇದನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ 10 ಲಕ್ಷ ಹೆಕ್ಟೇರ್‌ನಲ್ಲಿ ಜೆಟ್ರೋಪ ಬೆಳೆಯನ್ನು ಬೆಳೆಯುವುದಕ್ಕೆ ಸರ್ಕಾರ ಕಾರ್ಯಕ್ರಮವನ್ನು ಕೊಡತಕ್ಕದ್ದಕ್ಕೆ ತೀರ್ಮಾನ ಮಾಡಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಬಯಸುತ್ತೇನೆ ಅದೇ ರೀತಿ ಈ ಒಂದು ವಿಷಯದಲ್ಲಿ ಉತ್ತೇಜನವನ್ನು ನೀಡಲು ಇವತ್ತು 16 ಜಿಲ್ಲೆಗಳ 17 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಈ ಬೆಂಗಳೂರಿನ ಜೆಪ್ರಾಲ ಸಂಸ್ಥೆ ಮತ್ತು ಕೃಷಿ ಇಲಾಖೆಯ ಒಪ್ಪಂದಗಳು ಆಗಿದೆ. ಈ ಒಂದು ವಿಷಯದಲ್ಲಿ ಸರ್ಕಾರ ಗಮನ ಹರಿಸಿದೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಲು ಬಯಸುತ್ತೇನೆ. ಹಾಗೂ ಧಾರವಾಡ ಮತ್ತು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯಗಳ ಮುಖಾಂತರ ಇವತ್ತು ಜೆಟ್ರೋಪ ಸಸ್ಯಗಳ ಅಭಿವೃದ್ಧಿಗೆ ಭಾರತೀಯ ವಿಜ್ಞಾನ ಸಂಸ್ಥೆಯೂ ಸೇರಿಸಿಕೊಂಡ ಹಾಗೆ ಎಲ್ಲ ರೀತಿಯ ನೆರವನ್ನು ಸರ್ಕಾರ ಬಿಡುಗಡೆ ಮಾಡಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಮುಖಾಂತರ ಜೆಟ್ರೋಪ ಬೆಳೆ

ತೆಗೆಯುವ ಬಗ್ಗೆ ಈಗಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಅರಣ್ಯ ಇಲಾಖೆಗಳಿಗೂ ಸೂಚನೆಗಳನ್ನು ಕೊಟ್ಟಿದ್ದೇವೆ ಎಂದು ಸದನದ ಗಮನಕ್ಕೆ ಮಾನ್ಯ ಅಧ್ಯಕ್ಷರ ಮೂಲಕ ತರಲು ಬಯಸುತ್ತೇನೆ.

ಈ ಪೌರ ತ್ಯಾಜ್ಯದಿಂದ ವಿದ್ಯುತ್ ವಿಷಯದಲ್ಲಿ, ಈಗಾಗಲೇ ಹಲವಾರು ಸದಸ್ಯರುಗಳು, ಅದರಲ್ಲೂ ಬೆಂಗಳೂರು ನಗರದ ಶಾಸಕ ಮಿತ್ರರು ಕೆಲವು ವಿಷಯಗಳನ್ನು ಚರ್ಚೆ ಮಾಡಿದರು. ರಾಜ್ಯ ಸರ್ಕಾರ ನಮಗೆ ಯಾವುದೇ ರೀತಿಯ ಸಹಕಾರವನ್ನು ಕೊಡದೇ ಇದ್ದರೂ ಬೆಂಗಳೂರು ಮಹಾನಗರ ಪಾಲಿಕೆಯ ಹಲವಾರು ಅಭಿವೃದ್ಧಿ ಕೆಲಸ ಮಾಡಲಿಕ್ಕೆ ನಾವು ಚಾಲನೆಯನ್ನು ಕೊಟ್ಟಿದ್ದೇವೆಂದು, ನಾನು ಇಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ರಾಜ್ಯ ಸರ್ಕಾರ ಹಾಗೂ ಮಹಾನಗರ ಪಾಲಿಕೆಯ ಸದಸ್ಯರ ನಡುವೆ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಇಲ್ಲ. ಭಿನ್ನಾಭಿಪ್ರಾಯಗಳು ಇರತಕ್ಕದ್ದು ಮಹಾನಗರ ಪಾಲಿಕೆಯ ಸದಸ್ಯರು ಮತ್ತು ಅಧಿಕಾರಿಗಳಿಗೆ ಎಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟೀಕರಣವನ್ನು ಕೊಡಲಿಕ್ಕೆ ಬಯಸುತ್ತೇನೆ. ರಾಜ್ಯ ಸರ್ಕಾರ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಕೊಡತಕ್ಕದಕ್ಕೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟಿರತಕ್ಕಂಥ ಹಲವಾರು ನಿದರ್ಶನಗಳು ಇವೆ. ಇವತ್ತು ರಾಜ್ಯ ಸರ್ಕಾರದ ಬಗ್ಗೆ ನೀವು ದೂರನ್ನು ಹೊರಿಸತಕ್ಕದ್ದು ಸೂಕ್ತವಲ್ಲ. ಮಹಾನಗರ ಪಾಲಿಕೆಯ ಸದಸ್ಯರುಗಳು ಇವತ್ತು ಬೆಂಗಳೂರು ನಗರದ ಅಭಿವೃದ್ಧಿಯ ವಿಷಯದಲ್ಲಿ ಕೆಲಸವನ್ನು ಮಾಡಬೇಕಾದರೆ ತಾವುಗಳು ಯಾವುದೇ ರೀತಿಯ ಒಂದು ಸಣ್ಣತನಕ್ಕೆ ಹೋಗದೇ ಇವತ್ತು ಅಧಿಕಾರಿಗಳ ಜೊತೆಯಲ್ಲಿ ಒಳ್ಳೆಯ ಒಂದು ಸೌಹಾರ್ದಯುತವಾದ ಬಾಂಧವ್ಯವನ್ನು ಇಟ್ಟುಕೊಳ್ಳುವುದರ ಜೊತೆಗೆ ಕಟ್ಟುನಿಟ್ಟಿನಲ್ಲಿ ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಅಧಿಕಾರಿಗಳಿಗೂ ಮಹಾ ನಗರಪಾಲಿಕೆಯವರಿಗೆ ಹೆಚ್ಚಿನ ಒಂದು ಅಧಿಕಾರ ಏನು ಇದೆ. ಅದನ್ನು ಉಪಯೋಗ ಮಾಡಿಕೊಳ್ಳುವುದರ ಮುಖಾಂತರ ಅಭಿವೃದ್ಧಿಯನ್ನು ಪಡಿಸಬೇಕು ಹೊರತು ರಾಜ್ಯ ಸರ್ಕಾರದಿಂದ ಯಾವುದೇ ರೀತಿಯಿಂದ ಬೆಂಗಳೂರು ನಗರ ಅಭಿವೃದ್ಧಿಗೆ ಹಿನ್ನೆಡೆ ಆಗತಕ್ಕದ್ದಕ್ಕೆ ಅವಕಾಶವನ್ನು ಕೊಡುವುದಿಲ್ಲ ಹಾಗೂ ಹಿಂದಿನ ಸರ್ಕಾರಗಳಿಗೂ ಕೊಟ್ಟಿಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಇವತ್ತೇನು ಬೆಂಗಳೂರು ನಗರದ ಅಭಿವೃದ್ಧಿಯ ವಿಷಯದಲ್ಲಿ ಸನ್ಮಾನ್ಯ ವೈಜನಾಥ ಪಾಟೀಲ್ ಅವರು ಒಂದು ಮಾತನ್ನು ಹೇಳಿದರು. ಅವತ್ತಿನ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಧರ್ಮಸಿಂಗ್ ಅವರಿಗೂ ಮತ್ತು ಮಾನ್ಯ ದೇವೇಗೌಡರವರಿಗೂ ಈ ಮೆಟ್ರೋರೈಲು ಪ್ರಾಜೆಕ್ಟನ್ನು ತರತಕ್ಕಂಥ ವಿಷಯದಲ್ಲಿ ಏನೊಂದು ಭಿನ್ನಾಭಿಪ್ರಾಯಗಳು ಇತ್ತು ಎನ್ನುವುದನ್ನು ಅವರು ವ್ಯಕ್ತಪಡಿಸಿದ್ದರು. ಇವತ್ತು ನಾವು ಅಧಿಕಾರವನ್ನು ನಡೆಸತಕ್ಕಂಥ ಸಂದರ್ಭದಲ್ಲಿ ಮಾನೋ ರೈಲಿನ ಬಗ್ಗೆ ಮಾತನಾಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿದರು. ಹಾಗೂ ಮಾನ್ಯ ದಿನೇಶ್ ಗುಂಡೂರಾವ್ ಅವರು ಮಾತನಾಡಬೇಕಾದರೆ ಈ ಒಂದು ವಿಷಯದಲ್ಲಿ ಗೊಂದಲ ಸೃಷ್ಟಿ ಆಗಿದೆ ಎನ್ನುವ ಮಾತನ್ನು ಹೇಳಿದರು. ಮಾನ್ಯ ದೇವೇಗೌಡರು ಆ ಸಂದರ್ಭದಲ್ಲಿ ಕೆಲವು ಪ್ರಶ್ನೆಯನ್ನು ಇಟ್ಟರು. ಬೆಂಗಳೂರು ನಗರದ ಹಣಕಾಸಿನಲ್ಲಿ ಅಥವಾ ರಾಜ್ಯ ಸರ್ಕಾರದ ಹಣಕಾಸಿನ ವ್ಯವಸ್ಥೆಯೊಳಗೆ ಸಂಪೂರ್ಣವಾಗಿ ಆ ಕಾರ್ಯಕ್ರಮವನ್ನು ಅಳವಡಿಸಲಿಕ್ಕೆ

ಸಾಧ್ಯವೇ ಎನ್ನುವುದರ ಬಗ್ಗೆ ಅವರು ಒಂದು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಇವತ್ತು ದೆಹಲಿಯಲ್ಲಿ ಆದಂತಹ ಮೆಟ್ರೋ ಪ್ರಾಜೆಕ್ಟನ್ನು ಒಂದು ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದರು. ಅದನ್ನು ಇಂಪ್ಲಿಮೆಂಟ್ ಮಾಡಿದವರು ಶ್ರೀ ದೇವೇಗೌಡರು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳಲು ಬಯಸುತ್ತೇನೆ. ಅವತ್ತು ನಾನು ಲೋಕಸಭಾ ಸದಸ್ಯನಾಗಿ ಇದ್ದೆ. ಆ ಸಂದರ್ಭದಲ್ಲಿ ದೆಹಲಿಯ ಮೆಟ್ರೋ ಪ್ರಾಜೆಕ್ಟ್‌ಗೆ ಕೇಂದ್ರ ಸರ್ಕಾರವೇ ಎಲ್ಲಾ ರೀತಿಯ ಸಹಕಾರವನ್ನು ಕೊಡುವುದರ ಮುಖಾಂತರ ಆ ಒಂದು ಪ್ರಾಜೆಕ್ಟ್‌ಗೆ ಚಾಲನೆಯನ್ನು ಅವರು ಕೊಟ್ಟರು. ಬೆಂಗಳೂರು ನಗರದಲ್ಲೂ ಅದೇ ರೀತಿಯ ಆ ಒಂದು ಕಾರಣಗಳ ಅಡಿಯಲ್ಲಿಯೇ ಬೆಂಗಳೂರು ನಗರದ ಮೆಟ್ರೋ ಪ್ರಾಜೆಕ್ಟನ್ನು ಪ್ರಾರಂಭ ಮಾಡಬೇಕು ಎಂಬ ಒಂದೇ ಉದ್ದೇಶ ಮಾನ್ಯ ದೇವೇಗೌಡರಿಗೆ ಇದ್ದಿದ್ದು ಬಿಟ್ಟರೆ ಅವರಿಗೆ ಯಾವುದೇ ರೀತಿಯ ಮೆಟ್ರೋ ಪ್ರಾಜೆಕ್ಟ್ ಬಗ್ಗೆ ವಿರೋಧ ಇರಲಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತೇನೆ. ಮೆಟ್ರೋ ರೈಲು ಯೋಜನೆ ವಿಷಯದಲ್ಲಿ ಇವತ್ತೇನು ಕಾರ್ಯಕ್ರಮ ಇದೆ?, ಕೆಲವು ಏರಿಯಾದಲ್ಲಿ ಲ್ಯಾಂಡ್ ಅಕ್ವಿಸಿಷನ್ ನಿಲ್ಲಿಸಬೇಕು ಎಂದು ಹೇಳಿ ನಾವು ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದರು. ಅದಕ್ಕೆ ಕಾರಣ ಇವತ್ತು ಸರ್ಕಾರದ ಜಾಗಗಳೇ ಇದ್ದ ಕಡೆ ಆ ಸರ್ಕಾರದ ಜಾಗದಲ್ಲೇ ರೈಲ್ವೆ ಸ್ಟೇಷನ್ ಮಾಡತಕ್ಕದ್ದಕ್ಕೆ ತೀರ್ಮಾನ ಮಾಡಿದೆ. ಇವತ್ತು 30–40 ವರ್ಷಗಳಿಂದ ನಾಗರೀಕರು ಏನು ಜೀವನ ಮಾಡುತ್ತಿದ್ದಾರೆ. ಒಂದು 20X30 ಅಡಿ ನಿವೇಶನಗಳು ಇರಬಹುದು, 50X60 ಅಡಿ ನಿವೇಶನಗಳು ಇರಬಹುದು. ನೀವು ಅಂತಹ ಕಡೆ ಸರ್ಕಾರಿ ಜಾಗ ಇದ್ದಲ್ಲಿ ಇವತ್ತು ನಾಗರೀಕರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಮಾಡತಕ್ಕಂಥ ಬಗ್ಗೆ ತೀರ್ಮಾನ ಕೆಲವು ತೀರ್ಮಾನ ಮಾಡಬೇಕಾಗುತ್ತದೆ ಸರ್ಕಾರವನ್ನು ನಡೆಸಬೇಕಾದರೂ ನಮಗೂ ಒಂದು ಜವಾಬ್ದಾರಿ ಇದೆ ಆ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದಕ್ಕೆ ಕೆಲವು ವಿಷಯದಲ್ಲಿ ನಾವು ತೀರ್ಮಾನ ಮಾಡಿದ್ದೇವೆಯೇ ಹೊರತು ಅದೂ ಮೆಟ್ರೊ ಪ್ರಾಜೆಕ್ಟ್‌ನ ಅಭಿವೃದ್ಧಿಗೆ, ಮೆಟ್ರೋ ಪ್ರಾಜೆಕ್ಟ್‌ನ ಕೆಲಸವನ್ನು ಪ್ರಾರಂಭ ಮಾಡತಕ್ಕದ್ದಕ್ಕೆ ಯಾವುದೇ ರೀತಿಯ ಕಾರಣಗಳು ಆಗುವುದಿಲ್ಲ. ಆ ಕೆಲಸವನ್ನು ಯುದ್ಧೋಪಾದಿಯಲ್ಲಿ ಮಾಡಿದ್ದರಲ್ಲಿ ಮಾನ್ಯ ಧರ್ಮಸಿಂಗ್ ಅವರ ಮತ್ತು ಹಿಂದಿನ ಅವರ ಸಚಿವ ಸಂಪುಟದ ಹೋರಾಟ ಏನಿದೆ. ಅದಕ್ಕೆ ನಾವು ಕೈಜೋಡಿಸಲು ಸಿದ್ಧರಿದ್ದೇವೆ. ಯಾವುದೇ ಕಾರಣಕ್ಕೂ ಮೆಟ್ರೊ ಪ್ರಾಜೆಕ್ಟನ್ನು ನಿಲ್ಲಿಸತಕ್ಕ ಪ್ರಶ್ನೆ ಇಲ್ಲ. ಇವತ್ತು ಮೆಟ್ರೊ ಪ್ರಾಜೆಕ್ಟ್‌ನ ಅಡಿಯಲ್ಲಿ ಬೆಂಗಳೂರು ನಾಗರೀಕರಿಗೆ ಏನು ಸೌಕರ್ಯ ಮಾಡಿಕೊಡಲು ಹೊರಟಿದ್ದೇವೆ ಎಂದು ನಾನು ಇವತ್ತು ಹೇಳಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಹಿಂದಿನ ಮುಖ್ಯಮಂತ್ರಿಗಳಿಗೂ ಆ ವಿಷಯ ಗೊತ್ತಿದೆ ಇವತ್ತು ಆ ಒಂದು ಪ್ರಾಜೆಕ್ಟ್‌ನಿಂದ ಬೆಂಗಳೂರು ನಗರದ ಸಂಪೂರ್ಣ ವಾಹನ ನಡೆಯುತಕ್ಕ ವ್ಯವಸ್ಥೆಗೆ ಸಾರ್ವಜನಿಕರು ಅವರು ದಿನನಿತ್ಯದ ಜೀವನವನ್ನು ಮಾಡುವುದಕ್ಕೆ ಅದರಿಂದ ಸಂಪೂರ್ಣವಾಗಿ ಅನುಕೂಲಗಳು ಆಗುವುದಿಲ್ಲ. ಅದರ ಜೊತೆಗೆ ನಾವು ಫೀಡರ್ ಚಾನಲ್‌ಗಳನ್ನೇನು ತರಬೇಕಾಗಿದೆ. ಆ ದೃಷ್ಟಿಯಿಂದ ಇವತ್ತು ಬೆಂಗಳೂರು ಬಿಎಂಟಿಸಿ ಬಸ್ ವ್ಯವಸ್ಥೆಯನ್ನು ಉತ್ತಮಪಡಿಸುವುದರ ಜೊತೆಗೆ ಬೇರೆ ರೀತಿಯಲ್ಲಿ ಕಾರ್ಯಕ್ರಮವನ್ನು ಕೊಡತಕ್ಕಂಥಾದ್ದಕ್ಕೆ ಸರ್ಕಾರ ಬದ್ಧವಾಗಿದೆಯೇ ಹೊರತು ಅದರಿಂದ ಮೆಟ್ರೋ ಪ್ರಾಜೆಕ್ಟ್‌ಗೆ ತೊಂದರೆ ಕೊಡುತ್ತೇವೆಂಬ ಅನುಮಾನ ಪಡುವುದು ಬೇಡ. ಈ ಒಂದು ತ್ಯಾಜ್ಯ ವಸ್ತುಗಳಿಂದ ಏನು ವಿದ್ಯುತ್ತನ್ನು ಉತ್ಪಾದನೆ ಮಾಡುವಂಥದ್ದಕ್ಕೆ

ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಮೈಸೂರು, ಹುಬ್ಬಳ್ಳಿ–ಧಾರವಾಡ ನಗರದಲ್ಲೂ ಈ ಒಂದು ವ್ಯವಸ್ಥೆಗೆ ಬಂಡವಾಳವನ್ನು ಹೂಡುವ ಉದ್ದೇಶ ಇದೆ, ಬೆಂಗಳೂರು ನಗರದಲ್ಲಿ ಸುಮಾರು ಒಂದೂವರೆ ಸಾವಿರ ಟನ್‌ಗಳಷ್ಟು ಘನ ತ್ಯಾಜ್ಯ ವಸ್ತುಗಳನ್ನು ಉತ್ಪಾದಿಸುವುದು ಮತ್ತು ಐದು ನಗರ ಸಭೆಗಳ ವತಿಯಿಂದ ಈ ಒಂದೂವರೆ ಸಾವಿರ ಟನ್‌ಗಳಷ್ಟು ಘನ ತ್ಯಾಜ್ಯ ವಸ್ತುಗಳೇನು ಸಂಗ್ರಹವಾಗುತ್ತದೆ. ಇದರಿಂದ ಈ ಒಂದು ವಿದ್ಯುತ್ತನ್ನು ಇವತ್ತು ಉತ್ಪಾದನೆ ಮಾಡತಕ್ಕಂಥಾದ್ದಕ್ಕೆ ಚಾಲನೆ ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ. ಆದರೆ ಇದನ್ನು ಉತ್ಪಾದನೆ ಮಾಡುವ ಸಂದರ್ಭದಲ್ಲಿ ಏನು ಕೆಲವು ನ್ಯೂನತೆಗಳಿವೆ, ಅದನ್ನು ಸರಿಪಡಿಸುವುದಕ್ಕೂ ಸರ್ಕಾರ ಕೆಲವು ತೀರ್ಮಾನಗಳನ್ನು ಮುಂದಿನ ದಿನಗಳಲ್ಲಿ ಪ್ರಕಟಪಡಿಸುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ತೋಟಗಾರಿಕೆ ಮತ್ತು ಕೃಷಿ ಸಂಸ್ಕರಣೆ ವಿಷಯದಲ್ಲಿ ಇವತ್ತು ರಾಷ್ಟ್ರಪತಿಗಳು ನಮಗೆ ಕೊಟ್ಟಿರುವ ಮಾರ್ಗದರ್ಶನಗಳೇನು ಇವೆ, ಈ ವಿಷಯದಲ್ಲಿ ಈಗಾಗಲೇ....

ಶ್ರೀ ಎ. ಕೃಷ್ಣಪ್ಪ : ಷುಗರ್‌ಕೇನ್‌ನಿಂದಲೂ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಎಲ್ಲಾ ಮುಂದೆ ತರುತ್ತೇವೆಂದು ಹೇಳುತ್ತೇನೆ. ಎಲ್ಲವನ್ನೂ ಸವಿಸ್ತಾರವಾಗಿ ಹೇಳಲಿಕ್ಕಾಗುವುದಿಲ್ಲ. ಈಗ ಷುಗರ್ ಸೆಕ್ಟರ್‌ನಿಂದಲೂ ಪವರ್ ಜನರೇಷನ್ ಮಾಡತಕ್ಕದ್ದಕ್ಕೂ ಸರ್ಕಾರ ಕಾರ್ಯಕ್ರಮವನ್ನು ಕೊಡುತ್ತದೆ. ಅದರ ಬಗ್ಗೆ ಏನೂ ಅನುಮಾನ ಬೇಕಿಲ್ಲ. ಅದೇ ರೀತಿ ತೋಟಗಾರಿಕೆ ವಿಷಯದಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ವತಿಯಿಂದ ಏನು ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್ ಕಾರ್ಯಕ್ರಮದ ಮುಖಾಂತರ ಈಗ ಕೇಂದ್ರಸರ್ಕಾರವು ಹಣವನ್ನು ಕೊಡುವುದಕ್ಕೆ ಹೆಚ್ಚಿನ ರೀತಿಯಲ್ಲಿ ಗಮನವನ್ನು ಹರಿಸಿದೆ. ಸುಮಾರು 13 ಜಿಲ್ಲೆಗಳಲ್ಲಿ ಈಗಾಗಲೇ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದಕ್ಕೆ ಸಧ್ಯದಲ್ಲಿಯೇ ಚಾಲನೆಯನ್ನು ಕೊಡುತ್ತಿದ್ದೇವೆ. ಇವತ್ತು ಫುಡ್ ಪಾರ್ಕ್‌ಗಳಿರಬಹುದು, ಕೋಲ್ಡ್ ಸ್ಟೋರೇಜ್‌ಗಳಿರಬಹುದು, ಇವತ್ತೇನು ಕೆಲವು ಕೋಲ್ಡ್ ಸ್ಟೋರೇಜ್‌ಗಳು ಕೆಲಸವನ್ನು ಮಾಡದೇ ಇವತ್ತು ಕೆಟ್ಟಿರುವ ಪರಿಸ್ಥಿತಿಯೇನಿದೆ, ಅದನ್ನು ಸರಿಪಡಿಸುವುದಕ್ಕೂ ಈಗಾಗಲೇ ತೀರ್ಮಾನಗಳನ್ನು ಮಾಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಿ ಈ ಒಂದು ವಿಷಯದಲ್ಲಿ ತಮಿಳುನಾಡಿನಲ್ಲಿ ಗುತ್ತಿಗೆ ಆಧಾರಿತ ಕೃಷಿಗೆ ಒತ್ತು ಕೊಟ್ಟಿರುವ ಕೆಲವು ಕೃಷಿ ಪದ್ಧತಿ ಏನಿದೆ. ಅದು ಅಲ್ಲಿ ಯಶಸ್ಸನ್ನು ಕಂಡಿದೆ ಎನ್ನುವ ಒಂದು ವರದಿಯನ್ನು ಕೃಷಿ ಇಲಾಖೆಯ ಅಧಿಕಾರಿಗಳೇನು ಕೊಟ್ಟಿದ್ದಾರೆ. ಆ ಒಂದು ವರದಿಯನ್ನು ನಾವು ತರಿಸಿ ಅದು ಇವತ್ತು ನಮ್ಮ ರಾಜ್ಯಕ್ಕೆ ಅನುಕೂಲವಾಗತಕ್ಕದ್ದು ಎಂದು ಕಂಡುಬಂದಾಗ ಆ ಒಂದು ಪದ್ಧತಿಯನ್ನು ಅಳವಡಿಸಿಕೊಳ್ಳುವುದಕ್ಕೆ ತೀರ್ಮಾನವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇವೆ. ಇವತ್ತೇನು ರೈತರು ಬೆಳೆಯತಕ್ಕ ಬೆಳೆ ವಿಷಯದಲ್ಲಿ ಸರ್ಕಾರ ಬೆಂಬಲ ಬೆಲೆಯನ್ನು ಘೋಷಣೆ ಮಾಡಿತು ಆವರ್ತನಿಧಿಯನ್ನು ಸೃಷ್ಟಿ ಮಾಡಿದರು. ಇವತ್ತೇನು ಕೆಲವು ಸಂದರ್ಭದಲ್ಲಿ ನಮ್ಮ ರೈತರಿಗೆ ಈ ಸರ್ಕಾರ ಬಂದ ನಂತರವೇ 40 ದಿವಸಗಳಲ್ಲಿ ಏನು ಟೊಮೆಟೋ ಬೆಳೆ ವಿಷಯದಲ್ಲಿ ಏನು ಒಂದು ತೊಂದರೆಗೊಳಗಾದರು, ನಾವು ಎಪಿಎಂಸಿ ಮುಖಾಂತರ, ಕೃಷಿ ಇಲಾಖೆಯ ಮುಖಾಂತರ, ತೋಟಗಾರಿಕೆ ಇಲಾಖೆಯ ಮುಖಾಂತರ ತಕ್ಷಣವೇ ಆ ರೈತರಿಗೆ ಇವತ್ತು ನಾವು ಆ ಒಂದು ಬೆಲೆ ಇಳಿದಿರುವುದಕ್ಕೆ ರೈತರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಹೇಳಿ ತಕ್ಷಣವೇ ನಾವು

ತೀರ್ಮಾನವನ್ನು ಮಾಡಿದ್ದೇವೆ. ಆದರೂ ಈ ಒಂದು ವಿಷಯದಲ್ಲಿ ಕೆಲವು ಕಡೆ ರೈತರಿಗೆ ಸರಿಯಾದ ರೀತಿಯ ಒಂದು ಅನುಕೂಲಗಳಾಗಲಿಕ್ಕೆ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಈ ಭೂಮಿ ಕಾರ್ಯಕ್ರಮದ ಮುಖಾಂತರ ಇವತ್ತೇನು ಪ್ರತಿಯೊಬ್ಬ ಸಣ್ಣ ರೈತರ ಒಂದು ಮಾಹಿತಿಯೂ ಕೂಡ ಸರ್ಕಾರದಲ್ಲೇನು ಇದೆ, ಅದರ ಮೂಲಕ ಮುಂದಿನ ದಿನಗಳಲ್ಲಿ ಇಂಥ ಒಂದು ತೊಂದರೆಗಳು ಬಂದಾಗ ಸರ್ಕಾರ ವೈಜ್ಞಾನಿಕವಾಗಿ ತಕ್ಷಣವೇ ರಾಜ್ಯದ ಯಾವುದೇ ಮೂಲೆಯಲ್ಲಿರಲಿ, ಸಣ್ಣಪುಟ್ಟ ರೈತರಿಗೂ ಅನುಕೂಲವಾಗುವ ಹಾಗೆ ಕಾರ್ಯಕ್ರಮವನ್ನು ತರಲಿಕ್ಕೆ ಈಗಾಗಲೇ ಆ ವಿಷಯದ ಬಗ್ಗೆಯೂ ಕೂಡ ಗಮನವನ್ನು ಹರಿಸಿದ್ದೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಜಲನಿರ್ವಹಣೆ ವಿಷಯದಲ್ಲಿ ಒಂದು ದೊಡ್ಡ ಚರ್ಚೆ ನಡೆಯುತ್ತಿದೆ. ಮಳೆಗಾಲದಲ್ಲೂ ಮಳೆ ನೀರನ್ನು ಸಂಗ್ರಹ ಮಾಡತಕ್ಕ ಮಳೆ ಕೊಯಿಲಿಗೆ ಇವತ್ತು ಉತ್ತೇಜನ ಕೊಡಬೇಕೆಂದು ಕೆಲವು ಕಾರ್ಯಕ್ರಮವನ್ನು ನಿರೂಪಿಸುವುದಕ್ಕೆ ಈಗಾಗಲೇ ಸರ್ಕಾರ ನಿರ್ದೇಶನಗಳನ್ನು ಕೊಟ್ಟಿದೆ. ನಗರಾಭಿವೃದ್ಧಿ ಇಲಾಖೆಯಿಂದ ಈಗಾಗಲೇ ಕಟ್ಟಡಗಳ ಮೇಲ್ಛಾವಣಿಯಿಂದ ಮಳೆ ನೀರನ್ನು ಸಂಗ್ರಹ ಮಾಡುವುದಕ್ಕೆ ಕರಡು ಮಸೂದೆಯನ್ನು ಸಿದ್ಧಗೊಳಿಸಿದ್ದೇವೆ. ಬೆಂಗಳೂರು ನಗರಪಾಲಿಕೆ ಮತ್ತು ಹುಬ್ಬಳ್ಳಿ-ಧಾರವಾಡ ನಗರಪಾಲಿಕೆ ಈಗಾಗಲೇ ಈ ಸಂಬಂಧದಲ್ಲಿ ಕಾರ್ಯೋನ್ಮುಖವಾಗಿದೆ ಎನ್ನುವುದನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪುರಸಭೆ ಕಾಯ್ದೆಗೂ ತಿದ್ದುಪಡಿಯನ್ನು ತರುವುದಕ್ಕೂ ಗಮನವನ್ನು ಹರಿಸಿದ್ದೇವೆ. ಹಾಗೆಯೇ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಕುಡಿಯುವ ನೀರಿನ ಪರಿಣಾಮಕಾರಿ ನಿರ್ವಹಣೆಗೆ 'ಸುವರ್ಣ ಜಲ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2005-06 ನೇ ಸಾಲಿನಲ್ಲಿ ಸುಮಾರು 53 ಕೋಟಿ ರೂಪಾಯಿಗಳನ್ನು ಕೂಡ ಬಿಡುಗಡೆ ಮಾಡಲಾಗಿದೆ ಗ್ರಾಮಪಂಚಾಯಿತಿಗಳೂ ಕೂಡ ಮಳೆ ಸುಗ್ಗಿ ಕಾರ್ಯಕ್ರಮವನ್ನು ಜಾರಿಗೊಳಿಸುವಂತೆ ಪಂಚಾಯಿತಿಗಳ ಗಮನಕ್ಕೂ ತಂದಿದ್ದೇವೆ. ಮಳೆ ಸುಗ್ಗಿ ಕಾರ್ಯಕ್ರಮ ಅನುಸರಿಸುವ ಮನೆಗಳ ತೆರಿಗೆಯಲ್ಲಿ ಐದು ವರ್ಷಗಳ ಅವಧಿಗೆ ಶೇ. 20 ರಷ್ಟು ರಿಯಾಯಿತಿಯನ್ನು ನೀಡುವುದಕ್ಕೂ ಸರ್ಕಾರ ತೀರ್ಮಾನವನ್ನು ಮಾಡಿದೆ. ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ರಾಜ್ಯದ ಒಂದು ಸಾವಿರ ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗ ಹಾಗೂ ಬಡತನ ರೇಖೆಯ ಕೆಳಗಿನ ಕುಟುಂಬಗಳ ಇಪ್ಪತ್ತು ಕುಟುಂಬಗಳಿಗೆ ತಲಾ ಐದು ಸಾವಿರ ರೂಪಾಯಿಗಳ ಸಹಾಯಧನವನ್ನು ಕೊಡತಕ್ಕಂಥದ್ದಕ್ಕೂ ಸರ್ಕಾರ ತೀರ್ಮಾನವನ್ನು ಮಾಡಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 50 ರಷ್ಟು ಹಣವನ್ನು ಮಳೆ ಸುಗ್ಗಿ ಯೋಜನೆಗೆ ಬಳಸಿಕೊಳ್ಳಲಾಗುತ್ತದೆ. ರಾಜ್ಯದ ಸುಮಾರು 26 ಸಾವಿರ ಶಾಲೆಗಳಲ್ಲಿ ಮಳೆ ಸುಗ್ಗಿ ಕಾರ್ಯಕ್ರಮದ ಅನುಷ್ಠಾನಕ್ಕೆ ರಾಜ್ಯಸರ್ಕಾರ ಈಗಾಗಲೇ 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 2005-06 ನೇ ಸಾಲಿನಲ್ಲಿ 17 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು ಸುಮಾರು ಹನ್ನೊಂದುವರೆ ಸಾವಿರ ಶಾಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ. ಫ್ಲೋರೈಡ್ ಸಮಸ್ಯೆ ಎದುರಿಸುತ್ತಿರುವ ರಾಜ್ಯದ 60 ತಾಲ್ಲೂಕುಗಳಲ್ಲಿ ಭಾರತೀಯ ಕೃಷಿ ಕೈಗಾರಿಕಾ ಪ್ರತಿಷ್ಠಾನದ ಮೂಲಕ ಮಳೆ ಸುಗ್ಗಿ ಕಾರ್ಯಕ್ರಮ ಅನುಷ್ಠಾನಕ್ಕೆ ಈಗಾಗಲೇ 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೇ ಈ ಒಂದು ಕೆಳಕಂಡ ಪ್ರಮುಖ ಯೋಜನೆಗಳಡಿಯಲ್ಲಿ ವಿಶ್ವಬ್ಯಾಂಕ್ ನೆರವಿನ 508 ಕೋಟಿ

ರೂಪಾಯಿಗಳ ವೆಚ್ಚದಲ್ಲಿ ಜಲಸಂವರ್ಧನೆ ಯೋಜನೆಯಡಿಯಲ್ಲಿ ಎರಡು ಸಾವಿರ ಕೆರೆಗಳ ಪುನರುಜ್ಜೀವನಕ್ಕೂ ಕಾರ್ಯಕ್ರಮವನ್ನು ಹಿಂದಿನ ಸರ್ಕಾರದಲ್ಲಿ ಏನು ಪ್ರಾರಂಭವಾಗಿದೆ, ಅದನ್ನು ಮುಂದುವರೆಸಿಕೊಂಡು ಹೋಗತಕ್ಕಂಥದ್ದಕ್ಕೆ ಹೆಚ್ಚುವರಿ ಎರಡು ಸಾವಿರ ಕೆರೆಗಳನ್ನು ಪುನರುಜ್ಜೀವನಗೊಳಿಸುವುದಕ್ಕೆ 500 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾರ್ಯಕ್ರಮವನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಅದೇ ರೀತಿ ಗುಲ್ಬರ್ಗ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ 299 ಕೆರೆಗಳ ಪುನರುಜ್ಜೀವನಕ್ಕೆ 75 ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರ ಮಂಜೂರು ಮಾಡಿದೆ. ರಾಜ್ಯದ ಐದು ಜಿಲ್ಲೆಗಳಲ್ಲಿ 570 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿಶ್ವ ಬ್ಯಾಂಕ್ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೇ ಸುಮಾರು 250 ಕೋಟಿ ರೂ. ವೆಚ್ಚದಲ್ಲಿ ರಾಜ್ಯ ಹಾಗೂ ಕೇಂದ್ರದ ವಿವಿಧ ಜಲಾನಯನ ಕಾರ್ಯಕ್ರಮಗಳಡಿಯಲ್ಲಿ ಮಳೆ ಸುಗ್ಗಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರವಾಸದ್ಯೋಮದ ವಿಷಯದಲ್ಲಿ ಈಗಾಗಲೇ ಸುಮಾರು ಏಳು ಪ್ರವಾಸಿ ವೃತ್ತಗಳನ್ನು ಇವತ್ತು ಗುರುತಿಸುವುದರ ಮುಖಾಂತರ ಬೆಳಗಾವಿ ವೃತ್ತ ಮಡಿಕೇರಿ ವೃತ್ತ, ಬಿಜಾಪುರ ವೃತ್ತ, ಮೈದಾನ ಪ್ರದೇಶ ವೃತ್ತ, ದಕ್ಷಿಣ ವೃತ್ತ, ದಕ್ಷಿಣ ವೃತ್ತ–2, ಕರಾವಳಿ ವೃತ್ತ ಈ ರೀತಿ ಏಳು ವೃತ್ತಗಳ ಮುಖಾಂತರ ಹಲವಾರು ಸ್ಥಳಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಈಗಾಗಲೇ ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದೇವೆ. ಕೆಯುಐಡಿಎಫ್‌ಸಿ ವತಿಯಿಂದ 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬಾದಾಮಿ ಪಟ್ಟಣವನ್ನು ಅಭಿವೃದ್ಧಿಪಡಿಸುವಂಥ ಕೆಲಸಕ್ಕೆ ಚಾಲನೆಯನ್ನು ಕೊಡುತ್ತಿದ್ದೇವೆ. ಹಂಪಿ, ಕಾರವಾರ, ಗೋಕರ್ಣಗಳಲ್ಲಿ ತ್ರಿತಾರಾ, ಪಂಚತಾರಾ ಹೋಟೆಲ್‌ಗಳನ್ನು ಸ್ಥಾಪಿಸಲು ಖಾಸಗಿ ಬಂಡವಾಳಕ್ಕೂ ಕೂಡ ಆಹ್ವಾನವನ್ನು ಕೊಟ್ಟಿದ್ದೇವೆ. ಹಂಪಿ ಮತ್ತು ಮಜಲಿ ಜಂಟಿ ವಲಯದಲ್ಲಿ ಹೋಟೆಲ್ ಸ್ಥಾಪಿಸುವ ಉದ್ದೇಶ ಇದೆ. ಹಾಗೂ ವರ್ಷದಲ್ಲಿ ಮಾನ್ಯ ರಾಷ್ಟ್ರಪತಿಗಳ ಮಾರ್ಗದರ್ಶನದ ಮೇರೆಗೆ ಈ ಸರ್ಕಾರ ಇನ್ನೂ ಹೆಚ್ಚಿನ ಒಂದು ಆದ್ಯತೆಯನ್ನು ಕೊಡುವುದಕ್ಕೆ ಹಾಗೂ ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾಂ, ಬಿಜಾಪುರ, ಹೊಸಪೇಟೆಗಳಲ್ಲಿ ಹೊಸ ವಿಮಾನ ನಿಲ್ದಾಣಗಳ ಸ್ಥಾಪನೆಗೂ ನಾವು ಚಾಲನೆ ಕೊಡುವುದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. 2006 ಮೇ ತಿಂಗಳಲ್ಲಿ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕೆಗಳ ಒಕ್ಕೂಟಗಳ ಸಹಯೋಗದಲ್ಲಿ ಮೈಸೂರಿನಲ್ಲಿ 'ಕರ್ನಾಟಕ ಟೂರಿಸಂ ಎಕ್ಸ್‌ಪೋ 2006'ವನ್ನು ಆಯೋಜಿಸಿ ರಾಜ್ಯದ ಪ್ರವಾಸೋದ್ಯಮ ಪರಂಪರೆ ಮತ್ತು ರಾಜ್ಯದ ಸಂಸ್ಕೃತಿಯ ಪರಿಚಯವನ್ನು ಇವತ್ತು ಮಾಡಿಕೊಡುವುದಕ್ಕೂ ಕಾರ್ಯಕ್ರಮವನ್ನು ನಾವು ನಿರೂಪಿಸಿದ್ದೇವೆ. ಹಂಪಿ ರಕ್ಷಣೆಗೆ 209 ಕೋಟಿ ರೂಪಾಯಿಗಳ ನೆರವು ನೀಡಲು ಜಪಾನ್‌ನ ಅಂತರರಾಷ್ಟ್ರೀಯ ಸಹಕಾರ ಬ್ಯಾಂಕ್ ಮುಂದೆ ಬಂದಿದೆ. ಇದರಿಂದ ಹಂಪಿಯಲ್ಲಿ ಧ್ವನಿ, ಬೆಳಕು ವ್ಯವಸ್ಥೆ ರಸ್ತೆ ಹಾಗೂ ಹೊಸ ವಿಮಾನ ನಿಲ್ದಾಣ ಅಭಿವೃದ್ಧಿಗೂ ಸಹಾಯವಾಗತಕ್ಕದ್ದಕ್ಕೆ ಅನುಕೂಲಗಳಾಗುತ್ತದೆ ಎನ್ನುವ ವಿಷಯವನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ರಾಜಸ್ಥಾನ ಮತ್ತು ಮಹಾರಾಷ್ಟ್ರಗಳಲ್ಲಿರುವಂತೆ ಶ್ರೀಮಂತ ಪ್ರವಾಸಿಗರಿಗೆ ವೈಭವಯುತ ಗಾಲಿಗಳ ಮೇಲೆ ಅರಮನೆ ಯೋಜನೆ ಜಾರಿಗೊಳಿಸಲು 32 ಕೋಟಿ ರೂಪಾಯಿಗಳ ವೆಚ್ಚವಾಗಲಿದೆ. ರಾಜ್ಯದ ಪಾಲಿನ 16 ಕೋಟಿ ರೂಪಾಯಿಗಳನ್ನು ಇದಕ್ಕೆ ನೀಡಲಾಗುವುದು. ಭಾರತ ಸರ್ಕಾರ ಜೋಗ್ ಜಲಪಾತ ಅಭಿವೃದ್ಧಿ, ಬನ್ನೇರುಘಟ್ಟ ಜೈವಿಕ ಉದ್ಯಾನದ ಅಭಿವೃದ್ಧಿ, ಕರಾವಳಿ ಪ್ರವಾಸೋದ್ಯಮ

ಅಭಿವೃದ್ಧಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮಹಾಕೂಟದ ಅಭಿವೃದ್ಧಿ, ಚಿಕ್ಕಮಗಳೂರು, ಬಂಡೀಪುರ ಮತ್ತು ಕೊಡಗಿನಲ್ಲಿ ವನ್ಯಜೀವಿ ಪ್ರವಾಸೋದ್ಯೋಮ ಅಭಿವೃದ್ಧಿಗೆ 34 ಕೋಟಿ ರೂ.ಗಳ ಮಂಜೂರಾತಿಯನ್ನೇನು ಕೊಟ್ಟಿದೆ, ಹಿಂದಿನ ಸರ್ಕಾರವೇ ಈ ಒಂದು ಕೆಲಸವನ್ನು ಮಾಡುವುದಕ್ಕೆ ಚಾಲನೆಯನ್ನೇನು ಕೊಟ್ಟಿದೆ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವು ಸಧ್ಯದಲ್ಲಿಯೇ ಕೆಲಸಗಳನ್ನು ಪ್ರಾರಂಭಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಇವತ್ತು ಸರ್ಕಾರಿ ವಲಯದ ಪರಿಸರ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಸಂಸ್ಥೆಯನ್ನು ಇವತ್ತು ಗುರುತಿಸಲಾಗಿದೆ. ಅದಕ್ಕೂ ಇವತ್ತು ಪ್ರೋತ್ಸಾಹವನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಹಾಲಿ ಜಾರಿಯಲ್ಲಿರುವಂತಹ ಪ್ರವಾಸೋದ್ಯಮ ನೀತಿ–2007ಕ್ಕೆ ಏನು ಅಂತ್ಯಗೊಳಿಸಿದೆ, ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಆದ್ಯತೆಯ ಮೇಲೆ ಅಭಿವೃದ್ಧಿಪಡಿಸಲು ಪೂರಕವಾದ ಹೊಸ ನೀತಿಯನ್ನು ರೂಪಿಸಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿ ಬೆಂಗಳೂರು ನಗರದಲ್ಲಿ ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್, ವಿಶೇಷವಾಗಿ ಪ್ರೇಕ್ಷಣೀಯ ಸ್ಥಳಗಳಾಗಿದ್ದು ಈ ಎರಡು ಪಾರ್ಕ್‌ಗಳ ವಿಷಯದಲ್ಲಿ ದೇಶ ವಿದೇಶಗಳಿಂದಲೂ ಪ್ರವಾಸಿಗರನ್ನು ಆಕರ್ಷಣೆ ಮಾಡುತ್ತಿದ್ದು ಇಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸತಕ್ಕ ಕಾರ್ಯಕ್ರಮವನ್ನು ಕೊಡತಕ್ಕದ್ದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. ಹಾಗೂ ಹೊಸದಾಗಿ ಈ ರಾಜ್ಯದ ಸುವರ್ಣ ಕರ್ನಾಟಕ ಮಹೋತ್ಸವದ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ವಿಧಾನಸೌಧ ಮತ್ತು ಸುತ್ತಮುತ್ತ ನಮ್ಮ ರಾಜ್ಯದಲ್ಲಿರತಕ್ಕಂಥ. ಎಲ್ಲಾ ಜಿಲ್ಲೆಗಳಲ್ಲಿರತಕ್ಕಂಥ ಜಾನಪದ ಕಲೆ ಇರಬಹುದು, ಸಂಸ್ಕೃತಿಯನ್ನು ಮತ್ತು ಬಯಲು ಕಲಾವಿದರಿಗೆ ಇವತ್ತು ಉತ್ತೇಜನ ಕೊಡತಕ್ಕದ್ದಕ್ಕೆ ಕೆಲವು ಹೊಸ ಕಾರ್ಯಕ್ರಮವನ್ನು ಈ ವರ್ಷ ಪ್ರಾರಂಭ ಮಾಡುವುದಕ್ಕೆ ಚಾಲನೆ ಕೊಡುತ್ತೇವೆಂದು ಕೂಡ ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಈ ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ತಂತ್ರಜ್ಞರನ್ನು ಸಜ್ಜುಗೊಳಿಸುವ ವಿಷಯದಲ್ಲಿ ಸರ್ಕಾರದಲ್ಲಿರತಕ್ಕ ನ್ಯೂನತೆಗಳ ಬಗ್ಗೆ, ಹಿರಿಯ ಸದಸ್ಯರುಗಳು ಏನು ಗಮನಕ್ಕೆ ತಂದಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು 2010ರೊಳಗೆ ಪ್ರಸ್ತುತ ಕೆಲಸ ಮಾಡುತ್ತಿರುವ ನರ್ಸಿಂಗ್ ಶಾಲೆಗಳನ್ನು ನರ್ಸಿಂಗ್ ಕಾಲೇಜುಗಳಾಗಿ ಮೇಲ್ದರ್ಜೆಗೆ ಏರಿಸತಕ್ಕದ್ದಕ್ಕೆ ಮತ್ತು ಇವತ್ತು ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಐದು ವರ್ಷಗಳಲ್ಲಿ ನೂರು ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ಏರಿಸತಕ್ಕಂಥ ಕಾರ್ಯಕ್ರಮಕ್ಕೆ ಚಾಲನೆ ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಉದ್ದೇಶಿತ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅರೆ ವೈದ್ಯಕೀಯ ಶಿಕ್ಷಣ ಜಾರಿಗೊಳಿಸಲಾಗುವುದು. ಈ ಎಲ್ಲಾ ವಿಷಯಗಳ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ, ಸೂಕ್ತವಾದ ನಿರ್ಧಾರಗಳನ್ನು ಪ್ರಕಟಗೊಳಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಜ್ಞಾನಾಧಾರಿತ ಉತ್ಪನ್ನಗಳ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕ ವಿಚಾರ ಇದೆ.....

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನರ್ಸಿಂಗ್ ವಿಚಾರದಲ್ಲಿ ಪ್ರೆಸಿಡೆಂಟ್ ಆಫ್ ಇಂಡಿಯಾದವರು ಏನು ಹೇಳಿದ್ದಾರೆ, ಅದರ ಬಗ್ಗೆ ತಾವು ಈವತ್ತು ಒಂದು ಪಾಲಿಸಿ ಅನೌನ್ಸ್‌ಮೆಂಟನ್ನು ಮಾಡಬೇಕಾಗುತ್ತದೆ. ಈ ಸೀಟುಗಳನ್ನು ಹೆಚ್ಚು ಮಾಡುವ ಬಗ್ಗೆ ನಮ್ಮ ಸರ್ಕಾರದ ಸ್ಟ್ಯಾಂಡ್ ಏನು ಎಂಬುದನ್ನು ಹೇಳಬೇಕಾಗುತ್ತದೆ. ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್‌ಗೆ ಮೀಟ್ ಮಾಡಿ ಅವರನ್ನು

ಟ್ರೈನ್ ಮಾಡಿ ಕಳುಹಿಸಿಕೊಟ್ಟರೆ ಅವರಿಗೆ ಉದ್ಯೋಗಾವಕಾಶಗಳು ಸಿಗುತ್ತದೆ ಎಂದು ಅವರು ಬಯಕೆಯನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ಜಾರಿಗೊಳಿಸುವ ವಿಚಾರದಲ್ಲಿ ಸರ್ಕಾರದ ಸ್ಟ್ಯಾಂಡ್ ಏನೆಂಬುದನ್ನು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನರ್ಸಿಂಗ್ ಶಾಲೆಗಳಲ್ಲಿ ಟ್ರೈನಿಂಗ್ ಕೊಡತಕ್ಕದ್ದಕ್ಕೆ ಇವತ್ತು ಹಾಸಿಗೆಗಳ ಕೊರತೆ ಇದೆ. ಸುಮಾರು 1.5 ಲಕ್ಷ ಕಡಿಮೆ ಇದೆ. ಕಾಲೇಜಸ್ ವಿಚಾರದಲ್ಲೂ ನಾನು ಅದನ್ನೇ ಹೇಳಿದೆ. ಇವತ್ತು ಹೊಸದಾಗಿ ಸಚಿವ ಸಂಪುಟದಲ್ಲಿ ಕೆಲವು ವಿಷಯಗಳನ್ನು ಚರ್ಚೆ ಮಾಡಿ ಇದನ್ನು ಉತ್ತಮಪಡಿಸುವುದಕ್ಕೆ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ನಾವು ಪ್ರಕಟ ಮಾಡುತ್ತೇವೆ. ಜ್ಞಾನಾಧಾರಿತ ಉತ್ಪನ್ನಗಳ ಕೈಗಾರಿಕೆಗಳ ವಿಷಯದಲ್ಲಿ, ಹೇಳಬೇಕಾದರೆ, ಏನು ಜ್ಞಾನಾಧಾರಿತ ಉದ್ದಿಮೆಗಳಲ್ಲಿ ಮೂಲಭೂತವಾಗಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಗಳು ಏನು ಇವೆ, ಐಟಿ ಕಂಪನಿಗಳ ಹೂಡಿಕೆ ಬೆಂಗಳೂರು ನಗರದಲ್ಲಿ ಇವತ್ತೇನು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಕಳೆದ ವರ್ಷ ಸುಮಾರು 27 ಸಾವಿರ ಕೋಟಿ ರೂಪಾಯಿಗಳಷ್ಟು ಐಟಿ ಕ್ಷೇತ್ರದ ರಫ್ತು ಆಗಿದೆ. ಈ ವರ್ಷ ಅದನ್ನು ಕನಿಷ್ಟ 35 ಸಾವಿರ ಕೋಟಿ ರೂಪಾಯಿಗಳಿಗೆ ಏರತಕ್ಕಂಥ ಒಂದು ನಿರೀಕ್ಷೆ ಇದೆ. ಭಾರತದಲ್ಲಿನ ಒಟ್ಟಾರೆ ಜೈವಿಕ ತಂತ್ರಜ್ಞಾನದ ಹೂಡಿಕೆಯಲ್ಲಿ ಶೇಕಡಾ 50 ರಷ್ಟು ಕರ್ನಾಟಕದ ಪಾಲು ಇದೆ. ರಾಜ್ಯದಲ್ಲಿ 131 ಜೈವಿಕ ತಂತ್ರಜ್ಞಾನ ಕಂಪನಿಗಳು ಕಾರ್ಯ ನಿರ್ವಹಿಸುತ್ತಿದ್ದು, ಅವುಗಳ ಪೈಕಿ 128 ಕಂಪನಿಗಳು ಬೆಂಗಳೂರಿನಲ್ಲಿವೆ. ಪ್ರತಿ ತಿಂಗಳಿಗೆ ತಲಾ ಎರಡು ಜೈವಿಕ ತಂತ್ರಜ್ಞಾನ ಕಂಪನಿಗಳು ಬೆಂಗಳೂರಿಗೆ ಬರುತ್ತಿವೆ. ಭಾರತ ಸರ್ಕಾರದ ಸಹಯೋಗದೊಂದಿಗೆ ಜೈವಿಕ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು ಕೆಲವೇ ವಾರಗಳಲ್ಲಿ ಕಾರ್ಯಾರಂಭ ಆಗಲಿದೆ. ಆ ಮೂಲಕ ಹೆಚ್ಚಿನ ಆದ್ಯತೆಯನ್ನು ಬಿಟಿ ಕ್ಷೇತ್ರಕ್ಕೂ ನೀಡಲಾಗುತ್ತದೆ. ಆದರೆ ಈ ಬಿಟಿ ಕ್ಷೇತ್ರದ ವಿಷಯದಲ್ಲಿ ಹಿರಿಯ ಸದಸ್ಯರಾದಂತಹ ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರು ಏನು ಕೆಲವು ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ, ಆ ವಿಷಯದ ಬಗ್ಗೆಯೂ ನಾವು ಗಂಭೀರವಾಗಿ ಗಮನ ಹರಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರಿನ ಹೊರಗಡೆ ಐಟಿ;ಬಿಟಿ ಕೈಗಾರಿಕೆಗಳಿಗೆ ಉತ್ತೇಜನ ಕೊಡಿಸತಕ್ಕದ್ದಕ್ಕೆ ಮೈಸೂರು ಮತ್ತು ಮಂಗಳೂರಿನಲ್ಲಿ ತಲಾ ಒಂದು ಸಾವಿರ ಎಕರೆ ಮತ್ತು ಡಾಬಸ್‌ಪೇಟೆ, ಬಿಡದಿ ಹಾಗೂ ಯಲಹಂಕದ ಸುತ್ತಮುತ್ತದ 500 ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುವುದು. ಬಿಎಸ್‌ಎಟಿ ಕಾರ್ಯಕ್ರಮದ ಅಡಿ ಬಿಪಿಓ ವಲಯದ ಕುಶಲ ಮಾನವ ಸಂಪನ್ಮೂಲ ಅಭಿವೃದ್ಧಿಗೆ ರಾಜ್ಯ ಮಾಹಿತಿ ತಂತ್ರಜ್ಞಾನ ಇಲಾಖೆ ಮೂರು ಕೋಟಿ ರೂಪಾಯಿ ವೆಚ್ಚದ ಯೋಜನೆ ಒಂದನ್ನು ಈಗಾಗಲೇ ಸಿದ್ಧಪಡಿಸಿದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ರಾಜ್ಯ ಸರ್ಕಾರ ಸುಮಾರು 1400 ಎಕರೆ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪನೆ ಮಾಡುವುದಕ್ಕೂ ತೀರ್ಮಾನವನ್ನು ಮಾಡಿದ್ದೇವೆ. ಗ್ರಾಮೀಣ ಪ್ರದೇಶದ ಯುವಕರಿಗೆ ಮಾಹಿತಿ ತಂತ್ರಜ್ಞಾನ ಬಳಕೆ ತರಬೇತಿ ನೀಡಲು 299 ಯುವ ಡಾಟ್ ಕಾಂ. ಕೇಂದ್ರಗಳಿಗೆ ವಿಶೇಷ ಸೌಲಭ್ಯವನ್ನು ಕಲ್ಪಿಸಲಾಗುವುದು. ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿ 5600 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಜ್ಞಾನಕೇಂದ್ರಗಳನ್ನು ತೆರೆಯಲಾಗುವುದು. ಈ ಕೇಂದ್ರಗಳು ರೈತರಿಗೆ ಹವಾಮಾನ, ಮಣ್ಣಿನ ಪರಿಸ್ಥಿತಿ, ಕೃಷಿ ಉತ್ಪನ್ನಗಳ ಬೆಲೆ ಮೊದಲಾದ ಮಾಹಿತಿಯನ್ನು ಒದಗಿಸಲಿವೆ. ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ವಲಯದಲ್ಲಿ

ಹೂಡಿಕೆ ಹೆಚ್ಚುತ್ತಿದ್ದು, ಕಳೆದ ವರ್ಷ 27 ಸಾವಿರ ಕೋಟಿ ರೂಪಾಯಿ ಮೌಲ್ಯದ ತಂತ್ರಾಂಶ ರಫ್ತಾಗಿದ್ದು ಈ ವರ್ಷ 35 ಸಾವಿರ ಕೋಟಿ ರೂಪಾಯಿಗೆ ಹೆಚ್ಚುವ ಸಂಭವ ಇದೆ. ಸುಸ್ಥಿರ ಬೆಳವಣಿಗೆಗೆ ಸಂಪರ್ಕ ಜಾಲದ ಕಲ್ಪನೆ ರಾಜ್ಯದಲ್ಲಿ ವೈಡ್ ಏರಿಯಾ ನೆಟ್‌ವರ್ಕ್ ಸ್ಥಾಪಿಸಲಾಗಿದೆ. ಪ್ರತಿ ಸೆಕೆಂಡ್‌ಗೆ ಜಿಲ್ಲಾ ಮಟ್ಟದಲ್ಲಿ 8 ಮೆಗಾ ಬೈಟ್, ತಾಲ್ಲೂಕ್‌ನಲ್ಲಿ ಎರಡು ಮೆಗಾಬೈಟ್ ಹಾಗೂ ತಾಲ್ಲೂಕಿನಿಂದ ಹಳ್ಳಿಗಳಿಗೆ 64 ಕಿಲೋ ಬೈಟ್ ಸಾಮರ್ಥ್ಯ ಇದರಲ್ಲಿ ಲಭ್ಯ ಇದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೂ ಮತ್ತು ರಾಷ್ಟ್ರಪತಿಗಳ ಒಂದು ಸಲಹೆಗೂ ಏನೊಂದು ಕೆಲವು ಭಿನ್ನಾಭಿಪ್ರಾಯಗಳಿವೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಏನು ಕಾರ್ಯಕ್ರಮ ನಿರೂಪಿಸಬೇಕು ಎಂದು ಹೇಳುತ್ತಾರೆ. ಆ ಒಂದು ಕಾರ್ಯಕ್ರಮವನ್ನು ರೂಪಿಸುವಾಗ ಕೇಂದ್ರ ಸರ್ಕಾರದ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಮುಂದುವರಿಸುತ್ತೇವೆಂದು ಹೇಳಲಿಕ್ಕೆ ಬಯಸುತ್ತೇನೆ. ಈಗಾಗಲೇ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ಎಜುಸ್ಯಾಟ್ ಟೆಲಿ ಎಜುಕೇಶನ್ ಕಾರ್ಯಕ್ರಮದ ಅಡಿಯಲ್ಲಿ ಇವತ್ತು ಉಪಗ್ರಹ ಮತ್ತು ಟೈಲ್ ಸ್ಟೇಲ್ ತಂತ್ರಜ್ಞಾನವನ್ನು ಬಳಸಿಕೊಂಡು, ರಾಜ್ಯದ ಸುಮಾರು 120 ಇಂಜಿನಿಯರಿಂಗ್ ಕಾಲೇಜುಗಳ ನಡುವೆ ಸಂಪರ್ಕ ಜಾಲ ಏರ್ಪಡಿಸಿ ಆನ್‌ಲೈನ್ ಶಿಕ್ಷಣ, ಆನ್‌ಲೈನ್ ಪರೀಕ್ಷೆ ಮಾಹಿತಿ ಹಂಚಿಕೆ ಹಾಗೂ ಪರಿಣಾಮಕಾರಿ ಆಡಳಿತಕ್ಕೆ ಅನುವು ಮಾಡಿಕೊಡಲಾಗಿದೆ. ಗ್ರಾಮೀಣ ಸಂಮೃದ್ಧಿಗೆ 'ಪುರ' ಯೋಜನೆ ಜಾರಿ, ಈ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದ ಸುಮಾರು 23 ಪಟ್ಟಣಗಳನ್ನು ಪುರ ಯೋಜನೆ ಅಡಿಯಲ್ಲಿ ಸೇರಿಸತಕ್ಕದ್ದಕ್ಕೆ ಭಾರತ ಸರ್ಕಾರ ಇವತ್ತು ಗುರುತಿಸಿದೆ. ಅವುಗಳಲ್ಲಿ ಪ್ರಮುಖವಾಗಿ, ಬಂಟ್ವಾಳ, ಬಸವ ಕಲ್ಯಾಣ, ಚಳ್ಳಕೆರೆ, ಚಾಮರಾಜನಗರ, ಹರಿಹರ, ಹಾವೇರಿ, ಇಂಡಿ, ಕಂಪ್ಲಿ, ಕುಂದಾಪುರ, ಮಡಿಕೇರಿ ಹೀಗೆ ಹಲವಾರು ಸುಮಾರು 23 ಪಟ್ಟಣಗಳನ್ನು ಸೇರಿಸಿದ್ದೇವೆ. ಹಣಕಾಸು ಅನುದಾನಕ್ಕಾಗಿ 10 ಗ್ರಾಮಗಳ ಸವಿವರ ಯೋಜನಾ ವರದಿಯನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಈ ಯೋಜನೆ ಅಡಿ ಸಂಪರ್ಕ ರಸ್ತೆ ಸಾರಿಗೆ, ಕುಡಿಯುವ ನೀರು ಸರಬರಾಜು, ನೈರ್ಮಲ್ಯ ವ್ಯವಸ್ಥೆ, ದೂರವಾಣಿ ಸಂಪರ್ಕ, ವಸತಿ, ವಾಣಿಜ್ಯ ಮೂಲ ಸೌಕರ್ಯಗಳು, ಶಿಕ್ಷಣ, ಶೈಕ್ಷಣಿಕ ತರಬೇತಿ ಮತ್ತು ಮನರಂಜನಾ ಮೂಲ ಸೌಕರ್ಯಗಳ ಸೃಜನೆ ಆಗಬೇಕಾಗಿದೆ. ಈ ಒಂದು ಯೋಜನಾ ವರದಿಯನ್ನು ಕಾರ್ಯಗತಗೊಳಿಸಲು 8ರಿಂದ 10 ಕೋಟಿ ರೂಪಾಯಿಯಷ್ಟು ಖರ್ಚಾಗಬಹುದು ಎಂದು ಅಂದಾಜಿಸಲಾಗಿದೆ. ಇದಕ್ಕೆ ಭಾರತ ಸರ್ಕಾರದ ಹಣಕಾಸಿನ ಸಹಾಯವೂ ಬೇಕಾಗಿದೆ. ಪುರಾ ಯೋಜನೆ ಬಗ್ಗೆ ಭಾರತ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸುತ್ತಿದ್ದೇವೆ. ಅಭಿವೃದ್ಧಿ ವಾಹಕಗಳನ್ನು ಸಜ್ಜುಗೊಳಿಸುವುದು. ತರಬೇತಿ ಹೊಂದಿದ ಸುಶಿಕ್ಷಿತ ಹಾಗೂ ಕೌಶಲ್ಯಪೂರ್ಣ ಮಾನವ ಸಂಪನ್ಮೂಲ ಸೃಜನೆಗೆ ಪೂರಕವಾಗಿ ಸೂಕ್ತ ತರಬೇತಿಯನ್ನು ಕಲ್ಪಿಸಲು ರಾಜ್ಯದ ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ತರಬೇತಿ ಸಂಸ್ಥೆಗಳಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸಲಾಗುವುದು. ಬಿಎ ಮತ್ತು ಬಿಎಸ್ಸಿಯಂತಹ ಸಾಮಾನ್ಯ ಪದವಿ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಉದ್ಯೋಗಕ್ಕೆ ಪೂರಕವಾದ ಕೌಶಲ್ಯ ಮತ್ತು ಸ್ವಉದ್ಯೋಗ ಕೈಗೊಳ್ಳಲು ಶಕ್ತರಾಗುವಂತೆ ಹೆಚ್ಚುವರಿಯಾಗಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭ ಮಾಡಲಾಗುವುದು. ಈ ಒಂದು ಕಾರ್ಯಕ್ರಮದ ಜೊತೆಗೆ ಇವತ್ತು ಡ್ರೈವರ್ ಕೆಲಸ ಮಾಡತಕ್ಕವರು, ದೋಬಿ ಕೆಲಸ ಮಾಡತಕ್ಕವರು

ಹಾಗೂ ಇವತ್ತು ಸೆಕ್ಯುರಿಟಿ ಗಾರ್ಡ್‌ಗಳ ಅವಶ್ಯಕತೆ ಏನು ಇದೆ. ಈ ಒಂದು ವಿಷಯದಲ್ಲಿ ನಾವು ಹೊಸದಾಗಿ ಎಸ್‌ಎಸ್‌ಎಲ್‌ಸಿ ಮತ್ತು ಎಂಟನೇ ತರಗತಿ ಓದಿರತಕ್ಕಂಥ ವಿದ್ಯಾರ್ಥಿಗಳಿಗೆ ಒಂದು ಕಲ್ಚರನ್ನು ಕಲಿಸತಕ್ಕದ್ದಕ್ಕೆ ಯಾವುದಾದರೂ ಒಂದು ಕಂಪನಿ ಅಥವಾ ಯಾವುದಾದರೂ ಒಂದು ಮನೆಯಲ್ಲಿ ಕೆಲಸ ಮಾಡಬೇಕಾದರೆ ಆ ಒಂದು ಸಭ್ಯತೆಯಿಂದ ನಡೆಯತಕ್ಕಂಥ ಒಂದು ಶಿಸ್ತಿನ ರೀತಿಯಲ್ಲಿ ಅವರು ತಮ್ಮ ನಡವಳಿಕೆಗಳನ್ನು ಕಲಿತುಕೊಳ್ಳತಕ್ಕಂಥಾದ್ದಕ್ಕೆ ಈ ವರ್ಷ ಹೊಸದಾಗಿ ನಾವು 8ನೇ ಕ್ಲಾಸ್‌ನವರೆಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಓದಿರತಕ್ಕವರಿಗೆ 3 ರಿಂದ 4 ತಿಂಗಳು ತರಬೇತಿ ಕೊಡತಕ್ಕ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ರಾಷ್ಟ್ರಪತಿಗಳು ರಾಜ್ಯಕ್ಕೆ ನೀಡಿರತಕ್ಕ 16 ಗುರಿಗಳುಳ್ಳ ವಿಶಿಷ್ಟ ಅಭಿವೃದ್ಧಿ ಮಾದರಿಯನ್ನು ಹಂತಹಂತವಾಗಿ ಅನುಷ್ಠಾನಗೊಳಿಸತಕ್ಕದ್ದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಈ ಸಂದರ್ಭದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಕೆಲವು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ನಗರ ಪ್ರದೇಶಕ್ಕೂ ನಾವು ಹೆಚ್ಚಿನ ಆದ್ಯತೆಯನ್ನು ಕೊಡುವುದರ ಜೊತೆಗೆ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆಯನ್ನು ಕೊಡತಕ್ಕದ್ದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಮುಂದಿನ ಬಜೆಟ್ ದಿನ ಅಂದರೆ 20ನೇ ತಾರೀಖು ಈ ಸರ್ಕಾರದ ಕಾರ್ಯಕ್ರಮಗಳ ವಿಷಯದಲ್ಲಿ ಕೆಲವು ಗೊಂದಲಗಳು ಏನು ಇವೆ...... ಅನುಮಾನಗಳೇನಿದೆ, ಈ ಸರ್ಕಾರಕ್ಕೆ ಯಾವುದೇ ರೀತಿಯ ಗುರಿ ಇಲ್ಲವೆಂಬ ಮಾತುಗಳೇನಿವೆ. ಆ ಒಂದು ಅನುಮಾನಗಳಿಗೆ 20ನೇ ತಾರೀಖಿನಂದು ನಮ್ಮ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಬಜೆಟ್ ಮಂಡಿಸುವುದರ ಮೂಲಕ ಉತ್ತರವನ್ನು ಸದನದಲ್ಲಿ ಅವೊತ್ತು ಕೊಡಲಿದ್ದಾರೆ. ಇವೊತ್ತು ತಮ್ಮ ಮುಖಾಂತರ ಸದನದ ಎಲ್ಲಾ ಸದಸ್ಯರುಗಳ ಗಮನಕ್ಕೆ ತರುವುದೇನೆಂದರೆ, ಮಾನ್ಯ ರಾಷ್ಟ್ರಪತಿಗಳು ನೀಡಿರುವ 11 ಅಂಶಗಳ ಸೂತ್ರಗಳ ಬಗ್ಗೆ ಚರ್ಚೆ ಮಾಡುವುದರ ಮೂಲಕ ಅವರಿಗೆ ಗೌರವ ಸಲ್ಲಿಸತಕ್ಕಂಥ ಕೆಲಸವನ್ನು ಇವೊತ್ತು ನಾವು ಮಾಡಿದ್ದೇವೆ. ಈ ಸಂದರ್ಭದಲ್ಲಿ ಎಲ್ಲಾ ಸದಸ್ಯರುಗಳು ಬಹಳ ಗೌರವ ಸಲ್ಲಿಸಿದ್ದಾರೆ. ಇವೊತ್ತು ಈ ಕಾರ್ಯಕ್ರಮ ಮಾಡುವುದರ ಮೂಲಕ ಒಂದು ಹೊಸ ಸಂಪ್ರದಾಯವನ್ನು ಸೃಷ್ಟಿಸಿ, ರಾಷ್ಟ್ರಪತಿಗಳ ಭಾವನೆಗಳನ್ನು ಇವೊತ್ತು ಈ ರಾಜ್ಯದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಅಭಿವೃದ್ಧಿಗೆ ಒಂದು ಚಾಲನೆ ಕೊಡುವುದಕ್ಕೆ ಏನು ತೀರ್ಮಾನ ಮಾಡಿದ್ದೇವೆ, ಅದಕ್ಕಾಗಿ ನಿಮಗೆ ಮತ್ತೊಮ್ಮೆ ವಂದಿಸಿ, ಮಾನ್ಯ ರಾಷ್ಟ್ರಪತಿಗಳ ಭಾಷಣದ ಮೇಲಿನ ವಿಷಯದ ಬಗ್ಗೆ ಸದನದ ಗಮನ ಸೆಳೆಯುವುದರ ಮೂಲಕ ರಾಜ್ಯದ ಜನತೆಗೆ ಈ ಸರ್ಕಾರದ ಬದ್ಧತೆಯನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಕಳೆದ 5 ವರ್ಷಗಳಿಂದಲೂ ಬಿ.ಜಿ.ಎಂ.ಎಲ್.ನ ಸುಮಾರು 4 ಸಾವಿರ ಕಾರ್ಮಿಕರಿಗೆ ಸಂಬಳ ಇಲ್ಲ. ಅದರ ಬಗ್ಗೆ ಹೇಳಬೇಕು. ಇದು ಬಹಳ ಮುಖ್ಯವಾದ ವಿಷಯವಾಗಿದೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ

ಮುಖ್ಯಮಂತ್ರಿಗಳು ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನನ್ನ ವಿಚಾರಗಳನ್ನು ಪ್ರಸ್ತಾಪ ಮಾಡುವ ಕಾಲದಲ್ಲಿ ಕೆಲವು ಬೇಸಿಕ್ ಆದ ವಿಚಾರಗಳನ್ನು ಪ್ರಸ್ತಾಪ ಮಾಡಿದೆ. 2004ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಜನತಾ ದಳ(ಎಸ್) ಎರಡೂ ಪಕ್ಷಗಳೂ ಕೂಡಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಪ್ರಣಾಳಿಕೆ ತಯಾರಿಸುವ ಮೂಲಕ ಯಾವ ರೀತಿ ಸರ್ಕಾರ ನಡೆಸಬೇಕೆಂಬ ಬಗ್ಗೆ ಚಿಂತನೆ ಮಾಡಿದೆವು. ನಮ್ಮ ಹಿಂದಿನ ಉಪ ಮುಖ್ಯಮಂತ್ರಿಗಳು, ಅಲ್ಲಿ ಕುಳಿತಿದ್ದಾರೆ. 1963ರಲ್ಲಿ ಮೊದಲ ಬಾರಿಗೆ ರಾಷ್ಟ್ರಪತಿಗಳು ಬಂದು ಉದ್ದೇಶಿಸಿ ಮಾತನಾಡಿ ಹೋಗಿದ್ದಾರೆ. ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಆದ ನಂತರ ಈಗಿನ ಮಾನ್ಯ ರಾಷ್ಟ್ರಪತಿಗಳನ್ನೂ ಕೂಡ ನಾವು ಕರೆಸಿದ್ದು ಅವರು ಹಾಲಿ ಸಂಸದರು, ಶಾಸಕರು ಹಾಗೂ ಇತರ ಎಲ್ಲಾ ಗಣ್ಯವ್ಯಕ್ತಿಗಳನ್ನೂ ಉದ್ದೇಶಿಸಿ ಮಾತನಾಡಿದ್ದಾರೆ. ನಾನು ಏನು ಹೇಳಿದ್ದೇನೆಂದರೆ, ಇವೊತ್ತು President is a great philosopher. ದೇಶದಲ್ಲಿ ಯಾವ ರೀತಿ ಪ್ರತಿಯೊಂದು ರಾಜ್ಯವೂ ಮುಂದೆ ಹೋಗಬೇಕೆಂಬ ಬಗ್ಗೆ ಅವರು ಕನಸು ಕಾಣುತ್ತಿದ್ದಾರೆ. ಅವರು ಬಂದು ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದರು. ನಂತರ, ರಾಜಕೀಯ ಪರಿಸ್ಥಿತಿ ಬದಲಾವಣೆಯಾಯಿತು, ತಾವು ಬಂದಿದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ಇವೊತ್ತು ಎರಡೂ ಪಕ್ಷಗಳೂ ಸೇರಿಕೊಂಡು ಪ್ರಜಾಪ್ರಭುತ್ವದಲ್ಲಿ ಸರ್ಕಾರ ನಡೆಸಬೇಕಾದರೆ, ಒಂದು ತತ್ವ ಸಿದ್ಧಾಂತ ಆಧಾರದ ಮೇಲೆ ಹೋಗಬೇಕು. ಅದರ ಬಗ್ಗೆ ನಾವು ಕೊಶ್ಚನ್ ಮಾಡಿದ್ದೇವೆ. ಅದು ಯಾವಾಗ ಇರುವುದಿಲ್ಲವೋ, ತಾವು ಯಾವ ರೀತಿಯಾಗಿ ಕಾರ್ಯಾಚರಣೆಗೆ ತರುತ್ತೀರಿ ಎಂಬುದು ಒಂದು ಮಾತು. ನಾನು 11 ಅಂಶಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಅದು ಸಾಕಷ್ಟು ವಿವರವಾಗಿತ್ತು. ಎಲ್ಲರೂ ಚರ್ಚೆ ಮಾಡುತ್ತಿದ್ದರು. ಎರಡನೆಯದಾಗಿ, ಮೆಟ್ರೊ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. 1983ರಲ್ಲಿ ಸರ್ವೆ ಆಯಿತು. ಪ್ಲಾನಿಂಗ್ ಕಮಿಷನ್‌ನಿಂದ ಅಪ್ರೂವ್ ಆಯಿತು. ಇವೆಲ್ಲವೂ ಕೂಡ ಅದರ ಕತೆ ಇದೆ. ಯಾವಾಗಲೂ ಕೂಡ ನಾನು ಒಬ್ಬನೆ ಹೋಗಿ ಮಾತನಾಡುವ ಪ್ರವೃತ್ತಿ ಎಂದೂ ಬೆಳೆಸಿಕೊಂಡಿಲ್ಲ. ವಿರೋಧ ಪಕ್ಷಗಳ ಎಲ್ಲಾ ನಾಯಕರುಗಳ ಜತೆಗೂಡಿ ಪ್ರಧಾನಮಂತ್ರಿಗಳನ್ನು ಭೇಟಿಯಾಗಿದ್ದೇನೆ. ಗುಲಾಂ ನಬಿ ಆಜಾದ್ ಅವರೊಂದಿಗೆ ಒಂದು ದಿವಸ ಕಾಲ we had a detailed discussion ಮಾಡಿ, ಮತ್ತೆ ಮಾನ್ಯ ಜೈಪಾಲ್‌ರೆಡ್ಡಿ ಅವರು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆದಾಗಲೂ ಮಾತನಾಡಿದ್ದೇವೆ. ಆಗ ಗೇಜ್ ಬಗ್ಗೆ ಮಾತುಕತೆ ಆಗಿತ್ತು ಮಾನ್ಯ ಶರದ್ ಪವಾರ್ ಅಧ್ಯಕ್ಷತೆಯಲ್ಲಿದ್ದು. ತಾವು ಹೋಗಿದ್ದೀರಿ, ತಾವು ಮುಖ್ಯಮಂತ್ರಿಯಾದ ನಂತರ ಉಪಮುಖ್ಯಮಂತ್ರಿಗಳೂ ಸಹ ಹೋಗಿ ಪ್ರಸ್ತಾಪ ಮಾಡಿದ್ದಾರೆ. ಆದರೆ, ನಾನು ಏನು ಹೇಳಿದೆ ಎಂದರೆ, ನನಗೆ ಇರತಕ್ಕಂಥ ತಾಪತ್ರಯಗಳು ತಮಗಿಲ್ಲ. You are the luckiest Chief Minister ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ನನಗೆ ಗೊತ್ತು. I have been in the politics since 40 years and I know how to struggle and how to get it.ಅದು ಎಲ್ಲಾ ಕಡೆ ಮಾಡತಕ್ಕಂಥಾದ್ದು ಅಂತಿಮವಾಗಿ ಬಂದಿದೆ. ನಡೆಯುತ್ತಿದೆ. ಮತ್ತು ಅದರ ಬಗ್ಗೆ ತಮ್ಮ ಸ್ನೇಹಿತರೂ ಕೂಡ ಮೆಟ್ರೋ ಬಂದರೆ ಆತ್ಮಾಹುತಿ ಮಾಡಿಕೊಳ್ಳುವವರು ಕ್ಯಾಬಿನೆಟ್ ಮಂತ್ರಿಗಳಾಗಿದ್ದಾರೆ. ಅದು different issue. ತಾವು ಮಾಡುತ್ತಿದ್ದೀರಿ, ಒಪ್ಪುತ್ತೇನೆ. ಇವೊತ್ತು ಏನಾಗಿದೆ. ಇದರ ಬಗ್ಗೆ ಮಾನ್ಯ ರಾಷ್ಟ್ರಪತಿಯವರು ಏನು ಹೇಳಿದ್ದಾರೆ. ಅದನ್ನು ಅನುಷ್ಠಾನಕ್ಕೆ

ತರತಕ್ಕಂಥ ರೀತಿಯಲ್ಲಿ ಬಜೆಟ್‌ನಲ್ಲಿ ಹಣವನ್ನು ಒದಗಿಸಬೇಕಾಗುತ್ತದೆ. ನಾವು ಪ್ಲಾನ್ ಡಿಸ್‌ಕಶನ್‌ಗೆ ಹೋದಾಗ ಇದಕ್ಕಾಗಿ 75 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದೆವು. We have requested the planning Commission ಅದು ಎಲ್ಲಾ ಆಗಿದೆ. ಇವೆಲ್ಲಾ ಒಂದೇ ವರ್ಷದಲ್ಲಿ ಆಗತಕ್ಕಂಥಾದ್ದಲ್ಲ. ತಾವು ಮಾಡತಕ್ಕಂಥ ಇಚ್ಛಾಶಕ್ತಿ ತೋರಿಸಿದ್ದೀರಿ. That requires a political will. ಯಾವಾಗಲೂ ಕೂಡ democratic setupನಲ್ಲಿ ಅದು ಬೇಕು. You have shown. We are very happy. ನಿಮಗೆ Age ಇದೆ. ನಾವೇನು ಹೇಳುತ್ತಿದ್ದೇವೆಂದರೆ, 20ನೇ ತಾರೀಖಿನಂದು ಮಂಡಿಸುವ ಬಜೆಟ್‌ನಲ್ಲಿ ಘನತೆವೆತ್ತ ರಾಷ್ಟ್ರಪತಿಗಳ ಭಾಷಣದ ಮೇಲೆ ಎರಡು ದಿವಸಗಳ ಕಾಲ ಏನು ಚರ್ಚೆ ನಡೆದಿದೆ. ಅದರ ಬಗ್ಗೆ ಎಷ್ಟು ಹಣ ಕೊಡುತ್ತೀರೆಂಬುದನ್ನು ಕಾದು ನೋಡುತ್ತಿದ್ದೇವೆ. ಇದರಲ್ಲಿ ಬಹಳಷ್ಟು ವಿಷಯಗಳಿವೆ. ಅದಕ್ಕೆಲ್ಲಾ ನಾನು ವಿವರಣೆ ಕೇಳುತ್ತಿಲ್ಲ. ಒಂದು ಮಾತು ಏನೆಂದರೆ, this is important. ಮೊದಲನೇ ಸಲ ರಾಷ್ಟ್ರಪತಿಯವರು ಭಾಷಣ ಮಾಡಿದ್ದಾರೆ. ಕೊಟ್ಟಿದ್ದಾರೆ, ಅದರ ಬಗ್ಗೆ ಚರ್ಚೆಯಾಗಿದೆ. ಸದನದಲ್ಲಿ ಏನು ಚರ್ಚೆಯಾಗಿದೆ, ಅದನ್ನು ಗಮನದಲ್ಲಿಟ್ಟುಕೊಂಡು ಬಜೆಟ್‌ನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಪಬ್ಲಿಕ್ ಸೆಕ್ಟಾರ್‌ಗೆ ಸಂಬಂಧಪಟ್ಟ ಪ್ರಾಪರ್ಟಿ ನಮ್ಮ ಕೈತಪ್ಪಿ ಹೋಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಒಂದು ಮಾತನ್ನು ಹೇಳಬೇಕು. Rural part of karnataka is suffering for want of infrastructure. ದಯಮಾಡಿ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಲೇಬೇಕು. ಅದನ್ನು ಅಚೀವ್ ಮಾಡದೆ ಇವೆಲ್ಲವನ್ನೂ ಏತಕ್ಕಾಗಿ ನೀವು ಅಭಿವೃದ್ಧಿ ಮಾಡುತ್ತಿದ್ದೀರಿ. ಯಾರಿಗಾಗಿ ಮಾಡುತ್ತಿದ್ದೀರಿ? ಇದು ಭವಿಷ್ಯದಲ್ಲಿ ಬರುವ ಮಕ್ಕಳಿಗಾಗಿ ಮಾಡುವ ವಿಚಾರ. ಆದ್ದರಿಂದ, ಆ ವಿಚಾರದಲ್ಲೂ ಕೂಡ ಆ ಕುರಿತಂತೆ ಘೋಷಣೆ ಮಾಡಬೇಕು.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಕೃಷ್ಣಪ್ಪನವರು ಒಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಇಂಗ್ಲೀಷ್‌ನವರು ಈ ಹಿಂದೆ ಸ್ಥಾಪಿಸಿರುವ ಹೆಚ್‌ಎಂಟಿ, ಐಟಿಐ, ಬಿಇಎಲ್, ಇಂತಹ ಪಬ್ಲಿಕ್ ಸೆಕ್ಟಾರ್ ಕಂಪನಿಗಳಿಗೆ ಸರ್ಕಾರಿ ಜಾಗಗಳನ್ನು ಕೊಟ್ಟಿದ್ದೇವೆ. ಅವರುಗಳಿಗೆ ಕರ್ನಾಟಕ ಸರ್ಕಾರ ಜಾಗ ಕೊಟ್ಟಿಲ್ಲ. ಆ ಜಾಗವನ್ನು ಅವರು ರಿಯಲ್ ಎಸ್ಟೇಟ್ ಮಾಡಿಕೊಂಡು ಯಾರ‍್ಯಾರಿಗೋ ಮಾರುತ್ತಿದ್ದಾರೆ. ಅವರಲ್ಲಿ ಬೇಕಾದಷ್ಟು ರಾಜಕಾರಣಿಗಳಿದ್ದಾರೆ, ಆ ಜಾಗವನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ : ಅದರ ಬಗ್ಗೆ ತನಿಖೆಯಾಗಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ತಾವು ಬೆಳಗಾವಿ ವಿಮಾನ ನಿಲ್ದಾಣದ ಬಗ್ಗೆ ಹೇಳಿದ್ದೀರಿ. ಈಗಾಗಲೇ ಬೆಳಗಾವಿ ವಿಮಾನ ನಿಲ್ದಾಣವನ್ನು ವಿಸ್ತರಿಸಲು 15 ಕೋಟಿ ರೂಪಾಯಿಗಳಷ್ಟು ಹಣವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡುತ್ತಿದೆ. ಕಾಮಗಾರಿ ಕೂಡ ಪ್ರಾರಂಭವಾಗಿದೆ. ದಯವಿಟ್ಟು ರಾಜ್ಯ ಸರ್ಕಾರದ ಕಡೆಯಿಂದ ಇನ್ನೂ ಹಣ ಬಿಡುಗಡೆಯಾಗಿಲ್ಲ. ನಾಳೆ 20ನೇ ತಾರೀಖಿನಂದು ಏನು ಬಜೆಟ್ ಮಂಡಿಸುವವರಿದ್ದೀರಿ, ರಾಜ್ಯ ಸರ್ಕಾರದ ಕಡೆಯಿಂದ ಅದಕ್ಕೆ ಹಣ ಬಿಡುಗಡೆಯಾಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಡಾ|| ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಟೊಮ್ಯಾಟೊಗೆ ಬೆಂಬಲ ಬೆಲೆ ಘೋಷಿಸಿದ್ದೇವೆ, ಈಗಾಗಲೇ ಬಹಳಷ್ಟು ಕಡೆಗಳಲ್ಲಿ ಕೊಟ್ಟಿದ್ದೇವೆ. ಆದರೆ, ಕೆಲವು ಕಡೆಗಳಲ್ಲಿ ವಿತರಣೆಯಾಗಿಲ್ಲವೆಂಬ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಮುಖ್ಯವಾಗಿ, ತಮಗೆ ತಿಳಿದಿರುವಂತೆ, ಕೋಲಾರ ಜಿಲ್ಲೆಯಲ್ಲಿ ಕೋಲಾರ ಮತ್ತು ಚಿಂತಾಮಣಿ ಎ.ಪಿ.ಎಂ.ಸಿ. ಮಾರುಕಟ್ಟೆಗಳಲ್ಲಿ ಬಹಳಷ್ಟು ಪ್ರಮಾಣದಲ್ಲಿ ಟೊಮ್ಯಾಟೊ ಬಂದು ಬೇರೆ ಕಡೆಗಳಿಗೆ ಹೋಗುತ್ತದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ 24 ಗಂಟೆಗಳಲ್ಲಿ ವಿತರಿಸುತ್ತೇವೆಂದು ಏನು ಘೋಷಣೆ ಮಾಡಿದರು. ಅದು ಇನ್ನು ಜಾರಿಯಾಗಿಲ್ಲ. ಈಗಾಗಲೇ 2–3 ದಿವಸಗಳಾಗಿವೆ, ನಯಾಪೈಸೆಯೂ ವಿತರಣೆಯಾಗಿಲ್ಲ. ಅದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು.

ಶ್ರೀ ನೆಲ. ನರೇಂದ್ರಬಾಬು : ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬ್ಯಾಟರಾಯನಪುರದಲ್ಲಿ ತರಕಾರಿ ಸಗಟು ಮಾರುಕಟ್ಟೆ ಶಂಕುಸ್ಥಾಪನೆಯಾಗಿ ಸುಮಾರು ವರ್ಷಗಳಾಯಿತು. ನನಗೆ ಬಹಳ ನೋವಾಗುತ್ತದೆ. ಇಡೀ ರಾಜ್ಯಕ್ಕಷ್ಟೇ ಅಲ್ಲದೆ, ಹೊರರಾಜ್ಯ ಮತ್ತು ಹೊರದೇಶಗಳಿಗೆ ರಫ್ತು ಮಾಡತಕ್ಕಂಥ, ತರಕಾರಿ ಶೇಖರಣೆ ಮತ್ತು ಮಾರುಕಟ್ಟೆಗೆ ಬೇಕಾದ ವ್ಯವಸ್ಥೆಯನ್ನು ನಾವು ಇನ್ನೂ ಕ್ರಿಯೇಟ್ ಮಾಡುವುದರಲ್ಲಿ ವಿಫಲರಾಗಿದ್ದೇವೆ. ದಯಮಾಡಿ, ಇದಕ್ಕೆ ಸಂಬಂಧಿಸಿದಂತೆ ಬಹಳಷ್ಟು ವಿಚಾರಗಳನ್ನು ಡಾ|| ಅಬ್ದುಲ್ ಕಲಾಂರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ, ಇದನ್ನು ಮಾಡುವುದಕ್ಕೆ ವಿಫಲರಾಗಿದ್ದೇವೆ. ಆದುದರಿಂದ, ಅದರ ಬಗ್ಗೆ ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಕೃಷ್ಣಪ್ಪನವರು ಬಹಳ ಹಿರಿಯರಾಗಿದ್ದಾರೆ, ಅವರಿಗೆ ಬಹಳ ಅನುಭವ ಇದೆ. ಈಗ.......

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅನುಭವ ಎಂದರೆ ಯಾವುದರಲ್ಲಿ?

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ : ಅದು ಯಾವ ತರಹ ಎಂದು ಅವರಿಗೇ ಗೊತ್ತಿರಬಹುದು!

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇದು ಬಹಳ ಅವರು mis-chief. ಪ್ರಸ್ತಾಪ ಮಾಡಿದ ವಿಷಯ ದೃಷ್ಟಿಯಲ್ಲಿಟ್ಟುಕೊಂಡು, ಮಾರ್ಮಿಕವಾಗಿ ಅವರಿಗೆ ಬಹಳ ಅನುಭವ ಇದೆ ಎಂದರೆ ಏನರ್ಥ? ಅವರಿಗೆ ಆ ವಿಷಯದಲ್ಲಿ ಅನುಭವ ಎಂದು ಅರ್ಥವೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಹಾಗಲ್ಲ. ಅವರಿಗೆ ಬೆಂಗಳೂರು ನಗರದ ಶಾಸಕರಾಗಿ ದೀರ್ಘವಾದ ಅನುಭವ ಇದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನೀವು ನಮಗಿಂತ ಬುದ್ಧಿವಂತರು ಎಂದು ನಾವೆಲ್ಲರೂ out right concede ಮಾಡಿಕೊಂಡಿದ್ದೇವೆ. ಆದರೆ ನೀವು ಹೀಗೆ ಮಾಡಿದರೆ ಹೇಗೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನೀವು ಆ ವಿಷಯದ ಬಗ್ಗೆ ಚರ್ಚೆ ಏನು ಮಾಡಿದಿರಿ, ಅಲ್ಲೇ ಪಕ್ಕದಲ್ಲೇ ಇನ್ನೊಬ್ಬ ಸದಸ್ಯರಾದ ಮಾನ್ಯ ರೋಷನ್ ಬೇಗ್‌ರವರು ಏನು ವಿಷಯವನ್ನು ಹೇಳಿದರು. ಇವತ್ತು ಈ ವಿಷಯದಲ್ಲಿ ಯಾವ್ಯಾವ ಸರ್ಕಾರಗಳಲ್ಲಿ ಏನೇನು ತೀರ್ಮಾನಗಳಾಗಿವೆ

ಎನ್ನುವುದನ್ನು ನಾನಿಲ್ಲಿ ವಿವರವಾಗಿ ಹೇಳುವುದು ಬೇಡ ಎಂದು ನಾನು ಅದನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡಲಿಲ್ಲ. ಹಲವಾರು ವಿಷಯಗಳ ಬಗ್ಗೆ ತೀರ್ಮಾನಗಳನ್ನು ಮಾಡುವಾಗ ತಪ್ಪುಗಳು ಕೆಲವು ಆಗಿರುತ್ತವೆ. ಅದರ ಬಗ್ಗೆ ನಾನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ಅದನ್ನು ಸರಿಪಡಿಸುವುದು ಹೇಗೆ ಎನ್ನುವುದರ ಬಗ್ಗೆ ನಾನು ಇಲ್ಲಿ ಹೇಳುವುದಕ್ಕಿಂತ. ಅದನ್ನು ಮುಂದಿನ ದಿನಗಳಲ್ಲಿ ಸರಿಪಡಿಸುವುದಕ್ಕೆ ಪ್ರಯತ್ನಿಸುತ್ತೇವೆ. ಇವತ್ತು ನಮ್ಮ public sector ಉದ್ಯಮಗಳನ್ನೇನು ಮಾರಲಿಕ್ಕೆ ಹೊರಟಿದ್ದಾರೆ. ಅದರ ಬಗ್ಗೆ ನಮ್ಮ ಸರ್ಕಾರ ಸರ್ಕಾರದ ಆಸ್ತಿ ಉಳಿಸಬೇಕು ಎನ್ನುವಂತಹ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತದೆ. ಇವತ್ತು ಸ್ವೇಚ್ಛಾಚಾರವಾಗಿ ಏನು ತೀರ್ಮಾನಗಳು ಕೆಲವು ಆಗಿವೆ, ಅಂತಹದ್ದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಕೊಡಲಿಕ್ಕೆ ನಾನು ಬಯಸುತ್ತೇನೆ. ಲ್ಯಾಂಡ್ ವಿಷಯದಲ್ಲೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಲ್ಯಾಂಡ್ ವಿಷಯದಲ್ಲಿ ಹಲವಾರು ರೀತಿಯ ಚರ್ಚೆಗಳನ್ನು ಮಾಡಬೇಕೆಂದರೆ ಅದಕ್ಕೆ ಇನ್ನೊಂದು ದಿವಸ ಬೇಕಾಗುತ್ತದೆ. ಆದ್ದರಿಂದ ಅವೆಲ್ಲಾ ಈಗ ಬೇಡ, ಅದರ ಬಗ್ಗೆ ಈಗ ಚರ್ಚೆ ಮಾಡುವುದು ಬೇಡ. ಅದೇ ರೀತಿ ಇವತ್ತೇನು ಟೊಮೆಟೋ ವಿಷಯ ಪ್ರಸ್ತಾಪ ಮಾಡಿದರು, ಅದರ ಬಗ್ಗೆ ನನ್ನ ಗಮನಕ್ಕೆ ಬಂದ ತಕ್ಷಣ ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ರೈತರು ಬೆಳೆದಂತಹ ಬೆಳೆಗೆ ಬೆಲೆ ಸಿಗದೆ, ಅವರಿಗೆ ತೊಂದರೆಯಾಗಿ ಅವರು ಸಂಕಷ್ಟಕ್ಕೆ ಒಳಗಾಗಬಾರದು, ಇವತ್ತು ಏನಾದರೂ ಅಂಥಹ ಸಂದರ್ಭ ಬಂದಾಗ ತಕ್ಷಣವೇ ಕ್ರಮ ಕೈಗೊಳ್ಳುತ್ತೇವೆ. ಇವತ್ತು ಸರ್ಕಾರದ ಅಧಿಕಾರಿಗಳಿಗೂ ಸೂಚನೆ ಕೊಟ್ಟಿದ್ದೇನೆ. ಆ ತರಹ ಹಣ ಬಂದಿಲ್ಲದೆ ಇದ್ದರೆ, ತಕ್ಷಣವೇ ಹಣ ಬಿಡುಗಡೆ ಮಾಡಲಿಕ್ಕೆ ಏರ್ಪಾಡು ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ರೈತರುಗಳಿಗೆ ಇವತ್ತು ಸದನದ ಮುಖಾಂತರ, ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಮನವಿ ಮಾಡಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ಸ್ವಲ್ಪ ಉದ್ವೇಗದಲ್ಲಿ ತೀರ್ಮಾನಗಳನ್ನು ಮಾಡಬೇಡಿ. ಸರ್ಕಾರದ ಗಮನಕ್ಕೆ ಬಂದ ತಕ್ಷಣವೇ ನಾವು ಅದಕ್ಕೆ ಸ್ಪಂದಿಸುವುದಕ್ಕೆ ಸಿದ್ಧರಿದ್ದೇವೆ. ಇನ್ನು ಬೆಳಗಾವಿ ಏರ್‌ಪೋರ್ಟ್ ಬಗ್ಗೆ ಹೇಳುವುದಾದರೆ, ಬಜೆಟ್ ನಾಡಿದ್ದು ಮಂಡನೆ ಮಾಡಲಿರುವುದರಿಂದ, ಕೆಲವು ವಿಷಯಗಳನ್ನು ನಾನು ಇಲ್ಲಿ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಅದರ ಬಗ್ಗೆ 20ನೇ ತಾರೀಖಿನವರೆಗೂ ತಾವು ನಿರೀಕ್ಷೆ ಮಾಡತಕ್ಕಂಥದ್ದು ಸೂಕ್ತ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ರಾಜೇಂದ್ರನ್‌ರವರು ಬಹಳ ಚೆನ್ನಾಗಿ ತಮಾಷೆಯಾಗಿ ಸದನದಲ್ಲಿ ಮಾತನಾಡುತ್ತಾರೆ. ಅವರು ಮಾತನಾಡಬೇಕಾದರೆ, ಹಾಸ್ಯ ಚಟಾಕಿ ಹಾರಿಸುವುದರ ಜೊತೆಗೆ ಅದರಲ್ಲಿ ಏನು ಅವರ ಸಂದೇಶ ಕೊಡಬೇಕಾಗಿತ್ತೋ ಅಂತಹದ್ದಕ್ಕೂ ಅವರು ಇವತ್ತು ಚಾಲನೆ ಕೊಡುತ್ತಾರೆ. ಅವರು KGF ಬಗ್ಗೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಸುವರ್ಣ ಕರ್ನಾಟಕ ಇರುವುದು ಕರ್ನಾಟಕದಲ್ಲಿ ಅಲ್ಲ, ಬೆಂಗಳೂರಿನಲ್ಲಿ ಅಲ್ಲ, KGF ನಲ್ಲಿ ಎಂದು ಅವರು ಹೇಳಿದರು. ಆ ಮಾತನ್ನು ಅವರು ಹಿಂದೆ ಹೇಳಿದ್ದರೆ, ಅದನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಇವತ್ತು ನಿಮ್ಮನ್ನು full ಖಾಲಿ ಮಾಡಿ ಬೀದಿಯಲ್ಲಿ ನಿಲ್ಲಿಸಿದ್ದಾರೆ. ಈಗ ಸುವರ್ಣ ಕರ್ನಾಟಕ KGF ನಲ್ಲಿದೆ ಎಂದರೆ ಯಾರೂ ನಂಬುವುದಕ್ಕಾಗುವುದಿಲ್ಲ, ನೀವೂ ನಂಬುವುದಕ್ಕಾಗುವುದಿಲ್ಲ. ಆದ್ದರಿಂದ ಅಲ್ಲಿ ಏನು ನಮ್ಮ ಕಾರ್ಮಿಕರ ಸಮಸ್ಯೆ ಇದೆ, ಆ ಸಮಸ್ಯೆ ಬಗ್ಗೆ ಕೇಂದ್ರ ಸರ್ಕಾರದ ಜೊತೆಗೆ ನಾನು ಪ್ರಸ್ತಾಪ ಮಾಡುತ್ತೇನೆ. ಅದರ ಜೊತೆಗೆ ಬೇರೆ ಕೈಗಾರಿಕೆಗಳನ್ನು ಅಲ್ಲಿಗೆ ತರಲಿಕ್ಕೆ ಸಾಧ್ಯವಾದರೆ, ಉದ್ಯಮಿಗಳ ಮನವೊಲಿಸಿ ಅಲ್ಲಿ ಕೆಲವೊಂದು ಉದ್ಯಮಗಳನ್ನು ತರುವುದಕ್ಕೂ ನಾವು ಚಾಲನೆ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಸುದೀರ್ಘವಾಗಿ ತಾವು ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ಬಹಳ ಪ್ರಾಮುಖ್ಯವಾದ 2–3 ವಿಚಾರಗಳನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಗಡಿ ನಾಡಿನ ಸಮಸ್ಯೆ ಬಗ್ಗೆ ಹಿಂದಿನ ಸರ್ಕಾರಕ್ಕೆ ವರದಿಯೊಂದನ್ನು ನೀಡಲಾಗಿದೆ. ಆ ವರದಿಯನ್ನು ತಾವು ಒಪ್ಪಿದ್ದೀರಾ ಬಿಟ್ಟಿದ್ದೀರಾ ಎಂಬುದನ್ನು ಹೇಳಬೇಕು. ಎರಡನೆಯದಾಗಿ, ಸರೋಜಿನಿ ಮಹಿಷಿ ವರದಿ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಸಮಗ್ರ ಕರ್ನಾಟಕ ಎಂದರೆ, ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಕೊಡಗು ಎಲ್ಲವೂ ಸೇರುತ್ತವೆ. ಭಾವನಾತ್ಮಕವಾಗಿ ಎಲ್ಲಾ ಭಾಗಗಳು ಒಂದಾಗಬೇಕು. ಡಾ॥ ನಂಜುಂಡಪ್ಪನವರ ವರದಿ ಬಗ್ಗೆ ಮತ್ತು ಹೈದರಾಬಾದ್–ಕರ್ನಾಟಕದ ಅನೇಕ ಸಮಸ್ಯೆಗಳ ಬಗ್ಗೆ ಮತ್ತು ಕೊಡಗಿನ ಸಮಗ್ರ ಇತಿಹಾಸದ ಬಗ್ಗೆ ನಾನು ಹೇಳಿದೆ. ಅದರ ಬಗ್ಗೆಯೂ ತಾವು ಗಮನ ಹರಿಸಲಿಲ್ಲ. ಆ ವಿಚಾರದಲ್ಲಿ ತಾವು ಮಾತನಾಡಲಿಲ್ಲ. ಅನೇಕ ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಆದರೆ ಈ ವಿಚಾರಗಳನ್ನು ಮಾತ್ರ ಬಿಟ್ಟಿದ್ದೀರಿ. ಸುವರ್ಣ ಕರ್ನಾಟಕ ಎಂದರೆ, ಐವತ್ತು ವರ್ಷಗಳ ಕಾಲ ಈ ಕರ್ನಾಟಕ ರಾಜ್ಯ ಬೆಳೆದು ಬಂದಿರತಕ್ಕಂಥ ಪರಿಸ್ಥಿತಿಯಲ್ಲಿ ಬಹಳ ಪ್ರಾಮುಖ್ಯವಾಗಿ ಹೊರನಾಡು ಕನ್ನಡಿಗರು, ಗಡಿನಾಡು ಕನ್ನಡಿಗರು, ಬೆಳಗಾವಿಯ ಸಮಗ್ರ ಅಭಿವೃದ್ಧಿ ಬೀದರ್ ಅಭಿವೃದ್ಧಿ ಎಲ್ಲವನ್ನೂ ಬಹಳ ಸವಿಸ್ತಾರವಾಗಿ ನಾನು ಪ್ರಸ್ತಾಪ ಮಾಡಿದೆ. ಅದರ ಬಗ್ಗೆ ತಾವು ತಮ್ಮ ಮಾತಿನಲ್ಲಿ ಏನನ್ನೂ ಹೇಳಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಬರಗೂರು ರಾಮಚಂದ್ರಪ್ಪ ನವರ ವರದಿಯಲ್ಲಿ 33 ವಿಷಯಗಳನ್ನೇನು ಚರ್ಚೆ ಮಾಡಿದ್ದಾರೆ ಮತ್ತು 15 ವಿಷಯಗಳ ಬಗ್ಗೆ ತಾವೇನು ಒಂದು ವರದಿ ಕೊಟ್ಟಿದ್ದೀರೋ, ಆ ವರದಿಗಳ ಬಗ್ಗೆ ಹಾಗೂ ಸರೋಜಿನಿ ಮಹಿಷಿ ವರದಿ, ಅದು 25 ವರ್ಷಗಳಿಗಿಂತಲೂ ಹಳೆಯದು, ಬಹುಶಃ 1983ನೇ ಇಸವಿಯಲ್ಲಿ ಅವರು ಕೊಟ್ಟಿದ್ದಾರೆ. ಅವುಗಳ ಬಗ್ಗೆ ನಾನು ಗಮನ ಹರಿಸುತ್ತೇನೆ. ಆದರೆ 1983ನೇ ಇಸವಿಯಲ್ಲಿ ಅವರು ಕೊಟ್ಟಿರತಕ್ಕಂಥ ವರದಿಗೂ, ಇವತ್ತು ಬೆಂಗಳೂರು ನಗರದಲ್ಲಿ ಆಗಿರತಕ್ಕಂಥ ಬದಲಾವಣೆಗೂ ಹಲವಾರು ರೀತಿಯ ಗ್ಯಾಪ್ ಏನಿದೆ, ಇದರ ಬಗ್ಗೆ ಮತ್ತೆ ನೋಡುತ್ತೇನೆ. ಈ ಹೊಸ ಸರ್ಕಾರ ಬಂದು ಕೇವಲ 40 ದಿವಸಗಳು ಮಾತ್ರ ಆಗಿವೆ. ನಮಗೆ ಸ್ವಲ್ಪ ಅವಕಾಶ ಬೇಕು. ಗಡಿನಾಡು ವಿಷಯಗಳ ಬಗ್ಗೆ ಆ ಸ್ಥಳಗಳಲ್ಲಿ ಇರತಕ್ಕಂಥ ನಮ್ಮ ಭಾಷೆ, ಶಾಲೆಗಳ ವಿಷಯದಲ್ಲಿ ಈಗಾಗಲೇ ನಾನು ಕೆಲವೊಂದು ಮಾಹಿತಿಗಳನ್ನು ಪಡೆದಿದ್ದೇನೆ, ನಾವು ಅದರ ಬಗ್ಗೆ ಗಮನ ಹರಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಷ್ಟ್ರಪತಿಗಳು ತಮ್ಮ ಭಾಷಣದ ಬಗ್ಗೆ ಕರ್ನಾಟಕ ಲೆಜಿಸ್ಲೇಚರ್‌ನಲ್ಲಿ ಡಿಸ್ಕಷನ್ ಆಗಬೇಕು ಎಂದು ultimate ಆಗಿ ತಮ್ಮ ಭಾಷಣದ conclusion ನಲ್ಲಿ ಹೇಳಿದ್ದಾರೆ. ನಾವು ಸುಮಾರು ಎರಡು ದಿನಗಳ ಕಾಲ ಸತತವಾಗಿ ಇದರ ಬಗ್ಗೆ ಡಿಸ್ಕಷನ್ ಮಾಡಿದ್ದೇವೆ. complete ಆಗಿ ನಾವು ಕಳೆದ ಎರಡು ದಿನಗಳ ಕಾಲ ಮಾಡಿರತಕ್ಕಂಥ ಚರ್ಚೆಯ synopsis ಅನ್ನು ಅಥವಾ ಅದರ briefing ಅನ್ನು ಘನತೆವೆತ್ತ ರಾಷ್ಟ್ರಪತಿಗಳಿಗೆ ಕಳುಹಿಸುವಂತಹ ಕೆಲಸವನ್ನು ನಾವು ಮಾಡಿದರೆ these entire things will be focused. ಅಂದರೆ ಈಗ ಅವರೇನು ಆಸೆಯನ್ನು ಇಟ್ಟುಕೊಂಡಿದ್ದಾರೆ. ನಾನು ಇಂತಹ

ಸಲಹೆಗಳನ್ನೆಲ್ಲಾ ಕರ್ನಾಟಕಕ್ಕೆ ಕೊಟ್ಟಿದ್ದೇನೆ, ಅವು ಏನಾಯಿತು ಎಂದು ಇದನ್ನು ಬೇರೆ ರಾಜ್ಯಗಳಿಗೆ ಕೊಡತಕ್ಕಂಥ ಸಂದರ್ಭಗಳು ಬಂದರೆ, ಅವರು ನೋಡಬಹುದು. ಏಕೆಂದರೆ, ಈ ತರಹದ precedent is not set up anywhere. For the first time, the discussions have been done here. ಮಾನ್ಯ ಮುಖ್ಯಮಂತ್ರಿಗಳು,........

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಅವರು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಒಂದು ತಾಪತ್ರಯ ಇದೆ. ಇವರೆಲ್ಲರೂ participate ಮಾಡಿದರು, ನಾವು ಯಾರು ಮಾಡಲಿಲ್ಲ. ಇದು President of India ಗೆ ಹೇಗೆ ಗೊತ್ತಾಗಬೇಕು?

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, I think cabinet ನಲ್ಲಿ ತೀರ್ಮಾನವಾದ ನಂತರವೇ ಘನತೆವೆತ್ತ ರಾಷ್ಟ್ರಪತಿಗಳು ಭಾಷಣ ಮಾಡಲಿಕ್ಕೆ ಇಲ್ಲಿಗೆ ಆಹ್ವಾನಿಸಲಾಗಿದೆ. Sir, better you take a decision and do the needful.

ಅಧ್ಯಕ್ಷರು : ಆಯಿತು. ಈಗ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಪ್ರಸ್ತಾವನೆಗೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ. ಪ್ರಸ್ತಾವನೆಯನ್ನು ಘನತೆವೆತ್ತ ರಾಷ್ಟ್ರಪತಿಯವರಿಗೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು ಸೋಮವಾರ ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ರಾತ್ರಿ 9 ಗಂಟೆ 27 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 20ನೇ ಮಾರ್ಚ್ 2006ರಂದು ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸೇರಲು ತೀರ್ಮಾನಿಸಿತು)